# ಇಂದು ಹೊಸಹಳ್ಳಿ-ಕಬ್ಬನ್ ಪಾರ್ಕ್ ಮೆಟ್ರೊ ಸ್ಥಗಿತ ಇಲ್ಲ

• ಉದಯವಾಹಿನಿ, ಬೆಂಗಳೂರು


ನಮ್ಮ ಮೆಟ್ರೊ ನೇರಳೆ ಮಾರ್ಗದಲ್ಲಿ ಮೇ 10ರ ಭಾನುವಾರ ಬೆಳಿಗ್ಗೆ 7ರಿಂದ ಎರಡು ಗಂಟೆ ಭಾಗಶಃ ಸಂಚಾರ ಸ್ಥಗಿತಗೊಳಿಸುವ ಸುತ್ತೋಲೆಯನ್ನು ಬಿಎಂಆರ್‌ಸಿಎಲ್ ವಾಪಸ್ ಪಡೆದಿದೆ.

ಭಾನುವಾರ ನಗರದಲ್ಲಿ ಅನೇಕ ಕಾರ್ಯಕ್ರಮಗಳು ಇರುವುದರಿಂದ ಈ ನಿರ್ಧಾರಕ್ಕೆ ಬರಲಾಗಿದೆ ಎಂದು ತಿಳಿಸಿದೆ. ಮೆಜೆಸ್ಟಿಕ್‌ನ ನಾಡಪ್ರಭು ಕೆಂಪೇಗೌಡ ನಿಲ್ದಾಣ ಮತ್ತು ಸೆಂಟ್ರಲ್ ಕಾಲೇಜಿನ ಸರ್ ಎಂ.ವಿಶ್ವೇಶ್ವರಯ್ಯ ಮೆಟ್ರೊ ನಿಲ್ದಾಣಗಳ ನಡುವೆ ನಿರ್ವಹಣಾ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಭಾನುವಾರ ಬೆಳಿಗ್ಗೆ 7ರಿಂದ 9ರವರೆಗೆ ಹೊಸಹಳ್ಳಿ ಬಾಲಗಂಗಾಧರನಾಥ ಸ್ವಾಮೀಜಿ ನಿಲ್ದಾಣ ಮತ್ತು ಕಬ್ಬನ್ ಪಾರ್ಕ್ ಮೆಟ್ರೊ ನಿಲ್ದಾಣಗಳ ನಡುವೆ ಮೆಟ್ರೊ ಸಂಚಾರ ತಾತ್ಕಾಲಿಕವಾಗಿ ಸ್ಥಗಿತಗೊಳ್ಳಲಿದೆ ಎಂದು ಸುತ್ತೋಲೆಯಲ್ಲಿ ತಿಳಿಸಲಾಗಿತ್ತು. ಸುತ್ತೋಲೆ ಹಿಂದಕ್ಕೆ ಪಡೆದಿರುವುದಲ್ಲದೇ, ಸಂಚಾರದ ಆರಂಭದ ಸಮಯವನ್ನು ಬದಲಾಯಿಸಿದೆ.


ಉದಯವಾಹಿನಿ ಚಿತ್ರ

ಪ್ರತಿ ಭಾನುವಾರ ಬೆಳಿಗ್ಗೆ 7ಕ್ಕೆ ಮೆಟ್ರೊ ಸಂಚಾರ ಆರಂಭವಾಗುತ್ತಿತ್ತು. ವಿವಿಧ ಕಾರ್ಯಕ್ರಮಗಳಿಗೆ ಜನರು ಪ್ರಯಾಣಿಸುವ ನಿರೀಕ್ಷೆ ಇರುವುದರಿಂದ ಈ ಭಾನುವಾರ ಬೆಳಿಗ್ಗೆ 5ಕ್ಕೆ ಸಂಚಾರ ಆರಂಭಿಸಲಾಗುವುದು ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

# ವಿಮಾನ ನಿಲ್ದಾಣದಿಂದ ಆಂಧ್ರಕ್ಕೆ ದಶಪಥ: ಸಚಿವ ಕೆ.ಎಚ್.ಮುನಿಯಪ್ಪ


ಉದಯವಾಹಿನಿ ಚಿತ್ರ

• ಉದಯವಾಹಿನಿ, ದೇವನಹಳ್ಳಿ

ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಆಂಧ್ರಪ್ರದೇಶದ ಪೆನುಗೊಂಡವರಗೆ 2,400 ಕೋಟಿ ವೆಚ್ಚದಲ್ಲಿ ದಶಪಥ ನಿರ್ಮಾಣ ಕಾಮಗಾರಿ ಮುಂಬರುವ ಮಾರ್ಚ್‌ನಿಂದ ಆರಂಭಗೊಳ್ಳಲಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಚ್.ಮುನಿಯಪ್ಪ ಹೇಳಿದ್ದಾರೆ. ಮುದಗುರ್ಕಿಯಲ್ಲಿ ಗ್ರಾಮಸ್ಥರ ಅಹವಾಲು ಆಲಿಸಿ ಮಾತನಾಡಿದ ಅವರು, ಬೆಂಗಳೂರು-ಮೈಸೂರು ಹೆದ್ದಾರಿ ಮಾದರಿಯಲ್ಲಿ ಕೆಂಪೇಗೌಡ ವಿಮಾನ ನಿಲ್ದಾಣ-ಪೆನುಗೊಂಡ ಹೆದ್ದಾರಿಯಲ್ಲಿ ಬರುವ ಎಲ್ಲಾ ಪ್ರಮುಖ ಗ್ರಾಮಗಳಲ್ಲಿ ಅಂಡರ್ ಪಾಸ್ ನಿರ್ಮಾಣವಾಗಲಿವೆ ಎಂದರು. ಅಪಘಾತ ತಾಣವಾಗಿರುವ ಮುದುಗುರ್ಕಿ ಗ್ರಾಮದ ಬಳಿ ಕೆಳ ಸೇತುವೆ ನಿರ್ಮಿಸುವಂತೆ ಗ್ರಾಮಸ್ಥರು ಮನವಿ ಸಲ್ಲಿಸಿದರು. ಮುದುಗುರ್ಕಿಯಿಂದ ಅವತಿವರಗೆ ರಸ್ತೆ ಬದಿ ಲಾರಿ ಸೇರಿದಂತೆ ಇತರ ವಾಹನಗಳ ನಿಲುಗಡೆಯಾಗದಂತೆ ನೋಡಿಕೊಳ್ಳಲು ಸೂಚಿಸಲಾಗುವುದು ಎಂದು ಭರವಸೆ ನೀಡಿದರು. ತಾತ್ಕಾಲಿಕವಾಗಿ ವಾಹನ ದಟ್ಟಣೆ ಸಮಸ್ಯೆಗೆ ಪರಿಹಾರ ಒದಗಿಸಲಾಗುವುದು. ಹೈಮಾಸ್ಟ್ ದೀಪಕ್ಕೂ ವ್ಯವಸ್ಥೆ ಮಾಡಲು ಸೂಚಿಸಲಾಗುವುದು ಎಂದರು.

# ಪಶು ಆಹಾರ ಮೂಟೆಗಳಲ್ಲಿತ್ತು 1.25 ಕೋಟಿ ಮೊತ್ತದ ಗಾಂಜಾ

• ಉದಯವಾಹಿನಿ, ಆನೇಕಲ್

ಪಶು ಆಹಾರದ ಮೂಟೆಗಳಲ್ಲಿ ಅಡಗಿಸಿ ಸಾಗಿಸುತ್ತಿದ್ದ 1.25 ಕೋಟಿ ಮೌಲ್ಯದ 250 ಕೆ.ಜಿ ಗಾಂಜಾವನ್ನು ಜಿಗಣಿ ಪೊಲೀಸರು ಶುಕ್ರವಾರ ವಶಪಡಿಸಿಕೊಂಡಿದ್ದಾರೆ. ಜಿಗಣಿ ಪೊಲೀಸ್ ಠಾಣೆ ವ್ಯಾಪ್ತಿಯ ಕೊಪ್ಪ ಗೇಟ್ ಬಳಿ ಪ್ರಾರ್ಥನಾ ಬೇಕರಿಯ ಮುಂಭಾಗ ಟ್ರಕ್‌ತಡೆದು ಪರಿಶೀಲಿಸಿದಾಗ ಪಶು ಆಹಾರದ ಮೂಟೆಗಳಲ್ಲಿ ಗಾಂಜಾ ಪತ್ತೆಯಾಗಿದೆ. ಟ್ರಕ್ ಚಾಲಕ ಬಿಹಾರದ ರಾಮಾಯಣ್ ಯಾದವ್ (56), ಸಹಾಯಕ ಚಾಲಕ ಮೊಹಮ್ಮದ್ ಸಬೀರ್ ಖಾನ್ (51) ಎಂಬುವರನ್ನು ಬಂಧಿಸಿದ್ದಾರೆ. ತನಿಖೆ ವೇಳೆ ಆರೋಪಿಗಳು ನೀಡಿದ ಮಾಹಿತಿ ಮೇರೆಗೆ ಕಿಂಗ್‌ಪಿನ್‌ಗಳಾದ ಬಿಹಾರದ ವಿನೋದ್ ಮತ್ತು ಒಡಿಶಾದ ಬಾಬು ಬಂಧನಕ್ಕೆ ಪೊಲೀಸರು ಬಿಹಾರಕ್ಕೆ ತೆರಳಿದ್ದಾರೆ.

ಛತ್ತೀಸಗಡದಿಂದ ಟ್ರಕ್‌ನಲ್ಲಿ ತಮಿಳುನಾಡಿನ ನಾಮಕಲ್‌ಗೆ ಗಾಂಜಾ ಸಾಗಿಸಲಾಗುತ್ತಿತ್ತು. ಟ್ರಕ್ ಬಿಹಾರದ ಮುಹಾಮ್ ಇಂಟರ್ ನ್ಯಾಷನಲ್ ಇಂಡೋ ಟ್ರಾನ್ಸ್‌ಪೋರ್ಟ್ ಕಂಪನಿಗೆ ಸೇರಿದೆ. ಒಡಿಶಾದ ಜಯಪುರ ಎಂಬಲ್ಲಿ ಮೇವಿನ ನಡುವೆ ಗಾಂಜಾ ಇಡಲಾಗಿತ್ತು ಎಂದು ಆರೋಪಿಗಳು ವಿಚಾರಣೆ ವೇಳೆ ಬಾಯ್ಬಿಟ್ಟಿದ್ದಾರೆ ಎಂದು ಜಿಗಣಿ ಪೊಲೀಸ್ ಇನ್‌ಸ್ಪೆಕ್ಟರ್ ಮಂಜುನಾಥ್ ತಿಳಿಸಿದ್ದಾರೆ. ಬೆಂಗಳೂರು ಗ್ರಾಮಾಂತರ ಪೊಲೀಸ್ ವರಿಷ್ಠಾಧಿಕಾರಿ ಚಂದ್ರಕಾಂತ್, ಎಎಸ್‌ಪಿ ಲಕ್ಷ್ಮೀನಾರಾಯಣ ಸ್ಥಳಕ್ಕೆ ಭೇಟಿ ನೀಡಿ ಮಾಹಿತಿ ಪಡೆದರು.

# ಅನಧಿಕೃತ ಸಿಮೆಂಟ್ ಘಟಕಕ್ಕೆ ಬೀಗ

• ಉದಯವಾಹಿನಿ, ಹೊಸಕೋಟೆ

ಪಿಡಿಒ ಸಹಿ ನಕಲಿ ಮಾಡಿ, ಸುಳ್ಳು ದಾಖಲೆ ಸೃಷ್ಟಿಸಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಒಂದು ವರ್ಷದಿಂದ ಅನಧಿಕೃತವಾಗಿ ನಡೆಸುತ್ತಿದ್ದ ಆಶೀರ್ವಾದ್ ಇಸ್ಪ್ರಾ ಕಾರ್ಪೊರೇಷನ್ ಸಿಮೆಂಟ್ ಘಟಕಕ್ಕೆ ಬೀಗ ಜಡಿಯಲಾಗಿದೆ. ಹೊಸಕೋಟೆ ತಾಲ್ಲೂಕು ಪಂಚಾಯತಿ, ದೊಡ್ಡಗಟ್ಟಿಗನಬ್ಬೆ ಗ್ರಾಮ ಪಂಚಾಯಿತಿ ಮತ್ತು ತಿರುಮಶೆಟ್ಟಿಹಳ್ಳಿ ಪೊಲೀಸ್ ಠಾಣೆ ಜಂಟಿಯಾಗಿ ಕಾರ್ಯಾಚರಣೆ ನಡೆಸಿ ಘಟಕವನ್ನು ಮುಚ್ಚಿಸಿ. ಘಟಕದ ಮಾಲೀಕ ವಸಂತ್ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ನಕಲಿ ಸಹಿ, ಸುಳ್ಳು ದಾಖಲೆ ಸೃಷ್ಟಿಸಿ ಆಶೀರ್ವಾದ್‌ಇನ್ಪ್ರಾಕಾರ್ಪೊರೇಷನ್ ಹೆಸರಿನಲ್ಲಿ ಸಿಮೆಂಟ್ ಮಿಕ್ಸ್ ಕಂಪನಿಯ ನಡೆಸುತ್ತಿರುವುದು ದೃಢಪಟ್ಟ ಹಿನ್ನೆಲೆ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಹೊಸಕೋಟೆ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಮಿನಿಪ್ಪ ತಿಳಿಸಿದರು.

# ವೃದ್ಧೆ ಅಡ್ಡಗಟ್ಟಿ ಸರಗಳ್ಳತನ ಇಬ್ಬರ ಸೆರೆ

• ಉದಯವಾಹಿನಿ, ಹಾರೋಹಳ್ಳಿ

ನಾಲ್ಕು ದಿನಗಳ ಹಿಂದೆ ಹಾರೋಹಳ್ಳಿ ಪಟ್ಟಣದಲ್ಲಿ ನಡೆದಿದ್ದ ವೃದ್ಧೆಯ ಚಿನ್ನದ ಮಾಂಗಲ್ಯ ಸರ ಕಳ್ಳತನ ಮತ್ತು ಆನೇಕಲ್‌ನಲ್ಲಿ ನಡೆದಿದ್ದ ದ್ವಿಚಕ್ರ ವಾಹನ ಕಳ್ಳತನದ ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ. ಬೆಂಗಳೂರಿನ ಕುವೆಂಪು ನಗರದ ಆಟೊ ಚಾಲಕ ಲೋಕೇಶ(41), ಆನೇಕಲ್ ತಾಲ್ಲೂಕು ಮಟ್ಟನಹಳ್ಳಿಯ ಲಾರಿ ಚಾಲಕ ರಮೇಶ್ ವಿ.(43) ಬಂಧಿತರು. ಲಕ್ಷ್ಮಮ್ಮ ಅವರನ್ನು ಅಡ್ಡಗಟ್ಟಿದ ಬೈಕ್‌ನಲ್ಲಿದ್ದ ಅಪರಿಚಿತರಿಬ್ಬರು, ಚಿನ್ನದ ಮಾಂಗಲ್ಯ ಸರ ಕಿತ್ತು ಪರಾರಿಯಾಗಿದ್ದರು. ಹಾರೋಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಬಂಧಿತರಿಂದ ಸುಮಾರು 4 ಲಕ್ಷ ಮೌಲ್ಯದ 26 ಗ್ರಾಂ ತೂಕದ ಚಿನ್ನದ ಮಾಂಗಲ್ಯ ಸರ, ಕೃತ್ಯಕ್ಕೆ ಬಳಸಿದ್ದ ಬೈಕ್ ವಶಪಡಿಸಿಕೊಳ್ಳಲಾಗಿದೆ. ಆರೋಪಿಗಳು ಈ ಬೈಕ್ ಅನ್ನು ಕೆಲವು ದಿನಗಳ ಹಿಂದೆ ಅನೇಕಲ್‌ನಲ್ಲಿ ಕಳ್ಳತನ ಮಾಡಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

## ಸಾರಿಗೆ ನಿಗಮದ ದ್ವಂದ್ವ ನಿಲುವಿಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ ಕರ್ನಾಟಕ ಹೈಕೋರ್ಟ್

# ಕೆಕೆಆರ್‌ಟಿಸಿ ನಿಗಮಕ್ಕೆ 25 ಸಾವಿರ ರೂ. ದಂಡ

• ಉದಯವಾಹಿನಿ, ಬೆಂಗಳೂರು




ರಸ್ತೆ ಅಪಘಾತ ಪ್ರಕರಣವೊಂದರಲ್ಲಿ ತನ್ನದೇ ತಪ್ಪನ್ನು ಮುಚ್ಚಿಟ್ಟು ನ್ಯಾಯಾಲಯಕ್ಕೆ ತಪ್ಪು ಮಾಹಿತಿ ನೀಡುವ ಮೂಲಕ ನ್ಯಾಯಾಲಯದ ಹಾದಿ ತಪ್ಪಿಸಲು ಪ್ರಯತ್ನಿಸಿದ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ (ಕೆಕೆಆರ್‌ಟಿಸಿ) ಕ್ರಮವನ್ನು ತೀವ್ರ ತರಾಟೆಗೆ ತೆಗೆದುಕೊಂಡಿರುವ ಕರ್ನಾಟಕ ಹೈಕೋರ್ಟ್, ನಿಗಮಕ್ಕೆ 25 ಸಾವಿರ ರೂ. ದಂಡ ವಿಧಿಸಿದೆ.

ಅಲ್ಲದೆ, ''ತನ್ನದೇ ಸಿಬ್ಬಂದಿಯ ತಪ್ಪನ್ನು ಒಪ್ಪಿಕೊಂಡು ಅವರ ವಿರುದ್ಧ ಶಿಸ್ತು ಕ್ರಮ ಜರುಗಿಸಿದ ಬಳಿಕವೂ ಸಂತ್ರಸ್ತರದ್ದೇ ತಪ್ಪೆಂದು ದ್ವಂದ್ವ ನಿಲುವು ಪ್ರದರ್ಶನ ಮಾಡುವುದರ ಮೂಲಕ ನ್ಯಾಯಾಂಗ ಪ್ರಕ್ರಿಯೆಯ ದುರುಪಯೋಗ ಮಾಡಿಕೊಳ್ಳಲಾಗಿದೆ,'' ಎಂದು ಅಸಮಾಧಾನ ವ್ಯಕ್ತಪಡಿಸಿದೆ.

ಅಪಘಾತಗಳ ಪರಿಹಾರ ನ್ಯಾಯಾಧಿಕರಣದ ಆದೇಶ ಪ್ರಶ್ನಿಸಿ ಕೆಕೆಆರ್‌ಟಿಸಿ ಸಲ್ಲಿಸಿದ್ದ ಮೇಲ್ಮನವಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಮತ್ತು ನ್ಯಾಯಮೂರ್ತಿ ಡಾ. ಚಿಲ್ಲಕೂರು ಸುಮಲತಾ ಅವರಿದ್ದ ವಿಭಾಗೀಯ ಪೀಠ ಈ ಆದೇಶ ನೀಡಿದೆ.

**ನಿಗಮದ ವಾದಕ್ಕೆ ನ್ಯಾಯಪೀಠ ಅಸಮಾಧಾನ:** ಅಪಘಾತಕ್ಕೆ ಸಂಬಂಧಿಸಿದಂತೆ ನಿಗಮವು ಈಗಾಗಲೇ ಆಂತರಿಕ ಶಿಸ್ತು ಕ್ರಮ ಕೈಗೊಂಡು ಅಪಘಾತಕ್ಕೆ ಕಾರಣನಾದ ಗುತ್ತಿಗೆ ಆಧಾರಿತ ಚಾಲಕನನ್ನು ಸೇವೆಯಿಂದ ವಜಾಗೊಳಿಸಿದೆ. ಅಲ್ಲದೆ, ನಿರ್ವಾಹಕನ ವಾರ್ಷಿಕ ವೇತನ ಬಡ್ತಿ ಕಡಿತಗೊಳಿಸಿದೆ. ಪ್ರಕರಣದಲ್ಲಿ ತನ್ನದೇ ನೌಕರರ ತಪ್ಪು ಎಂದು ಒಪ್ಪಿಕೊಂಡು ಶಿಕ್ಷೆ ನೀಡಿದೆ. ಹೀಗಿದ್ದರೂ ಮೃತರದ್ದೇ ತಪ್ಪು ಎಂದು ಹೈಕೋರ್ಟ್‌ನಲ್ಲಿ ವಾದಿಸಿರುವುದು ಸರಿಯಲ್ಲ, ಎಂದು ನ್ಯಾಯಪೀಠ ನಿಗಮದ ವಾದಕ್ಕೆ ಅಸಮಾಧಾನ ವ್ಯಕ್ತಪಡಿಸಿದೆ.

''ಒಂದೆಡೆ ನೌಕರರನ್ನು ವಜಾ ಮಾಡಿ, ಮತ್ತೊಂದೆಡೆ ಅಪಘಾತಕ್ಕೆ ಮೃತ ವ್ಯಕ್ತಿಯೇ ಕಾರಣನೆಂದು ಹೇಳುವುದು ದ್ವಂದ್ವ ನಿಲುವು ಮತ್ತು ಕಾನೂನುಬಾಹಿರ. ಅಲ್ಲದೆ, ನ್ಯಾಯಾಲಯಕ್ಕೆ ಬರುವ ದಾವೆದಾರರು ಶುದ್ಧ ಹಸ್ತದಿಂದ ಬರಬೇಕಾಗಿದ್ದು, ತಪ್ಪು ಮಾಹಿತಿ ನೀಡಿದಲ್ಲಿ ಯಾವುದೇ ಪರಿಹಾರ ಪಡೆಯುವುದಕ್ಕೆ ಅರ್ಹರಾಗಿರುವುದಿಲ್ಲ. ಈ ರೀತಿಯ ಕ್ರಮ ನ್ಯಾಯಾಂಗ ಪಾವಿತ್ರ್ಯತೆಗೆ ಧಕ್ಕೆ ತರುತ್ತದೆ, ಎಂದು ನ್ಯಾಯಾಲಯ ಹೇಳಿದೆ.

### ತಪ್ಪನ್ನು ಮುಚ್ಚಿಟ್ಟು ನ್ಯಾಯಾಲಯಕ್ಕೆ ತಪ್ಪು ಮಾಹಿತಿ

**ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮವು (ಕೆಕೆಆರ್‌ಟಿಸಿ) ರಸ್ತೆ ಅಪಘಾತವೊಂದರಲ್ಲಿ ತನ್ನ ತಪ್ಪನ್ನು ಮುಚ್ಚಿಟ್ಟು ನ್ಯಾಯಾಲಯಕ್ಕೆ ತಪ್ಪು ಮಾಹಿತಿ ನೀಡುವ ಮೂಲಕ ದಾರಿ ತಪ್ಪಿಸಲು ಯತ್ನಿಸಿದ್ದಕ್ಕಾಗಿ ಕರ್ನಾಟಕ ಹೈಕೋರ್ಟ್ ತೀವ್ರವಾಗಿ ತರಾಟೆಗೆ ತೆಗೆದುಕೊಂಡಿದೆ. ತನ್ನದೇ ಸಿಬ್ಬಂದಿಯ ತಪ್ಪನ್ನು ಒಪ್ಪಿಕೊಂಡು ಅವರ ವಿರುದ್ಧ ಈ ಹಿಂದೆ ಶಿಸ್ತು ಕ್ರಮ ಜರುಗಿಸಿದ್ದ ನಿಗಮ, ಬಳಿಕ ನ್ಯಾಯಾಲಯದಲ್ಲಿ ಸಂತ್ರಸ್ತರದ್ದೇ ತಪ್ಪೆಂದು ದ್ವಂದ್ವ ನಿಲುವು ತಳೆದಿರುವುದು ನ್ಯಾಯಾಂಗ ಪ್ರಕ್ರಿಯೆಯ ದುರುಪಯೋಗ ಎಂದು ನ್ಯಾಯಪೀಠ ಅಸಮಾಧಾನ ವ್ಯಕ್ತಪಡಿಸಿದೆ.**

**ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ:** ನಿಗಮವು ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರಕ್ಕೆ 25 ಸಾವಿರ ರೂ. ದಂಡ ಪಾವತಿಸಬೇಕು. ದಂಡದ ಮೊತ್ತವನ್ನು ಈ ಮೊಕದ್ದಮೆ ಹೂಡಲು ಕಾರಣರಾದ ಅಧಿಕಾರಿಗಳಿಂದಲೇ ವಸೂಲಿ ಮಾಡಬೇಕು. ಮುಂದಿನ ದಿನಗಳಲ್ಲಿ ಇಂತಹ ಪ್ರಕರಣಗಳಲ್ಲಿ ಆಂತರಿಕ ಶಿಸ್ತು ಕ್ರಮದ ಮಾಹಿತಿ ಕಡ್ಡಾಯವಾಗಿ ನ್ಯಾಯಾಲಯಕ್ಕೆ ಬಹಿರಂಗಪಡಿಸಬೇಕು ಮತ್ತು ಇಂತಹ ದ್ವಂದ್ವ ನಿಲುವುಗಳನ್ನು ತಡೆಗಟ್ಟಲು ನಿಗಮವು ಪ್ರತ್ಯೇಕ ಪರಿಶೀಲನಾ ಸಮಿತಿ ರಚಿಸಬೇಕು. ಈ ಸಂಬಂಧ ಸೂಕ್ತ ಸುತ್ತೋಲೆ ಹೊರಡಿಸಬೇಕು, ಎಂದು ನ್ಯಾಯಾಲಯ ಕೆಕೆಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕರಿಗೆ ನಿರ್ದೇಶನ ನೀಡಿದೆ.

ಕೆಕೆಆರ್‌ಟಿಸಿ ಪರ ವಾದಿಸಿದ ವಕೀಲರು, ''ಮೃತ ವ್ಯಕ್ತಿಯೇ ಬಸ್‌ನ ಬಾಗಿಲಲ್ಲಿ ನಿಂತು ನಿರ್ಲಕ್ಷ್ಯತನದಿಂದ ಪ್ರಯಾಣ ಮಾಡಿದ್ದಾರೆ. ಇದರಿಂದ ಘಟನೆ ನಡೆದಿದ್ದು, ನಿಗಮದಿಂದ ಯಾವುದೇ ತಪ್ಪು ನಡೆದಿಲ್ಲ,'' ಎಂದು ಹೇಳಿದ್ದರು. ಆದರೆ, ಘಟನೆ ಸಂಬಂಧ ನಿಗಮದ ಚಾಲಕ ಮತ್ತು ನಿರ್ವಾಹಕನ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ ಎಂದು ಹೈಕೋರ್ಟ್ ಪ್ರಶ್ನಿಸಿತ್ತು. ಅದಕ್ಕೆ ಉತ್ತರಿಸಿದ್ದ ವಕೀಲರು, ''ಗುತ್ತಿಗೆ ಆಧಾರದಲ್ಲಿ ಸೇವೆ ಸಲ್ಲಿಸುತ್ತಿದ್ದ ಚಾಲಕನನ್ನು ಈಗಾಗಲೇ ಸೇವೆಯಿಂದ ವಜಾಗೊಳಿಸಲಾಗಿದೆ. ಕರ್ತವ್ಯ ಲೋಪವೆಸಗಿದ ಆರೋಪದಲ್ಲಿನಿರ್ವಾಹಕನ ಒಂದು ವೇತನ ಬಡ್ತಿಯನ್ನು ಕಡಿತಗೊಳಿಸಲಾಗಿದೆ,'' ಎಂದು ತಿಳಿಸಿದ್ದರು.

**ಪ್ರಕರಣದ ಹಿನ್ನೆಲೆ**

**ಬಸ್ ಅಪಘಾತದಲ್ಲಿ ವಿನೋದ್ ಕುಮಾರ್ ಮಾನೆ ಎಂಬುವವರು ಮೃತಪಟ್ಟಿದ್ದರು. ಪ್ರಕರಣದ ವಿಚಾರಣೆ ನಡೆಸಿದ್ದ ಮೋಟಾರು ವಾಹನಗಳ ಅಪಘಾತ ಪರಿಹಾರ ನ್ಯಾಯಾಧಿಕರಣ ಮೃತರ ಕುಟುಂಬಕ್ಕೆ ಅಪಘಾತ ನಡೆದ ದಿನದಿಂದ ಶೇ.6 ರ ಬಡ್ಡಿ ದರದಲ್ಲಿ 1,10,36,200 ರೂ. ಪರಿಹಾರ ನೀಡಲು 2025 ರ ಮಾ.14 ರಂದು ಕೆಕೆಆರ್‌ಟಿಸಿಗೆ ಸೂಚನೆ ನೀಡಿತ್ತು. ಆ ಆದೇಶವನ್ನು ಪ್ರಶ್ನಿಸಿ ಸಾರಿಗೆ ನಿಗಮವು ಹೈಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿತ್ತು.**

# ವೈಜ್ಞಾನಿಕ ಯೋಜನೆಗೆ ಸೂಚನೆ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ವೃಷಭಾವತಿ ವ್ಯಾಲಿಯಲ್ಲಿ ಸರಾಗವಾಗಿ ನೀರು ಹರಿದುಹೋಗಲು ವೈಜ್ಞಾನಿಕ ಯೋಜನೆ ರೂಪಿಸುವಂತೆ ಪಶ್ಚಿಮ ನಗರ ಪಾಲಿಕೆ ಆಯುಕ್ತ ಡಾ.ಕೆ.ವಿ. ರಾಜೇಂದ್ರ ಅವರು ಅಧಿಕಾರಿಗಳಿಗೆ ಸೂಚಿಸಿದರು. ವಿಜಯನಗರ ವ್ಯಾಪ್ತಿಯಲ್ಲಿ ಕಾಮಗಾರಿಗಳ ಪರಿಶೀಲನೆ ನಡೆಸಿ ಮಾತನಾಡಿದ ಅವರು, ಗಾಳಿ ಆಂಜನೇಯ ದೇವಸ್ಥಾನದ ಬಳಿ ವೃಷಭಾವತಿ ವ್ಯಾಲಿಯನ್ನು ಪರಿಶೀಲಿಸಿ ಹೂಳು, ತ್ಯಾಜ್ಯವನ್ನು ತೆರವುಗೊಳಿಸಬೇಕು. ಮಳೆ ನೀರು ಸರಾಗವಾಗಿ ಹರಿದುಹೋಗಲು ಅನುಕೂಲವಾಗುವಂತೆ ಸೂಕ್ತ ಕ್ರಮ ಕೈಗೊಳ್ಳಲು ಅಧಿಕಾರಿಗಳಿಗೆ ಸೂಚಿಸಿದರು. ಮಳೆಗಾಲದ ವೇಳೆ ಗಾಳಿ ಅಂಜನೇಯ ದೇವಸ್ಥಾನದ ಬಳಿ ವೃಷಭಾವತಿ ವ್ಯಾಲಿಯಲ್ಲಿ ನೀರಿನ ಹರಿವಿನ ಮಟ್ಟ ಹೆಚ್ಚಾಗಿ ಜಲಾವೃತ ಆಗುವುದನ್ನು ತಪ್ಪಿಸಬೇಕು. ವ್ಯಾಲಿಯನ್ನು ನಿರಂತರವಾಗಿ ಸ್ವಚ್ಛವಾಗಿರುವಂತೆ ನೋಡಿಕೊಳ್ಳಬೇಕು. ಜೊತೆಗೆ ವ್ಯಾಲಿಗೆ ತ್ಯಾಜ್ಯ ಹಾಕದಂತೆ ಸೂಕ್ತ ಕ್ರಮಗಳನ್ನು ಕೈಗೊಳ್ಳಲು ನಿರ್ದೇಶಿಸಿದರು. ಕವಿಕಾ ಫ್ಯಾಕ್ಟರಿ ಹಿಂಭಾಗ ವೃಷಭಾವತಿ ವ್ಯಾಲಿಯಲ್ಲಿ ಹೂಳೆತ್ತುವ ಕಾರ್ಯವನ್ನು ಪರಿವೀಕ್ಷಿಸಿ, ಮುಂಗಾರು ಸನ್ನಿಹಿತವಾಗುತ್ತಿರುವ ಹಿನ್ನೆಲೆಯಲ್ಲಿ ತ್ವರಿತವಾಗಿ ಕೆಲಸ ಪೂರ್ಣಗೊಳಿಸಲು ಹೇಳಿದರು. ಮಳೆಗಾಲದ ವೇಳೆ ಗಾಳಿ ಆಂಜನೇಯ ದೇವಸ್ಥಾನ, ಕವಿಕಾ ಹಾಗೂ ನಾಯಂಡಹಳ್ಳಿ ಜಂಕ್ಷನ್ ಭಾಗದಲ್ಲಿ ಜಲಾವೃತ ಆಗುವುದನ್ನು ತಪ್ಪಿಸುವ ಸಲುವಾಗಿ ಹೆಚ್ಚುವರಿ ಯಂತ್ರೋಪಕರಣಗಳನ್ನು ಬಳಸಿಕೊಂಡು ನಿರಂತರವಾಗಿ ಸ್ವಚ್ಛತಾ ಕಾರ್ಯ ನಡೆಸಬೇಕು. ಅಗತ್ಯವಿದ್ದಲ್ಲಿ ಸ್ವಚ್ಛತೆಗಾಗಿ ಹೆಚ್ಚುವರಿ ತಂಡಗಳನ್ನು ನಿಯೋಜಿಸಿಕೊಳ್ಳಲು ಸೂಚನೆ ನೀಡಿದರು. ಗಾಳಿ ಆಂಜನೇಯ ದೇವಸ್ಥಾನದ ಬಳಿ ರಸ್ತೆಯ ಭಾಗ ಜಲಾವೃತ ಆಗುವುದನ್ನು ತಪ್ಪಿಸುವ ಸಲುವಾಗಿ ತಾತ್ಕಾಲಿಕವಾಗಿ 'ಕ್ಯಾಸ್ಕೆಂಟ್ ಪಿಟ್' ಸ್ಥಾಪಿಸಿಕೊಂಡು, ಅಗತ್ಯ ಸಾಮರ್ಥ್ಯದ ಸಬ್‌ಮರ್ಸಿಬಲ್ ಪಂಪ್ ವ್ಯವಸ್ಥೆ ಮಾಡಿಕೊಳ್ಳಬೇಕು ಎಂದು ಹೇಳಿದರು. ರಾಷ್ಟ್ರೀಯ ವಿಪತ್ತು ನಿರ್ವಹಣೆ ನಿಧಿ (ಎನ್‌ಡಿಆರ್‌ಎಂಎಫ್) ಯೋಜನೆಯಡಿ, ಕೈಗೆತ್ತಿಕೊಂಡಿರುವಂತಹ ಮಳೆ ನೀರುಗಾಲುವೆ ಕಾಮಗಾರಿಗಳನ್ನು ಮಳೆಗಾಲ ಪ್ರಾರಂಭ ಆಗುವುದಕ್ಕೂ ಮುಂಚಿತವಾಗಿ ಪೂರ್ಣಗೊಳಿಸಲು ನಿರ್ದೇಶನ ನೀಡಿದರು.

# ಕರಗ ಸಂಭ್ರಮ

• ಉದಯವಾಹಿನಿ, ಯಲಹಂಕ

ಯಲಹಂಕದ ವಗ್ನಿಕುಲ ಕ್ಷತ್ರಿಯ ಆರಾಧ್ಯದೇವಿ ಮಹೇಶ್ವರಮ್ಮನವರ ಹೂವಿನ ಕರಗ ಮಹೋತ್ಸವ, ವಿವಿಧ ದೇವರುಗಳ ಪಲ್ಲಕ್ಕಿ ಉತ್ಸವ ಈಚೆಗೆ ವಿಜೃಂಭಣೆಯಿಂದ ನಡೆಯಿತು. ಬಜಾರ್ ರಸ್ತೆಯಲ್ಲಿರುವ ಮಹೇಶ್ವರಮ್ಮನವರ ದೇವಾಲಯದಿಂದ ಹೊರಟ ಹೂವಿನ ಕರಗ, ಕೋಟೆಬೀದಿ, ಬೆಸ್ತರಬೀದಿ, ಕಾಮಾಕ್ಷಮ್ಮ ಬಡಾವಣೆ, ಹೊಸಬೀದಿ, ಗಾಂಧಿನಗರ, ಮನವರ್ತಿ ತೋಟ, ಡೌನ್‌ಬಜಾರ್‌ರಸ್ತೆ, ಮಾರುತಿನಗರ, ವೆಂಕಟಾಲ ಮತ್ತಿತರ ಬಡಾವಣೆಗಳಲ್ಲಿ ಸಂಚರಿಸಿ ಮತ್ತೆ ದೇವಾಲಯಕ್ಕೆ ಆಗಮಿಸಿತು.

ಕರಗ ಮನೆಗಳ ಮುಂದೆ ಬಂದಾಗ ಮಹಿಳೆಯರು ಆರತಿ ಬೆಳಗಿ ಹೂವಿನ ಅರ್ಚನೆಮಾಡಿ ಸ್ವಾಗತಿಸಿದರು. ಸುತ್ತಮುತ್ತಲ ಗ್ರಾಮಗಳ 24 ದೇವರಿಂದ ಅಲಂಕೃತಗೊಂಡಿದ್ದ ಪಲ್ಲಕ್ಕಿ ಉತ್ಸವ, ಕರಗ ಮಹೋತ್ಸವಕ್ಕೆ ವಿಶೇಷ ಮೆರುಗು ನೀಡಿತು.


ಉದಯವಾಹಿನಿ ಚಿತ್ರ

ಸುತ್ತಮುತ್ತಲ ಗ್ರಾಮಗಳ ಸಾವಿರಾರು ಜನರು ಕರಗ ವೀಕ್ಷಿಸಿದರು. ಅಯ್ಯಪ್ಪ ಅವರು 6ನೇ ಬಾರಿಗೆ ಕರಗ ಹೊತ್ತಿದ್ದರು. ಕರಗ ಮಹೋತ್ಸವ ಪ್ರಯುಕ್ತ ಕೆರೆ ಆವರಣದ ಕರಗ ಮಂಟಪವನ್ನು ಹೂವು, ದೀಪಗಳಿಂದ ಅಲಂಕರಿಸಲಾಗಿತ್ತು.

# ಹೋಟೆಲ್‌ನಲ್ಲಿ ಅಗ್ನಿ ಅವಘಡ: ಸಿಬ್ಬಂದಿ ಸಾವು

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

ಬೆಂಗಳೂರಿನ ನಾಗರಬಾವಿಯ ರಿಂಗ್ ರೋಡ್ ಬಳಿಯ ಸರ್ವೀಸ್ ರಸ್ತೆಯಲ್ಲಿರುವ ಖಾಸಗಿ ಹೋಟೆಲ್‌ಯೊಂದರಲ್ಲಿ ಅಗ್ನಿ ಅವಘಡ ಸಂಭವಸಿ ಓರ್ವ ಸಿಬ್ಬಂದಿ ಸಾವನ್ನಪ್ಪಿದ್ದು, 4 ಜನ ಸಿಬ್ಬಂದಿಗಳು ಗಂಭೀರವಾಗಿ ಗಾಯಗೊಂಡಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

**4 ಜನರಿಗೆ ಗಂಭೀರ ಗಾಯ**

**ಹೋಟೆಲ್‌ನಲ್ಲಿ ತಡರಾತ್ರಿ ಕಾಣಿಸಿಕೊಂಡ ಬೆಂಕಿ:** ನಾಗರಬಾವಿಯ ರಿಂಗ್ ರೋಡ್ ಬಳಿಯ ಸರ್ವೀಸ್ ರೋಡ್‌ನಲ್ಲಿರುವ ಹೋಟೆಲ್‌ನಲ್ಲಿ ತಡರಾತ್ರಿ ಇದ್ದಕ್ಕಿದ್ದಂತೆ ಬೆಂಕಿ ಕಾಣಿಸಿಕೊಂಡಿದೆ. ಇದರಿಂದಾಗಿ ಅಲ್ಲೇ ಕೆಲಸ ಮಾಡುತ್ತಿದ್ದ 8 ಮಂದಿ ಹೋಟೆಲ್ ಮಂದಿ ಸಿಬ್ಬಂದಿಗಳು ವಾಸವಿದ್ದ ಹೋಟೆಲ್ ಕಟ್ಟಡದ ಮೇಲಿನ ಮಹಡಿಗೂ ಬೆಂಕಿ ಹಬ್ಬಿದ್ದು, ಇದರಿಂದ ಪರಾಗಲು ಅಲ್ಲಿಂದ ಕೆಳಗೆ ಇಳಿಯಲು ಈ ಸಿಬ್ಬಂದಿಗಳು ಪ್ರಯತ್ನ ನಡೆಸಿದ್ದಾರೆ. ಆದರೆ, ಅಷ್ಟರಲ್ಲಿ ಬೆಂಕಿ ಮಹಡಿಯಲ್ಲಿ ಆವರಿಸಿಕೊಂಡಿದ್ದು, ದಟ್ಟ ಹೊಗೆಯಿಂದಾಗಿ 5 ಜನರು ಗಂಭೀರವಾಗಿ ಗಾಯಗೊಂಡಿದ್ದು, 3 ಜನ ಪಾರಾಗಿದ್ದಾರೆ.

**ಅಗ್ನಿ ಅವಘಡಕ್ಕೆ ಓರ್ವ ಸಿಬ್ಬಂದಿ ಬಲಿ:** ಘಟನೆ ತಿಳಿದ ತಕ್ಷಣವೇ ಸ್ಥಳಕ್ಕೆ ದೌಡಾಯಿಸಿದ ಅಗ್ನಿಶಾಮಕ ದಳ ಬೆಂಕಿ ನಂದಿಸುವ ಕಾರ್ಯಕ್ಕೆ ಮುಂದಾಗಿದ್ದು, ಭೀಮಾ, ಶಿವಾನಂದ, ಸತೀಶ್, ರಾಜಕುಮಾರ್ ಸೇರಿದಂತೆ ಐವರು ಗಾಯಾಳುಗಳನ್ನು ಗಾಯಗೊಂಡವರನ್ನು ಹತ್ತಿರದ ಆಸ್ಪತ್ರೆಯಲ್ಲಿ ದಾಖಲಿಸಿದ್ದಾರೆ. ಆದರೆ, ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಿಸದೆ 45 ವರ್ಷದ ರಾಜಕುಮಾರ್ ಎಂಬಾತ ಸಾವನ್ನಪ್ಪಿದ್ದಾರೆ ಇನ್ನು, ಉಳಿದ 4 ಜನ ಗಾಯಾಳುಗಳ ಸ್ಥಿತಿ ಗಂಭೀರವಾಗಿದೆ ಎಂದು ತಿಳಿದು ಬಂದಿದೆ.

**ಶಾರ್ಟ್ ಸರ್ಕ್ಯೂಟ್‌ನಿಂದ ಬೆಂಕಿ ಹೊತ್ತಿಕೊಂಡ ಶಂಕೆ:** ಸದ್ಯ, ಈ ಕುರಿತು ತನಿಖೆ ನಡೆಯುತ್ತಿದ್ದು, ಪ್ರಾಥಮಿಕವಾಗಿ ಶಾರ್ಟ್ ಸರ್ಕ್ಯೂಟ್‌ನಿಂದ ಬೆಂಕಿ ಹೊತ್ತಿಕೊಂಡಿರುವ ಶಂಕೆ ವ್ಯಕ್ತವಾಗಿದ್ದು, ಅಪಘಾತದ ಸ್ಥಳಕ್ಕೆ ಪೊಲೀಸರು ತೆರಳಿ ಪರಿಶೀಲನೆ ನಡೆಸಿದ್ದಾರೆ.

# ಈಜಿಪುರ ಮೇಲ್ಸೇತುವೆ ಕಾಮಗಾರಿಗೆ ವೇಗ: ಅಕ್ಟೋಬರ್‌ಗೆ ಮುಕ್ತ

• ಉದಯವಾಹಿನಿ, ಬೆಂಗಳೂರು

ಒಂಬತ್ತು ವರ್ಷಗಳಿಂದ ನಿರ್ಮಾಣ ಹಂತದಲ್ಲಿಯೇ ಇರುವ ಈಜಿಪುರ ಮೇಲ್ಸೇತುವೆ ಅಕ್ಟೋಬರ್ ಅಂತ್ಯಕ್ಕೆ ಸಂಚಾರಕ್ಕೆ ಮುಕ್ತವಾಗುವ ಭರವಸೆ ಮೂಡಿದೆ. ಬೆಂಗಳೂರು ದಕ್ಷಿಣ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಈಜಿಪುರ ಮೇಲ್ಸೇತುವೆ ಕಾಮಗಾರಿಗೆ ಹೆಚ್ಚಿನ ವೇಗ ನೀಡಲಾಗಿದ್ದು, ಮೇಲ್ಸೇತುವೆ ಕಾಮಗಾರಿ ಅಕ್ಟೋಬರ್ ಅಂತ್ಯದೊಳಗಾಗಿ ಮುಕ್ತವಾಗಲಿದೆ ಎಂದು ಈಜಿಪುರ ಮೇಲ್ಸೇತುವೆ ಯೋಜನೆಯ ಮುಖ್ಯ ಇಂಜಿನಿಯರ್ ರಾಘವೇಂದ್ರ ಪ್ರಸಾದ್ ಅವರು ತಿಳಿಸಿದರು.

'ಈಜಿಪುರ-ಕೇಂದ್ರೀಯ ಸದನ ಮೇಲ್ಸೇತುವೆ' ಕಾಮಗಾರಿ ಅಂತಿಮ ಹಂತದಲ್ಲಿದ್ದು. ಸೇಂಟ್ ಜಾನ್ಸ್ ಆಸ್ಪತ್ರೆ ಸಮೀಪದಲ್ಲಿದ್ದ ಅತ್ಯಂತ ಜಟಿಲವಾದ 'ಪೋರ್ಟಲ್ ಪ್ರೇಮ್' ನಿರ್ಮಾಣದ ಅಡ್ಡಿಯನ್ನು ಫೆಬ್ರುವರಿಯಲ್ಲಿ ನಿವಾರಿಸಲಾಗಿದೆ. ಈ ನಂತರ ಕಾಮಗಾರಿ ಮತ್ತಷ್ಟು ವೇಗವಾಗಿದೆ' ಎಂದರು. 'ಪ್ರಮುಖ ಮೇಲ್ಸೇತುವೆ ಕಾಮಗಾರಿಯನ್ನು ಅಕ್ಟೋಬರ್ ಅಂತ್ಯದೊಳಗಾಗಿ ಪೂರ್ಣಗೊಳಿಸಿದ ಬಳಿಕ, ರ್‍ಯಾಂಪ್‌ಗಳು, ಇನ್ನಿತರೆ ಕಾಮಗಾರಿಗಳನ್ನು ನಿಗದಿತ ಅವಧಿಯೊಳಗಾಗಿ ಮುಗಿಸಿ, ಈ ವರ್ಷವೇ ಸಾರ್ವಜನಿಕ ಸಂಚಾರಕ್ಕೆ ಎಲ್ಲಾ ಮಾರ್ಗಗಳನ್ನೂ ಮುಕ್ತಗೊಳಿಸಲಾಗುವುದು' ಎಂದು ಮಾಹಿತಿ ನೀಡಿದರು.

**ಕಾಮಗಾರಿಯ ಪ್ರಗತಿ:** 2017ರ ಮೇ 4ರಂದು 203.20 ಕೋಟಿ ವೆಚ್ಚದ 2.38 ಕಿ.ಮೀ ಉದ್ದದ ಮೇಲ್ಸೇತುವೆ ಕಾಮಗಾರಿಯನ್ನು ಸಿಂಪ್ಲೆಕ್ಸ್ ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್‌ಗೆ ವಹಿಸಲಾಗಿತ್ತು.


ಉದಯವಾಹಿನಿ ಚಿತ್ರ

ಆದರೆ, 4 ವರ್ಷ 6 ತಿಂಗಳು ಕಳೆದರೂ ಸಂಸ್ಥೆಯು ಕೇವಲ ಶೇ 42.80ರಷ್ಟು ಭೌತಿಕ ಪ್ರಗತಿ ಮಾತ್ರ ಸಾಧಿಸಿತ್ತು. ಒಟ್ಟು 762 ಸೆಗ್‌ಮೆಂಟ್‌ಗಳಲ್ಲಿ ಕೇವಲ 191 (ಶೇ 25.07) ಮಾತ್ರ ನಿರ್ಮಾಣವಾಗಿದ್ದವು. ನಾಲ್ಕು ಕ್ರೇನ್ ಮತ್ತು ಎರಡು ಲಾಂಚಿಂಗ್ ಗರ್ಡರ್‌ಗಳ ಬದಲು, ಕೇವಲ ಎರಡು ಕ್ರೇನ್ ಮತ್ತು ಒಂದು ಲಾಂಚಿಂಗ್ ಗರ್ಡರ್ ಬಳಸಿ ಕಾಮಗಾರಿಯನ್ನು ನಿಧಾನಗೊಳಿಸಲಾಗಿತ್ತು. ಉಪ ಗುತ್ತಿಗೆದಾರರಿಗೆ ಹಣ ಪಾವತಿಸದ ಪರಿಣಾಮ ಕಾಮಗಾರಿ ಸ್ಥಗಿತಗೊಂಡಿತ್ತು. ಅಂತಿಮವಾಗಿ, ಹೈಕೋರ್ಟ್ ಆದೇಶದ ಮೇರೆಗೆ 2022ರ ಮಾರ್ಚ್ 9ರಂದು 'ರಿಸ್ಕ್ ಆ್ಯಂಡ್ ಕಾಸ್ಟ್' ಅಡಿಯಲ್ಲಿ ಗುತ್ತಿಗೆಯನ್ನು ರದ್ದುಪಡಿಸಲಾಯಿತು.

ಮೇಲ್ಸೇತುವೆಯ ಬಾಕಿ ಕಾಮಗಾರಿಗಾಗಿ ಬಿಎಸ್‌ಸಿಪಿಎಲ್ ಇನ್‌ಫ್ರಾಸ್ಟ್ರಕ್ಚರ್ಸ್ ಲಿಮಿಟೆಡ್‌ಗೆ 2023ರ ನವೆಂಬರ್ 15ರಂದು ಕಾರ್ಯಾದೇಶ ನೀಡಲಾಯಿತು. ಹೊಸ ಗುತ್ತಿಗೆದಾರರು ಸ್ಥಳದ ವಾಸ್ತವ ಸ್ಥಿತಿಯನ್ನು ಪರಿಶೀಲಿಸಿ, ಸ್ಥಳೀಯ ಸಮಸ್ಯೆಗಳನ್ನು ಪರಿಹರಿಸಿಕೊಂಡು ಕಾಮಗಾರಿಯನ್ನು ಪೂರ್ಣಗೊಳಿಸಲು ಅಗತ್ಯ ಕ್ರಮಗಳನ್ನು ಕೈಗೊಂಡಿದ್ದಾರೆ.

ಯೋಜನೆಯ ಮುಖ್ಯ ಮಾರ್ಗದ ಕಾಮಗಾರಿಗೆ ಸೇಂಟ್ ಜಾನ್ಸ್ ಆಸ್ಪತ್ರೆ ಸಮೀಪ 'ಪೋರ್ಟಲ್ ಪ್ರೇಮ್' ನಿರ್ಮಾಣಕ್ಕಾಗಿ ಭೂಸ್ವಾಧೀನ ಸಮಸ್ಯೆ ಎದುರಾಗಿತ್ತು. ಡಿಸಿಎಂ ಡಿ.ಕೆ. ಶಿವಕುಮಾರ್, ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ಜಿಬಿಎ ಮುಖ್ಯ ಆಯುಕ್ತ ಸಮಯನ್ವಯ, ನಿರಂತರ ಮೇಲ್ವಿಚಾರಣೆಯಿಂದ ಸೇಂಟ್ ಜಾನ್ ಆಡಳಿತ ಮಂಡಳಿ ತಮ್ಮ ಜಮೀನಿನಲ್ಲಿ ಕಾಮಗಾರಿಗೆ ಅನುಮತಿ ನೀಡಿತು. ಹಲವು ವರ್ಷಗಳಿಂದ ಬಾಕಿ ಉಳಿದಿದ್ದ ಈ ಸಮಸ್ಯೆಗೆ ಫೆಬ್ರುವರಿಯಲ್ಲಿ ಪರಿಹಾರ ದೊರೆಯಿತು ಎಂದು ರಾಘವೇಂದ್ರ ಪ್ರಸಾದ್ ಹೇಳಿದರು.

**728 ಸೆಗ್‌ಮೆಂಟ್ ಅಳವಡಿಕೆ:** ಈಜಿಪುರ ಮೇಲ್ಸೇತುವೆಯ ಎಲ್ಲಾ ಪೈಲ್ಸ್ ಪೈಲ್ ಕ್ಯಾಪ್‌ಗಳು ಹಾಗೂ ಪಿಯರ್ಸ್ ನಿರ್ಮಾಣ ಪೂರ್ಣಗೊಂಡಿವೆ. ಮುಖ್ಯ ಮಾರ್ಗಕ್ಕೆ ಅಗತ್ಯವಿರುವ ಪೋರ್ಟಲ್ ಬೀಮ್‌ಗಳ ಸ್ಟೇಜಿಂಗ್ ಕಾಮಗಾರಿ ಪ್ರಗತಿಯಲ್ಲಿದೆ ಒಟ್ಟು 762 ಸೆಗ್‌ಮೆಂಟ್‌ಗಳಲ್ಲಿ 728 ಸೆಗ್‌ಮೆಂಟ್‌ಗಳು ಈಗಾಗಲೇ ಕಾಸ್ಟ್ ಆಗಿದ್ದು ಕೇವಲ 15 ಸ್ಪಾನ್‌ಗಳ ಅಳವಡಿಕೆ ಮಾತ್ರ ಬಾಕಿ ಇದೆ. ಗ್ರೇಡ್ ಮಟ್ಟದ ರಸ್ತೆಯಲ್ಲಿ ಏಕರೂಪ ಪಾದಚಾರಿ ಮಾರ್ಗ ಹಾಗೂ ರಸ್ತೆ ವಿಸ್ತರಣೆ ಅಗಲೀಕರಣಕ್ಕಾಗಿ ಸೇಂಟ್ ಜಾನ್ಸ್ ಆಸ್ಪತ್ರೆಯ ಜಾಗ ಸೇರಿದಂತೆ ಒಟ್ಟು 5998.6 ಚದರ ಮೀಟರ್ ಖಾಸಗಿ/ಸರ್ಕಾರಿ ಜಮೀನು ಹಸ್ತಾಂತರ ಪ್ರಕ್ರಿಯೆಗೆ ಭೂಸ್ವಾಧೀನ ಹಾಗೂ ಸಂಬಂಧಿತ ವಿಭಾಗದಿಂದ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ರಾಘವೇಂದ್ರ ಪ್ರಸಾದ್ ಮಾಹಿತಿ ನೀಡಿದರು.

# ಜಿಬಿಎ ಅಧಿಕಾರಿ, ನೌಕರರ ಸಮಸ್ಯೆಗಳ ಕುರಿತು ಮೇ 11ರಂದು ತುರ್ತು ಸಭೆ

• ಉದಯವಾಹಿನಿ, ಬೆಂಗಳೂರು

ಗ್ರೇಟರ್ ಬೆಂಗಳೂರು ಪ್ರಾಧಿಕಾರ ಜಾರಿಯಾದ ನಂತರ ಈ ಕೆಳಕಂಡ ಆಡಳಿತ ಸೌಲಭ್ಯವನ್ನು ಪಡೆಯಲು ಪಾಲಿಕೆಯ ಅಧಿಕಾರಿ ನೌಕರರು ವಿಫಲರಾಗಿರುತ್ತಾರೆ. ಇದರ ಕುರಿತು ಚರ್ಚಿಸಲು ತುರ್ತು ಸಭೆಯನ್ನು ಅಧ್ಯಕ್ಷರಾದ ಎ.ಅಮೃತ್ ರಾಜ್ ರವರ ನೇತೃತ್ವದಲ್ಲಿ ಸೋಮವಾರ ದಿನಾಂಕ 11ರಂದು ಸಂಜೆ 5ಗಂಟೆಗೆ ಕೇಂದ್ರ ಕಛೇರಿ ನೌಕರರ ಭವನದಲ್ಲಿ ಕರೆಯಲಾಗಿದೆ. ಆಯುಕ್ತರ ಆಡಳಿತ ಕಛೇರಿಯಲ್ಲಿ ಅಧಿಕಾರಿ, ನೌಕರರು ಸೌಲಭ್ಯ ಪಡೆಯುವಲ್ಲಿ ವಿನಾಕಾರಣ ಕಾಲಹರಣ ಮಾಡುತ್ತಿದ್ದಾರೆ. ಕಾರ್ಯನಿರ್ವಹಿಸುತ್ತಿದ್ದು ಆಕಸ್ಮಿಕವಾಗಿ ಮರಣ ಹೊಂದಿರುವ ಅಧಿಕಾರಿ ನೌಕರರ ಅವಲಂಬಿತರಿಗೆ ಈ ತಹಲ್‌ವರೆವಿಗೂ ಅನುಕಂಪದ ಆಧಾರದ ಮೇಲೆ ನೌಕರಿ ಮತ್ತು ನಿವೃತ್ತಿ ವೇತನ ಉಪದಾನ ಮತ್ತು ಇನ್ನಿತರ ಆರ್ಥಿಕ ಸೌಲಭ್ಯವನ್ನು ಪಡೆಯದೆ ವಂಚಿತರಾಗಿ ಸದರಿ ಕುಟುಂಬ ಸದಸ್ಯರು ಸಂಕಷ್ಟದಲ್ಲಿ ಇರುತ್ತಾರೆ.

ಪಾಲಿಕೆಯಲ್ಲಿ ಕಾರ್ಯನಿರ್ವಹಿಸಿ ನಿವೃತ್ತಿ ಹೊಂದಿರುವ ಅಧಿಕಾರಿ ನೌಕರರಿಗೆ ಸಕಾಲದಲ್ಲಿ ನಿವೃತ್ತಿ ವೇತನ ಉಪದಾನ ಪಡೆಯದೆ ವಂಚಿತರಾಗಿರುತ್ತಾರೆ. ಗ್ರೇಟರ್ ಬೆಂಗಳೂರು ಪ್ರಾಧಿಕಾರ ಜಾರಿಯಾದ ದಿನಾಂಕದಿಂದ ಪಾಲಿಕೆ ಅಧಿಕಾರಿ ನೌಕರರಿಗೆ ನಿಗದಿತ ದಿನಾಂಕದೊಳಗೆ ಸಂಬಳ ಪಡೆಯದೆ ಮಾನಸಿಕವಾಗಿ ಕುಗ್ಗಿರುತ್ತಾರೆ ಗ್ರೇಟರ್ ಬೆಂಗಳೂರು ಪ್ರಾಧಿಕಾರ ಜಾರಿಯಾದ ನಂತರ ಆರ್ಥಿಕ ಸೌಲಭ್ಯವಾದ ಗಳಿಕೆ ರಜೆ, ವಾರ್ಷಿಕ ವೇತನ ಬಡ್ತಿ, ವೇತನ ಶ್ರೇಣಿ (10,15,20) ವರ್ಷ ಟೈಮ್ ಬಾಂಡ್ ಮತ್ತು ಇನ್ನಿತರ ಆರ್ಥಿಕ ಸೌಲಭ್ಯ ಪಡೆಯಲು ವಿಫಲರಾಗಿರುತ್ತಾರೆ ಗ್ರೇಟರ್ ಬೆಂಗಳೂರು ಪ್ರಾಧಿಕಾರ ಜಾರಿಯಾದ ನಂತರ ಪಾಲಿಕೆಯ ಅಧಿಕಾರಿ ನೌಕರರು ಮತ್ತು ಅವಲಂಬಿತ ಕುಟುಂಬ ಸದಸ್ಯರು ಆರೋಗ್ಯ ಚಿಕಿತ್ಸೆ ಪಡೆದಿರುವ ಬಿಲ್ಲನ್ನು ಆಸ್ಪತ್ರೆಗಳಿಗೆ ಪಾವತಿಸದೆ, ಆಸ್ಪತ್ರೆಗಳೊಂದಿಗೆ ಒಳ ಒಪ್ಪಂದ ಮಾಡಿಕೊಳ್ಳದೆ ಇರುವುದರಿಂದ ಪಾಲಿಕೆ ಅಧಿಕಾರಿ ನೌಕರರು ಮತ್ತು ಅವಲಂಬಿತರು ಚಿಕಿತ್ಸೆ ಪಡೆಯಲು ವಿಫಲರಾಗಿರುತ್ತಾರೆ ಗ್ರೇಟರ್ ಬೆಂಗಳೂರು ಪ್ರಾಧಿಕಾರ ಜಾರಿಯಾದ ನಂತರ ಅರ್ಹ ಅಧಿಕಾರಿ ನೌಕರರಿಗೆ ವಸತಿಗೃಹ ಹಂಚಿಕೆಯಲ್ಲಿ ವಿಳಂಬವಾಗಿರುತ್ತದೆ .

ಅಧಿಕಾರಿ ನೌಕರರು ಮುಂಬಡ್ತಿಗಳನ್ನು ಸಕಾಲದಲ್ಲಿ ಪಡೆಯದೆ ವಂಚಿತರಾಗಿರುತ್ತಾರೆ ವೃಂದ ಮತ್ತು ನೇಮಕಾತಿ ನಿಯಮಾವಳಿ ಅಡಿಯಲ್ಲಿ ತಿದ್ದುಪಡಿಯಾಗದೆ ಮುಂಬಡ್ತಿ ನೀಡಲು, ಸೇವಾ ಜೇಷ್ಠತಾ ಪಟ್ಟಿ ಅಂತಿಮಗೊಳಿಸದೆ ವಿಳಂಬ ಆಗಿರುತ್ತದೆ ಪಾಲಿಕೆಯಲ್ಲಿ ಕಾನೂನುಬಾಹಿರವಾಗಿ ಎರವಲು ಸೇವೆ ಮೇಲೆ ಕಾರ್ಯನಿರ್ವಸುತ್ತಿರುವ ಅಧಿಕಾರಿ ನೌಕರರನ್ನು ಮಾತೃ ಇಲಾಖೆಗೆ ಹಿಂತಿರುಗಿಸಿರುವುದಿಲ್ಲ ಕೆಂಪೇಗೌಡ ದಿನಾಚರಣೆ ಅಧಿಕಾರಿ, ನೌಕರರಿಗೆ ಕ್ರೀಡಾಕೂಟ ಆಯೋಜನೆ ಮತ್ತು ಐದು ಪಾಲಿಕೆಯಲ್ಲಿ ಆಡಳಿತ ಮತ್ತು ಕಂದಾಯ, ಆರೋಗ್ಯ ಇಲಾಖೆಗಳಲ್ಲಿ ಅಗತ್ಯ ಸಿಬ್ಬಂದಿ ನೇಮಕ ಮಾಡುವ ಕುರಿತು ಚರ್ಚೆ.

# ಐಬಿಸಿ ಜಂಕ್ಷನ್‌ನಲ್ಲಿನ ಫ್ಲೈಓವರ್ ಕೆಡವಲು ಸಿದ್ಧತೆ

## ಈ ಭಾಗದಲ್ಲಿನ ಸಂಚಾರ ದಟ್ಟಣೆ ತಗ್ಗಿಸಲು ಹೊಸ ಎಲಿವೇಟೆಡ್ ರೋಟರಿ ಫ್ಲೈಓವರ್ ನಿರ್ಮಾಣಕ್ಕೆ ಬಿ-ಸ್ಮೈಲ್ ನಿರ್ಧಾರ

• ಉದಯವಾಹಿನಿ, ಬೆಂಗಳೂರು

ಐಬಿಸಿ ಜಂಕ್ಷನ್‌ನಲ್ಲಿನ ಫ್ಲೈಓವರ್ ಕೆಡವಿ 436 ಕೋಟಿ ರೂ. ವೆಚ್ಚದಲ್ಲಿ ಎಲಿವೇಟೆಡ್ ರೋಟರಿ ಫ್ಲೈ ಓವರ್ ನಿರ್ಮಿಸಲು ಬೆಂಗಳೂರು ಸ್ಮಾರ್ಟ್ ಇನ್ಫ್ರಾಸ್ಟ್ರಕ್ಚರ್ ಲಿಮಿಟೆಡ್ (ಬಿ-ಸ್ಮೈಲ್) ನಿರ್ಧಾರ ಕೈಗೊಂಡಿದೆ. ಎರಡು ದಶಕದ ಹಿಂದೆ ರೈಲ್ವೆ ಇಲಾಖೆ ನಿರ್ಮಿಸಿದ ಈ ಫ್ಲೈಓವರ್ ಸದ್ಯದ ಸಂಚಾರ ದಟ್ಟಣೆ ನಿರ್ವಹಿಸಲು ಪೂರಕವಾಗಿ ಉಳಿದಿಲ್ಲ. ಜತೆಗೆ, ಬೈಯಪ್ಪನಹಳ್ಳಿಯ ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ರೈಲ್ವೆ ನಿಲ್ದಾಣಕ್ಕೆ (ಎಸ್‌ಎಂವಿಟಿ) ಸುಗಮ ಸಂಪರ್ಕ ಒದಗಿಸಲು, ಪೂರ್ವ ಬೆಂಗಳೂರಿನ ಸಂಚಾರ ದಟ್ಟಣೆ ಕಡಿಮೆ ಮಾಡುವ ಉದ್ದೇಶದಿಂದ ಪರ್ಯಾಯವಾಗಿ ವೃತ್ತಾಕಾರದ ರೋಟರಿ ಫ್ಲೈಓವರ್ ನಿರ್ಮಾಣದ ಯೋಜನೆ ರೂಪಿಸಲಾಗಿದೆ.

2022ರಲ್ಲಿ ಎಸ್‌ಎಂವಿಟಿ ನಿಲ್ದಾಣ ಉದ್ಘಾಟನೆಯಾದ ಬಳಿಕ ಇಂದಿರಾನಗರ, ಫ್ರೇಜರ್ ಟೌನ್, ಕಮ್ಮನಹಳ್ಳಿ ಕಡೆಯ ಜನ ಸಾಕಷ್ಟು ಸಂಚಾರ ದಟ್ಟಣೆ ಎದುರಿಸುವಂತಾಗಿದೆ. ಜತೆಗೆ ನಿಲ್ದಾಣಕ್ಕೆ ಲಾಸ್ಟ್ ಮೈಲ್ ಕನೆಕ್ಟಿವಿಟಿ ಸಮಸ್ಯೆಯೂ ಇದೆ. ರೋಟರಿ ಫ್ಲೈಓವರ್ ಈ ತೊಂದರೆಗಳನ್ನು ನಿವಾರಿಸಲಿದೆ ಎನ್ನುತ್ತಾರೆ ಬಿ-ಸ್ಮೈಲ್ ಅಧಿಕಾರಿಗಳು. ಬೆಂಗಳೂರು ಉಪನಗರ ರೈಲು ಯೋಜನೆಯನ್ನು ಅನುಷ್ಠಾನಗೊಳಿಸುತ್ತಿರುವ ಕೆ-ರೈಡ್ ಸಂಸ್ಥೆಯು ಈ ಹೊಸ ಮೇಲ್ಸೇತುವೆ ಯೋಜನೆಗೆ ನಿರಾಕ್ಷೇಪಣಾ ಪ್ರಮಾಣಪತ್ರ ನೀಡಿದೆ.


ಉದಯವಾಹಿನಿ ಚಿತ್ರ

ರೋಟರಿ ಫ್ಲೈಓವರ್ ಯೋಜನೆಯ ಜತೆಗೆ, ಬಿ-ಸ್ಮೈಲ್ ಬೈಯಪ್ಪನಹಳ್ಳಿ ರಸ್ತೆಯಲ್ಲಿ ಹಳೆ ಮದ್ರಾಸ್ ರಸ್ತೆಗೆ ಸಂಪರ್ಕ ಕಲ್ಪಿಸುವ ಹೊಸ ರೈಲ್ವೆ ಮೇಲ್ಸೇತುವೆ (ಆರ್‌ಒಬಿ) ನಿರ್ಮಾಣಕ್ಕೂ ಯೋಜನೆ ಹಾಕಿಕೊಂಡಿದೆ. ಇದು ಬೆಂಗಳೂರಿನ ಅತ್ಯಂತ ಜನನಿಬಿಡ ಆರ್‌ಒಬಿಗಳ ಪೈಕಿ ಒಂದಾಗಿದೆ. ಹೊಸ ಮೇಲ್ಸೇತುವೆಯಿಂದ ಬೈಯಪ್ಪನಹಳ್ಳಿ ರೈಲ್ವೆ ನಿಲ್ದಾಣ, ಎಸ್‌ಎಂವಿಟಿ ಕಡೆಗಿನ ಸಂಚಾರ ಸುಧಾರಿಸುವ ನಿರೀಕ್ಷೆಯಿದೆ. ಈ ಕಾಮಗಾರಿ ಆರಂಭವಾದಲ್ಲಿ ದೊಡ್ಡ ಬಾಣಸವಾಡಿ ರಸ್ತೆ, ಕಮ್ಮನಹಳ್ಳಿ ಮುಖ್ಯ ರಸ್ತೆ ಮತ್ತು ಬೈಯಪ್ಪನಹಳ್ಳಿ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಭಾರೀ ಸಂಚಾರ ದಟ್ಟಣೆ ಉಂಟಾಗುವ ಸಾಧ್ಯತೆಯಿದೆ. ಈಗಾಗಲೇ ಟ್ರಾಫಿಕ್ ಸಮಸ್ಯೆಯಿಂದ ಕಂಗೆಟ್ಟಿರುವ ಈ ಭಾಗದ ಜನರಿಗೆ ಕಾಮಗಾರಿಯ ಅವಧಿಯಲ್ಲಿ ಮತ್ತಷ್ಟು ಸಂಕಷ್ಟ ಎದುರಾಗಲಿದೆ.

**ಹೆಚ್ಚಿದ ವೆಚ್ಚ**

**ಆರಂಭದಲ್ಲಿ ರೋಟರಿ ಫ್ಲೈ ಓವರ್ ಯೋಜನೆಗೆ 263 ಕೋಟಿ ರೂ. ವೆಚ್ಚವಾಗಬಹುದೆಂದು ಅಂದಾಜಿಸಲಾಗಿತ್ತು. ಆದರೆ, ಕಾಮಗಾರಿ ಆರಂಭ ವಿಳಂಬ ಆಗಿರುವುದು ಮತ್ತು ಯೋಜನೆಯ ವಿನ್ಯಾಸದಲ್ಲಿ ಮಾಡಲಾದ ಮಹತ್ವದ ಬದಲಾವಣೆಗಳಿಂದ ಈಗ ವೆಚ್ಚ 436 ಕೋಟಿ ರೂ.ಗೆ ಏರಿಕೆಯಾಗಿದೆ. ಮಾರುತಿ ಸೇವಾನಗರ ರಸ್ತೆಯಿಂದ ಸುಮಾರು 1.5 ಕಿಲೋಮೀಟರ್ ಉದ್ದದ ಹೆಚ್ಚುವರಿ ಫ್ಲೈ ಓವರ್ ಅನ್ನು ಈ ಯೋಜನೆಗೆ ಸೇರ್ಪಡೆಗೊಳಿಸಲಾಗಿದೆ. ಹೀಗಾಗಿ, ವೆಚ್ಚ ಹೆಚ್ಚಳ ಆಗಿದೆ. ಜಿಎಸ್‌ಟಿ ಮತ್ತು ಇತರ ತಾಂತ್ರಿಕ ಘಟಕಗಳ ಸೇರ್ಪಡೆಯಿಂದ ಅಂದಾಜು ಮೊತ್ತ ಹೆಚ್ಚಾಗಿದೆ ಎಂದು ಬಿ-ಸ್ಮೈಲ್ ಅಧಿಕಾರಿಗಳು ತಿಳಿಸಿದ್ದಾರೆ.**

**436 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣ**

**ಸುಮಾರು 2 ದಶಕಗಳ ಹಿಂದೆ ರೈಲ್ವೆ ಇಲಾಖೆ ನಿರ್ಮಿಸಿದ್ದ ಐಬಿಸಿ ಜಂಕ್ಷನ್‌ನಲ್ಲಿನ ಫ್ಲೈಓವರ್ ಕೆಡವಿ ಈ ಜಾಗದಲ್ಲಿ 436 ಕೋಟಿ ರೂ. ವೆಚ್ಚದಲ್ಲಿ ಎಲಿವೇಟೆಡ್ ರೋಟರಿ ಫ್ಲೈಓವರ್ ನಿರ್ಮಿಸಿ ಈ ಭಾಗದಲ್ಲಿನ ಸಂಚಾರದಟ್ಟಣೆ ಕಡಿಮೆ ಮಾಡುವ ಹಾಗೂ ಬೈಯಪ್ಪನಹಳ್ಳಿಯ ಎಸ್‌ಎಂವಿಟಿ ನಿಲ್ದಾಣಕ್ಕೆ ಸುಗಮ ಸಂಪರ್ಕ ನೀಡಲು ಬೆಂಗಳೂರು ಸ್ಮಾರ್ಟ್ ಇನ್ಫ್ರಾಸ್ಟ್ರಕ್ಚರ್ ಲಿಮಿಟೆಡ್ ಸಿದ್ಧತೆ ನಡೆಸುತ್ತಿದೆ.**

ಈ ಸವಾಲನ್ನು ಎದುರಿಸಲು ಬಿ-ಸ್ಮೈಲ್ ಸಂಸ್ಥೆಯು ಟ್ರಾಫಿಕ್ ಪೊಲೀಸರೊಂದಿಗೆ ಸಭೆ ನಡೆಸಿ, ಕಾಮಗಾರಿ ಆರಂಭವಾಗುವ ಮುನ್ನವೇ ವೈಜ್ಞಾನಿಕವಾಗಿ ಪರ್ಯಾಯ ಮಾರ್ಗದ ರೂಪುರೇಷೆ ತಯಾರಿಸಿಕೊಳ್ಳಲು ಮುಂದಾಗಿದೆ. ಸ್ಥಳೀಯ ವಾಹನಗಳು ಮತ್ತು ಟರ್ಮಿನಲ್‌ಗೆ ಹೋಗುವ ವಾಹನಗಳನ್ನು ಪ್ರತ್ಯೇಕಿಸುವ ಮೂಲಕ ದಟ್ಟಣೆ ಕಡಿಮೆ ಮಾಡುವುದು ಯೋಜನೆಯ ಮುಖ್ಯ ಗುರಿ, ಎಂದು ಬಿ-ಸ್ಮೈಲ್ ಅಧಿಕಾರಿಗಳು ತಿಳಿಸಿದ್ದಾರೆ.

ಉದಯ ವಾಹಿನಿ
ಪ್ರಾದೇಶಿಕ
ಭಾನುವಾರ 10 ಮೇ 2026 | 03

# ಗ್ರಾಮದ ಸರ್ವತೋಮುಖ ಅಭಿವೃದ್ಧಿಗೆ ಪ್ರಾಮಾಣಿಕ ಪ್ರಯತ್ನ: ಗೋಪಾಲ್ ಹೊರೆಯಾಲ

• ಉದಯವಾಹಿನಿ, ಗುಂಡ್ಲುಪೇಟೆ

ತಾಲ್ಲೂಕಿನ ಹೊರೆಯಾಲ ಗ್ರಾಮದಲ್ಲಿ ಬುದ್ಧ, ಬಸವ, ಅಂಬೇಡ್ಕರ್, ವಾಲ್ಮೀಕಿ ಪುತ್ಥಳಿ ಒಳಗೊಂಡಂತೆ ಸ್ವಾಗತ ಕಮಾನು ನಿರ್ಮಾಣಕ್ಕೆ ಗುದ್ದಲಿಪೂಜೆಯನ್ನು ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ.ಮಹದೇವಪ್ಪ ಆಪ್ತಸಹಾಯಕ ಗೋಪಾಲ್ ಹೊರೆಯಾಲ ನೆರವೇರಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಗ್ರಾಮದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳ ಎಲ್ಲ ಸಮುದಾಯದವರು ಒಂದಾಗಿ ಪರಸ್ಪರ ಪ್ರೀತಿ, ವಿಶ್ವಾಸ-ಸಹಬಾಳ್ವೆಯಿಂದ ನಡೆದರೆ ಸೌಹಾರ್ದತೆ ವಾತಾವರಣ ಕಾಣುತ್ತದೆ. ನಾನು ಬಡತನದ ಕುಟುಂಬದಿಂದ ಬಂದಿದ್ದು, ಬಡತನದ ಬಗ್ಗೆ ಸಂಪೂರ್ಣ ಅರಿವಿರುವುದರಿಂದ ಏನಾದರೂ ಕೆಲಸ ಮಾಡಬೇಕು. ಬಡವರಿಗೆ ಏನಾದರೂ ಪ್ರಯೋಜನ,ಸೌಲಭ್ಯಗಳನ್ನು ಕಲ್ಪಿಸಬೇಕೆಂಬ ಆಸೆಯಿಂದ ತಾಲ್ಲೂಕಿನಾದ್ಯಂತ ಎಲ್ಲರಿಗೂ ನನ್ನ ಕೈಲಾದಮಟ್ಟಿಗೆ


ಉದಯವಾಹಿನಿ ಚಿತ್ರ

ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ.ಮಹದೇವಪ್ಪ, ಸಂಸದ ಸುನಿಲ್ ಬೋಸ್ ಆಶೀರ್ವಾದದೊಂದಿಗೆ ಅಭಿವೃದ್ಧಿ ಕೆಲಸಗಳನ್ನು ಮಾಡಿಕೊಂಡು ಬರುತ್ತಿದ್ದೇನೆ ಎಂದರು. ನನ್ನ ಹುಟ್ಟೂರಾದ ಹೊರೆಯಾಲ ಗ್ರಾಮಕ್ಕೆ ಈಗಾಗಲೇ ಹಲವಾರು ಅಭಿವೃದ್ಧಿ ಕಾಮಗಾರಿಗಳನ್ನು ಮಂಜೂರು ಮಾಡಿಸಲಾಗಿದೆ. ಮುಂದಿನ ದಿನಗಳಲ್ಲಿ ಗ್ರಾಮದ ಸರ್ವತೋಮುಖ ಅಭಿವೃದ್ಧಿಗೆ ಬೇಕಾದ ಕೆಲಸಗಳಿಗೆ ಸಚಿವರಿಂದ ಅನುದಾನ ಕೊಡಿಸಲಾಗುವುದು ಎಂದು ಭರವಸೆ ನೀಡಿದರು. ದಲಿತರು,ಹಿಂದುಳಿದ ವರ್ಗಗಳ ಬೀದಿಗಳು ಸೇರಿದಂತೆ ಇನ್ನಿತರ ಬೀದಿಗಳಿಗೆ ಮೂಲಸೌಕರ್ಯ ಕಲ್ಪಿಸಲಾಗುವುದು. ಈಗಾಗಲೇ ಗ್ರಾಮಕ್ಕೆ ಅಗತ್ಯವಿರುವ ಕೆಲಸಗಳ ಕುರಿತು ಪಟ್ಟಿ ಮಾಡಿದ್ದು,ಶೀಘ್ರದಲ್ಲೇ ಸಚಿವರ ಗಮನಕ್ಕೆ ತಂದು ಅದನ್ನು ಮಾಡಿಸಿಕೊಡಲಾಗುವುದು ಎಂದರು. ಗ್ರಾಮದಲ್ಲಿ ಎಲ್ಲಾ ಸಮುದಾಯದವರು ವಾಸ ಮಾಡುತ್ತಿದ್ದು, ಸಹೋದರತ್ವದಿಂದ ಇರಬೇಕು. ಇದರಿಂದ ಗ್ರಾಮವು ತಾಲ್ಲೂಕಿಗೆ ಮಾದರಿ ಗ್ರಾಮವನ್ನಾಗಿ ಪರಿವರ್ತಿಸಲು ಶಕ್ತಿ ಮೀರಿ ಕೆಲಸ ಮಾಡಲಾಗುವುದು ಎಂದರು. ಡಾ.ಬಿ.ಆರ್.ಅಂಬೇಡ್ಕರ್ ಅವರು ಹೋರಾಟ ಮಾಡಿದ ಫಲವಾಗಿ ನಮಗೆ ಸ್ವಾತಂತ್ರ್ಯ ಸಿಕ್ಕಿದೆ. ಅದೇ ರೀತಿ ನಮಗೆ ಸಿಕ್ಕ ಅವಕಾಶವನ್ನು ಬಳಸಿಕೊಳ್ಳಬೇಕು. ಮಕ್ಕಳಿಗೆ ಶಿಕ್ಷಣ ಕೊಡಿಸಬೇಕು. ಸರ್ಕಾರಿ ಉದ್ಯೋಗದ ಜೊತೆಗೆ, ಖಾಸಗಿ ಕಂಪನಿಗಳಲ್ಲೂ ಉದ್ಯೋಗ ಪಡೆಯಬೇಕು ಎಂದರು. ಗ್ರಾಮದಲ್ಲಿ ನಿರ್ಮಾಣವಾಗುವ ಸ್ವಾಗತ ಕಮಾನು ಮುಂದಿನ ದಿನಗಳಲ್ಲಿ ಗಮನ ಸೆಳೆಯಲಿದೆ. ಹೊರಗಿನಿಂದ ಬಂದವರು ಈ ಕಮಾನಿನ ಮೂಲಕ ಪ್ರವೇಶ ಮಾಡುವುದರಿಂದ ಅವರ ಸಂದೇಶಗಳು ತಲುಪಲಿ ಎಂಬ ಸದುದ್ದೇಶದಿಂದ ನಿರ್ಮಾಣ ಮಾಡಲಾಗುವುದು ಎಂದರು.

ಈ ಕಾರ್ಯಕ್ರಮದಲ್ಲಿ ಜಿಪಂ ಮಾಜಿ ಸದಸ್ಯ ಶಿವಸ್ವಾಮಿ, ಪಿಎಲ್‌ಡಿ ಬ್ಯಾಂಕ್‌ನ ಮಾಜಿ ಅಧ್ಯಕ್ಷ ಎಚ್.ಎಂ.ಮಹೇಶ್, ವಕೀಲ ಮಹೇಶ್, ಯಜಮಾನರಾದ ಚಿಕ್ಕತಮ್ಮಯ್ಯ, ಡಿ. ಮಹದೇವನಾಯಕ, ಇಂದ್ರನಾಯಕ, ಸಹ ಪ್ರಾಧ್ಯಾಪಕ ಡಾ.ಬಿ. ಶೇಖರ್, ಉಪನ್ಯಾಸಕ ಜಗದೀಶ್, ಶಿಕ್ಷಕರಾದ ಮಹದೇವಸ್ವಾಮಿ, ಸಿಆರ್‌ಪಿ ರಾಜು ಮತ್ತಿತರರು ಹಾಜರಿದ್ದರು.

# ಕಾಲೇಜು ವಿದ್ಯಾರ್ಥಿಗಳಿಂದ ಪೊಲೀಸರ ಮೇಲೆ ಹಲ್ಲೆ ವಿಡಿಯೋ ವೈರಲ್


ಉದಯವಾಹಿನಿ ಚಿತ್ರ

• ಉದಯವಾಹಿನಿ, ಚಿಕ್ಕಬಳ್ಳಾಪುರ

ಕರ್ತವ್ಯದಲ್ಲಿದ್ದ ಎಎಸ್‌ಐ ಹಾಗೂ ಪೊಲೀಸ್ ಕಾನ್ಸ್‌ಟೇಬಲ್ ಮೇಲೆ ಕಾಲೇಜು ವಿದ್ಯಾರ್ಥಿಗಳು ಹಲ್ಲೆ ನಡೆಸಿರುವ ಘಟನೆ ಚಿಕ್ಕಬಳ್ಳಾಪುರದ ಖಾಸಗಿ ಕಾಲೇಜಿನ ಬಳಿ ನಡೆದಿದೆ. ನಂದಿಗಿರಿಧಾಮ ಪೊಲೀಸ್ ಠಾಣೆಯ ಎಎಸ್‌ಐ ಗಂಗರಾಜು ಹಾಗೂ ಪೊಲೀಸ್ ಕಾನ್ಸ್‌ಟೇಬಲ್ ಮೇಲೆ ಪುಂಡ ವಿದ್ಯಾರ್ಥಿಗಳು ಗುಂಪು ಕಟ್ಟಿಕೊಂಡು ಹಲ್ಲೆ ನಡೆಸಿದ್ದಾರೆ. ಕಾಲೇಜಿನಲ್ಲಿ ಕಾರ್ಯಕ್ರಮವಿದ್ದ ಕಾರಣ ಸಿನಿಮಾ ನಟ ನಟಿಯರು ಆಗಮಿಸಿದ್ದರು. ಭದ್ರತೆಗೆ ಪೊಲೀಸರು ಕಾಲೇಜಿನ ಗೇಟ್ ಬಳಿ ತೆರಳಿದ್ದರು. ಈ ವೇಳೆ ಹತ್ತಾರು ಮಂದಿ ವಿದ್ಯಾರ್ಥಿಗಳು ಸೈಲೆನ್ಸರ್ ಅಲ್ಟರ್ ಮಾಡಿಕೊಂಡಿದ್ದ ಬೈಕ್‌ಗಳಲ್ಲಿ ಕರ್ಕಶ ಶಬ್ಧ ಮಾಡಿಕೊಂಡು ಓಡಾಡಿದ್ದರು.

ಬೈಕ್ ಕರ್ಕಶ ಶಬ್ಧ ಮಾಡುತ್ತಿದ್ದ ವಿದ್ಯಾರ್ಥಿಗಳಿಗೆ ಎಎಸ್‌ಐ ಗಂಗರಾಜು ಸೈಲೆಂಟ್ ಆಗಿ ಹೋಗಿ ಎಂದು ಹೇಳಿದ್ದರಂತೆ. ಈ ವೇಳೆ ಪೊಲೀಸರ ಎಚ್ಚರಿಕೆಗೆ ಕ್ಯಾರೆ ಎನ್ನದೇ ಒಬ್ಬ ವಿದ್ಯಾರ್ಥಿ ಬೈಕ್ ಜೋರು ಸೌಂಡ್ ಮಾಡಿದ್ದಾನೆ. ಬೇರೆ ವಿದ್ಯಾರ್ಥಿಗಳು ಬೇಡ ಅಂದ್ರೂ, ಅವನೊಬ್ಬ ಪೊಲೀಸ್ ಏನು ಮಾಡ್ತಾನೆ ಎಂದು ಮತ್ತೆ ಶಬ್ಧ ಮಾಡಿದ್ದಾನೆ. ಈ ವೇಳೆ ಕೆರಳಿದ ಎಎಸ್‌ಐ ಲಾಠಿ ಬೀಸಿದ್ದು, ರಕ್ತ ಬಂದಿದೆ ಎನ್ನಲಾಗಿದೆ. ಇದರಿಂದ ಕೆರಳಿದ ಪುಂಡ ವಿದ್ಯಾರ್ಥಿಗಳು ರಕ್ತ ಬರುವ ಹಾಗೆ ಹೊಡಿತೀಯಾ ಅಂತ ಎಎಸ್‌ಐ ಮೇಲೆ ಮುಗಿಬಿದ್ದು ಹಲ್ಲೆ ಮಾಡಿದ್ದಾರೆ. ಬಿಡಿಸಲು ಪ್ರಯತ್ನಿಸಿದ ಕಾನ್ಸ್ ಟೇಬಲ್‌ನನ್ನು ನೂಕಿ ಹಲ್ಲೆ ಮಾಡಿದ್ದಾರೆ. ನಂದಿಗಿರಿಧಾಮ ಪೊಲೀಸ್ ಠಾಣೆಯಲ್ಲಿ ವಿದ್ಯಾರ್ಥಿಗಳ ವಿರುದ್ಧ ಪ್ರಕರಣ ದಾಖಲಾಗಿದೆ. ತಲೆಮರೆಸಿಕೊಂಡಿರುವ ಪುಂಡರಿಗಾಗಿ ಪೊಲೀಸರು ಹುಡುಕಾಟ ನಡೆಸುತ್ತಿದ್ದಾರೆ.

# ಜೀಡರಹಳ್ಳಿ ಬಳಿ ಡ್ರೋನ್ ಪರೀಕ್ಷಾ ಕೇಂದ್ರ


## 20 ಎಕರೆ ಸ್ಥಳವನ್ನು ಮಂಜೂರು ಮಾಡಲಾಗಿದೆ: ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್

• ಉದಯವಾಹಿನಿ, ಚಿಂತಾಮಣಿ

ತಾಲ್ಲೂಕಿನ ಕೈವಾರ ಹೋಬಳಿಯ ಜೀಡರಹಳ್ಳಿ ಬಳಿ 45 ಕೋಟಿ ವೆಚ್ಚದಲ್ಲಿ ಡ್ರೋನ್ ಪರೀಕ್ಷಾ ಕೇಂದ್ರ ಆರಂಭಿಸಲಾಗುವುದು. 20 ಎಕರೆ ಸ್ಥಳವನ್ನು ಮಂಜೂರು ಮಾಡಲಾಗಿದೆ ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ತಿಳಿಸಿದರು ತಾಲ್ಲೂಕಿನ ಕೈವಾರ ಹೋಬಳಿಯ ಹುಲುಗುಮ್ಮನಹಳ್ಳಿಯಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದರು. ಡ್ರೋನ್ ಪರೀಕ್ಷಾ ಕೇಂದ್ರ ಸ್ಥಾಪನೆಯನ್ನು ರಾಜ್ಯ ಬಜೆಟ್‌ನಲ್ಲಿ ಘೋಷಣೆ ಮಾಡಲಾಗಿದೆ. ಯೋಜನೆ ಪ್ರಾರಂಭವಾದರೆ ಅನೇಕರಿಗೆ ಉದ್ಯೋಗ ದೊರೆಯುತ್ತದೆ. ತಾಲ್ಲೂಕಿನಲ್ಲಿ ದೊಡ್ಡಮಟ್ಟದಲ್ಲಿ ಕೈಗಾರಿಕೀಕರಣ ಆಗುತ್ತಿದೆ. ಕೈಗಾರಿಕಾ ಪ್ರಾಂಗಣ ಸ್ಥಾಪನೆಯಿಂದ ಸಣ್ಣಪುಟ್ಟ ಸಮಸ್ಯೆಗಳು ಎದುರಾಗುತ್ತಿದ್ದು, ಹಂತ ಹಂತವಾಗಿ ಬಗೆಹರಿಸಲಾಗುತ್ತಿದೆ ಎಂದರು.

**ರಾಜ್ಯ ಬಜೆಟ್‌ನಲ್ಲಿ ಘೋಷಣೆ**

ಹುಲುಗುಮ್ಮನಹಳ್ಳಿಯಿಂದ ಕೈವಾರಕ್ಕೆ ಜಿಲ್ಲಾ ಪಂಚಾಯಿತಿ ಅನುದಾನದಲ್ಲಿ 56 ಲಕ್ಷ ವೆಚ್ಚದಲ್ಲಿ ರಸ್ತೆ ಮಂಜೂರಾಗಿದ್ದು, ಮತ್ತೆ 48 ಲಕ್ಷ ಅಗತ್ಯವಿದೆ ಎಂದು ಅಧಿಕಾರಿಗಳು ವರದಿ ನೀಡಿದ್ದಾರೆ. ಉತ್ತಮ ಗುಣಮಟ್ಟದ ರಸ್ತೆಗಾಗಿ ಹೆಚ್ಚುವರಿ ಅನುದಾನ ಮಂಜೂರು ಮಾಡಲಾಗುವುದು ಎಂದು ತಿಳಿಸಿದರು. ಕೈವಾರ ಹೋಬಳಿಯಲ್ಲಿ ಗುಟ್ಟಹಳ್ಳಿ ರಸ್ತೆ, ತಳಗವಾರ-ಹೊಸಹಳ್ಳಿ ರಸ್ತೆ, ನಾಯಿಂದ್ರಹಳ್ಳಿಯಿಂದ ಚಿಕ್ಕಕಟ್ಟಿಗೇನಹಳ್ಳಿ ರಸ್ತೆ ಅಭಿವೃದ್ಧಿಪಡಿಸಿ ನೆರ್ನಹಳ್ಳಿವರೆಗೂ ಸಂಪರ್ಕಿಸಲಾಗಿದೆ. ಹೊಸಹಳ್ಳಿ-ಅಟ್ಟೂರು ರಸ್ತೆಯನ್ನು ಏಷ್ಯನ್ ಅಭಿವೃದ್ಧಿ ಬ್ಯಾಂಕಿನ ಸಾಲ ಯೋಜನೆಯಲ್ಲಿ ಸೇರಿಸಲಾಗಿದೆ. 3-4 ಬಾರಿ


ಉದಯವಾಹಿನಿ ಚಿತ್ರ

**ಕೆರೆಗಳ ನೀರು ಕುಡಿಯಬೇಕು ಎಂದು ಯಾರು ಹೇಳಿದ್ದಾರೆ?**

**ಕೆ.ಸಿ.ವ್ಯಾಲಿ ಮತ್ತು ಎಚ್.ಎನ್.ವ್ಯಾಲಿಯ ನೀರನ್ನು ಕೆರೆಗಳಿಗೆ ಹರಿಸುತ್ತಿರುವುದು ಅಂತರ್ಜಲ ವೃದ್ಧಿಗಾಗಿ ಮಾತ್ರ ಎಂದು ಸ್ಪಷ್ಟಪಡಿಸಲಾಗಿದೆ. ಭೂಮಿಯಲ್ಲಿ ಇಂಗುವಾಗ ಉಳಿದಿರುವ ಅಂಶಗಳು ಪದರಗಳಲ್ಲಿ ಉಳಿದುಕೊಳ್ಳುತ್ತದೆ. ಕೆರೆಗಳಲ್ಲಿ ಕೊಳವೆಬಾವಿ ಕೊರೆಯಬಾರದು ಎಂದು ಆದೇಶಿಸಲಾಗಿದೆ. ಕೆಲವರು ಬಾಟಲ್ ನೀರು ತಂದು ಇದನ್ನು ಕುಡಿಯಲಿ ಎಂದು ಮಾಧ್ಯಮಗಳ ಮುಂದೆ ಪ್ರಚಾರ ಪಡೆಯುತ್ತಿದ್ದಾರೆ. ಕೆರೆಗಳ ನೀರು ಕುಡಿಯಬೇಕು ಎಂದು ಯಾರು ಹೇಳಿದ್ದಾರೆ ಎಂದು ಪ್ರಶ್ನಿಸಿದರು.**

ಸರ್ವೆ, ವೀಕ್ಷಣೆ ನಡೆದಿದೆ. ಬೀರ್ಜೇನಹಳ್ಳಿ-ಅಕ್ಕಿಮಂಗಲ ರಸ್ತೆಗೂ ಟೆಂಡರ್ ಆಗಿದೆ. ಮಸ್ತೇನಹಳ್ಳಿಯಿಂದ ಜಂಗಮ ಶೀಗೇಹಳ್ಳಿ ರಸ್ತೆ, ಕೈವಾರದಿಂದ ಹುಣಸೇನಹಳ್ಳಿ ರಸ್ತೆಗೂ

**ಜನರಿಗೆ ತೊಂದರೆ, ಹಾನಿಯಾಗುವಂತೆ ಯಾವುದೇ ಸರ್ಕಾರ ನಡೆದುಕೊಳ್ಳುವುದಿಲ್ಲ. ನೀರಿನ ಶುದ್ಧೀಕರಣ ಪ್ಲಾಂಟ್‌ಗಳಲ್ಲಿ ಆಧುನಿಕ ತಂತ್ರಜ್ಞಾನ ಅಳವಡಿಸಿಕೊಂಡಿರುವುದರಿಂದ ಮೂರನೇ ಹಂತದ ಶುದ್ಧೀಕರಣದಷ್ಟೇ ಶುದ್ದವಾಗುತ್ತಿದೆ. ಐಐಎಸ್‌ಸಿ ವಿಜ್ಞಾನಿಗಳು ಪ್ರತಿನಿತ್ಯ ನಿರಂತರವಾಗಿ ವರದಿ ನೀಡುತ್ತಾರೆ. ಚಿಕ್ಕಬಳ್ಳಾಪುರದಲ್ಲಿ ಒಳಚರಂಡಿ ನೀರು ಕೆರೆಗೆ ಹರಿಯುತ್ತಿದೆ. ನ್ಯಾಯಾಲಯದಲ್ಲೂ ದೂರು ದಾಖಲಾಗಿದ್ದು ಎಲ್ಲಾ ಮಾಹಿತಿಯನ್ನು ನ್ಯಾಯಾಲಯಕ್ಕೂ ಸಲ್ಲಿಸಲಾಗಿದೆ. ಕೇವಲ ಬಾಯಿ ಚಪಲಕ್ಕೆ ಮಾತನಾಡುವುದು ಸರಿಯಲ್ಲ.**
**-ಡಾ.ಎಂ.ಸಿ.ಸುಧಾಕರ್, ಉನ್ನತ ಶಿಕ್ಷಣ ಸಚಿವ**

ಏಜೆನ್ಸಿ ನೇಮಕ ಮಾಡಲಾಗಿದ್ದು ನಂತರ ಟೆಂಡರ್ ಕರೆಯಲಾಗುತ್ತದೆ ಎಂದು ಹೇಳಿದರು. ಕೈವಾರ ಹೋಬಳಿಯ ಮಡಬಹಳ್ಳಿ ಬಳಿ ಕಾರ್ಮಿಕ ಇಲಾಖೆಯಿಂದ 45 ಕೋಟಿ ವೆಚ್ಚದಲ್ಲಿ ಶ್ರಮಿಕರ ವಸತಿ ಶಾಲೆ ಸ್ಥಾಪನೆಯಾಗಲಿದೆ. 10 ಎಕರೆ ಜಾಗವನ್ನು ಮಂಜೂರು ಮಾಡಲಾಗಿದೆ. ಅದರ ಸಮೀಪದಲ್ಲೇ ರಮಾಬಾಯಿ ಅಂಬೇಡ್ಕರ್ ವಸತಿ ಶಾಲೆ ಆರಂಭವಾಗಲಿದ್ದು 10 ಎಕರೆ ಮಂಜೂರು ಮಾಡಲಾಗಿದೆ. ದೊಡ್ಡಗಂಜೂರು ಗ್ರಾಮದ ಬಳಿ ಹಿಂದುಳಿದ ವರ್ಗಗಳ ಇಲಾಖೆಯಿಂದ ವಸತಿ ಶಾಲೆಗಾಗಿ 10 ಎಕರೆ ಜಾಗವನ್ನು 2012ದಲ್ಲೇ ಮಂಜೂರು ಮಾಡಿಸಿದ್ದೆ. ಆದರೆ ನಂತರ ಅದರ ಬಗ್ಗೆ ಯಾರು ಗಮನಹರಿಸದೆ ಮಂಜೂರು ಆಗಿದ್ದ ಶಾಲೆಯೇ ಆರಂಭವಾಗದೆ ವಾಪಸ್ ಹೋಗಿತ್ತು. ಮತ್ತೆ ಮರು ಮಂಜೂರಾತಿ ಮಾಡಿಸಿದ್ದೇನೆ ಎಂದರು.

# ಬಿಜಿಎಂಎಲ್‌ನ 4 ಸಾವಿರ ಪ್ರದೇಶ ಒತ್ತುವರಿ: ಎಲ್. ಬಾಬು ಆರೋಪ

• ಉದಯವಾಹಿನಿ, ಕೆಜಿಎಫ್

ಬಿಜಿಎಂಎಲ್ ಸಂಸ್ಥೆಗೆ ಸೇರಿದ ಜಾಗವನ್ನು ಖಾಸಗಿ ವ್ಯಕ್ತಿಗಳು ಅತಿಕ್ರಮಿಸಿಕೊಳ್ಳುತ್ತಿದ್ದಾರೆ. ಇಂತಹ ಒತ್ತುವರಿದಾರರಿಗೆ ಬಿಜಿಎಂಎಲ್ ಅಧಿಕಾರಿಗಳು ರಕ್ಷಣೆ ನೀಡುತ್ತಿದ್ದಾರೆ ಎಂದು ಮಾನವ ಹಕ್ಕುಗಳ ಸಂಘಟನೆ ಮುಖಂಡ ಎಲ್. ಬಾಬು ಆರೋಪಿಸಿದ್ದಾರೆ. ನಗರದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಬಿಜಿಎಂಎಲ್‌ಗೆ ಸೇರಿದ ಸಾವಿರಾರು ಎಕರೆ ಜಮೀನು ಸರ್ಕಾರದ ಕೈತಪ್ಪುವ ಸಾಧ್ಯತೆ ಇದೆ. ಬಂಗಾರಪೇಟೆ ತಾಲ್ಲೂಕಿನಲ್ಲಿ 3 ಸಾವಿರ ಎಕರೆ ಮತ್ತು ಕೆಜಿಎಫ್ ತಾಲ್ಲೂಕಿನಲ್ಲಿ ಒಂದೂವರೆ ಸಾವಿರ ಎಕರೆ ಜಮೀನು ಒತ್ತುವರಿಯಾಗಿದೆ. ಒತ್ತುವರಿಯಾದ ಜಾಗಕ್ಕೆ ಕಂದಾಯ ಇಲಾಖೆ ಪಹಣಿ ಮಾಡಿಕೊಟ್ಟಿದೆ. ಬಿಜಿಎಂಎಲ್‌ಅಧಿಕಾರಿಗಳು ಭ್ರಷ್ಟಾಚಾರದಲ್ಲಿ ಮುಳುಗಿದ್ದು, ಕೇಂದ್ರ ಸರ್ಕಾರ ಮತ್ತು ಸಂಸದ ಮಲ್ಲೇಶಬಾಬು ಮಧ್ಯಪ್ರವೇಶ ಮಾಡಿ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಬಿಜಿಎಂಎಲ್ ಕಾರ್ಮಿಕರು ತಮ್ಮ ಮನೆಗಳನ್ನು ಸ್ವಂತ ಮಾಡಿಕೊಳ್ಳಲು ಇನ್ನೂ ಸಾಧ್ಯವಾಗಿಲ್ಲ.


ಉದಯವಾಹಿನಿ ಚಿತ್ರ

ಎಸ್‌ಟಿಬಿಪಿ ಯೋಜನೆಯಡಿ ಸ್ವಯಂ ನಿವೃತ್ತಿ ಪಡೆದ ಕಾರ್ಮಿಕರಿಗೆ ಮಾತ್ರ ಮನೆಗಳನ್ನು ನೀಡಲು ಕ್ರಮ ಕೈಗೊಳ್ಳಲಾಗುತ್ತಿದೆ. ಹೀಗೆ ನೀಡಿದ ಮನೆಗಳಿಗೆ ಸ್ವಾಧೀನ ಪತ್ರ ನೀಡಲಾಗಿದೆಯೇ ಹೊರತು ಅವರಿಗೆ ಇನ್ನೂ ಇ-ಖಾತೆ ಮಾಡಿಕೊಟ್ಟಿಲ್ಲ. ನೂರಾರು ವರ್ಷಗಳಿಂದ ಗಣಿಯಲ್ಲಿ ಸೇವೆ ಸಲ್ಲಿಸಿ ನಿವೃತ್ತಿಯಾದ ಕಾರ್ಮಿಕರ ಸುಮಾರು ಹತ್ತು ಸಾವಿರಕ್ಕೂ ಹೆಚ್ಚು ಕುಟುಂಬಗಳಿಗೆ ಇನ್ನೂ ಮನೆಗಳ ಸ್ವಾಧೀನ ಪತ್ರ ನೀಡಿಲ್ಲ. ಯಾವುದೇ ಮೂಲ ಸೌಕರ್ಯಗಳಿಲ್ಲದ ಮನೆಗಳಲ್ಲಿ ಅವರು ವಾಸ ಮಾಡುತ್ತಿದ್ದಾರೆ. ಅವರು ಶೋಷಣೆಗೆ ಒಳಗಾಗಿದ್ದಾರೆ ಎಂದು ಆರೋಪಿಸಿದರು.

ಗಣಿ ಪ್ರದೇಶದಲ್ಲಿ ಇತ್ತೀಚಿನ ದಿನಗಳಲ್ಲಿ ಅನಧಿಕೃತ ಕಟ್ಟಡಗಳು ತಲೆ ಎತ್ತುತ್ತಿವೆ. ಗಣಿ ಪ್ರದೇಶದಲ್ಲಿ ಎತ್ತರದ ಕಟ್ಟಡ ಕಟ್ಟಲು ಅನುಮತಿ ಇಲ್ಲ. ಆದರೂ ರಾಜಾರೋಷವಾಗಿ ಎರಡು, ಮೂರು ಅಂತಸ್ತಿನ ಮನೆಗಳು ನಿರ್ಮಾಣವಾಗುತ್ತಿವೆ. ಸುಮಾರು 127 ಮನೆಗಳಿಗೆ ಸಿಮೆಂಟ್‌ಕಾಂಕ್ರಿಟ್‌ನಿಂದ ಮೇಲ್ಛಾವಣಿ ಹಾಕಲಾಗಿದೆ. ಇಂತಹ ಮನೆಗಳಿಗೆ ಯಾವ ಇಲಾಖೆಯೂ ಅನುಮತಿ ನೀಡಿಲ್ಲ. ಬಿಜಿಎಂಎಲ್ ಅಧಿಕಾರಿಗಳು ವ್ಯವಹಾರ ಕುದುರಿಸಿಕೊಂಡು ಅಕ್ರಮ ಕಟ್ಟಡಗಳಿಗೆ ಅವಕಾಶ ನೀಡುತ್ತಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಪ್ರತಿ ತಿಂಗಳು ಕೇಂದ್ರ ಗಣಿ ಇಲಾಖೆ 1.5 ಕೋಟಿಯನ್ನು ಭದ್ರತಾ ವ್ಯವಸ್ಥೆಗೆ ಮಂಜೂರು ಮಾಡುತ್ತಿದೆ. ನೂರಾರು ಭದ್ರತಾ ಸಿಬ್ಬಂದಿ ಇದ್ದರೂ, ಅತಿಕ್ರಮಣ ತಡೆಗಟ್ಟಲು ಸಾಧ್ಯವಾಗಿಲ್ಲ ಏಕೆ? ಈ ನಿಟ್ಟಿನಲ್ಲಿ ನಮ್ಮ ಸಂಸ್ಥೆ ಸಂಬಂಧಿಸಿದ ಇಲಾಖೆಗೆ ದೂರು ಸಲ್ಲಿಸಿದೆ. ಸಂಸದ ಮಲ್ಲೇಶಬಾಬು ಕೂಡಲೇ ಮಧ್ಯಪ್ರವೇಶಿಸಿ, ಸರ್ಕಾರದ ಜಾಗ ಉಳಿಸಬೇಕು ಎಂದು ಒತ್ತಾಯಿಸಿದರು.

# ಭ್ರಷ್ಟಾಚಾರದ ವಿರುದ್ಧ ಈಡುಗಾಯಿ ಚಳವಳಿ

• ಉದಯವಾಹಿನಿ, ಮಂಡ್ಯ

ಶಾಸನ ಸಭೆಗಳು, ವಿಧಾನ ಪರಿಷತ್ತು, ಲೋಕಸಭೆಗಳು ಭ್ರಷ್ಟರಿಂದ ತುಂಬಿದೆ. ಭ್ರಷ್ಟಾಚಾರ ನಿಲ್ಲದಿದ್ದರೆ ಪ್ರಜಾಪ್ರಭುತ್ವಕ್ಕೆ ಅಪಾಯವಿದೆ ಎಂದು ಕನ್ನಡ ಚಳವಳಿ ವಾಟಾಳ್ ಪಕ್ಷದ ಅಧ್ಯಕ್ಷ ವಾಟಾಳ್ ನಾಗರಾಜ್ ಕಳವಳ ವ್ಯಕ್ತಪಡಿಸಿದರು. ಭ್ರಷ್ಟಾಚಾರ ವಿರೋಧಿ ದಿನಾಚರಣೆ ಅಂಗವಾಗಿ ಮಂಡ್ಯದ ಜಯಚಾಮರಾಜೇಂದ್ರ ವೃತ್ತದಲ್ಲಿ ಶನಿವಾರ ಭ್ರಷ್ಟಾಚಾರದ ವಿರುದ್ಧ ಈಡುಗಾಯಿ ಒಡೆಯುವ ಚಳವಳಿ ನಡೆಸಿದರು.

ಭ್ರಷ್ಟಾಚಾರ ಎಲ್ಲೆ ಮೀರಿ ಹೋಗಿದೆ. ಪ್ರಾಮಾಣಿಕತೆಗೆ ಬೆಲೆಯೇ ಇಲ್ಲ. ಭ್ರಷ್ಟಾಚಾರಿಗಳು ಪರಮಪವಿತ್ರರ ರೀತಿ ನಡೆದುಕೊಳ್ಳುತ್ತಿದ್ದಾರೆ. ಭ್ರಷ್ಟಾಚಾರಿಗಳನ್ನು ಹೊಗಳುತ್ತಿದ್ದಾರೆ. ಜೈಲಿನಿಂದ ಬಂದಂತಹ ಭ್ರಷ್ಟಾಚಾರಿಗಳಿಗೆ ಹಾರ, ತುರಾಯಿ ಹಾಕಿ ಸ್ವಾಗತಿಸಲಾಗುತ್ತಿದೆ ಎಂದು ಬೇಸರ ಹೊರ ಹಾಕಿದರು. ಆಡಳಿತ ನಡೆಸುತ್ತಿರುವ ಅಧಿಕಾರಿಗಳು, ರಾಜಕಾರಣಿಗಳು, ಭ್ರಷ್ಟಾಚಾರದಲ್ಲಿ ಒಂದಾಗಿದ್ದಾರೆ. ಪರಮ ಪವಿತ್ರವಾದಂತಹ ಚುನಾವಣೆ ಭ್ರಷ್ಟಾಚಾರವಾಗಿದೆ. ತತ್ವ ಸಿದ್ಧಾಂತಗಳೆಲ್ಲವನ್ನು ಗಾಳಿಗೆ ತೂರಲಾಗಿದೆ ಎಂದು ದೂರಿದರು.

ಭ್ರಷ್ಟರಿಗೆ ಜೆಸಿಬಿಯಲ್ಲಿ ಹಾರ, ತುರಾಯಿಗಳನ್ನು ಹಾಕುತ್ತಿದ್ದಾರೆ. ನೂರಾರು ಕೋಟಿ ಖರ್ಚು ಮಾಡಿ ಸಭೆ, ಸಮಾರಂಭಗಳು


ಉದಯವಾಹಿನಿ ಚಿತ್ರ

ನಡೆಯುತ್ತಿವೆ. ಮಹಾತ್ಮ ಗಾಂಧೀಜಿಯವರು ಈ ದೇಶದ ಸ್ವಾತಂತ್ರ್ಯಕ್ಕಾಗಿ ಪ್ರಾಮಾಣಿಕವಾದ ಹೋರಾಟ ನಡೆಸಿದ್ದಾರೆ. ಅವರ ಜೀವನವೇ ದಿವ್ಯ ಸಂದೇಶ. ಸ್ವಾತಂತ್ರ್ಯ ಬಂದಿರೋದು ಭ್ರಷ್ಟಾಚಾರ ನಡೆಸಲು ಅಲ್ಲ ಲೂಟಿ ಮಾಡಲು ಅಲ್ಲ ಎಂದು ಕಿಡಿಕಾರಿದರು.

**ಕನ್ನಡ ಶಕ್ತಿ ಉದಯವಾಗಲಿ:** ಭ್ರಷ್ಟಾಚಾರ ತೊಲಗಿಸಲು ಕನ್ನಡ ಚಳವಳಿ ವಾಟಾಳ್ ಪಕ್ಷ ಬೀದಿಗಿಳಿದಿದೆ. ಬಿಜೆಪಿ-ಜೆಡಿಎಸ್-ಕಾಂಗ್ರೆಸ್ ದುರಾಡಳಿತ ನಡೆಸಿ ಭ್ರಷ್ಟಾಚಾರವೆಸಗಿವೆ. ಈಗ ಕನ್ನಡ ಶಕ್ತಿ ರಾಜ್ಯದಲ್ಲಿ ಉದಯವಾಗಬೇಕಾಗಿದೆ. ಬೀದರ್‌ನಿಂದ ಚಾಮರಾಜನಗರದವರೆಗೆ, ಕೋಲಾರದಿಂದ ಮಂಗಳೂರಿನವರೆಗೆ ಕರ್ನಾಟಕ ಹೊಸ ಶಕ್ತಿಯನ್ನು ಕಾಣಬೇಕಾಗಿದೆ. ಭ್ರಷ್ಟಾಚಾರ ನಿರ್ಮೂಲನೆ ಮಾಡಲು ತಮ್ಮ ಪಕ್ಷ ಹೋರಾಟದ ನಡೆಸುತ್ತಿದೆ ಎಂದು ವಾಟಾಳ್ ನಾಗರಾಜ್ ಹೇಳಿದರು.

# ರಸ್ತೆ ಅಭಿವೃದ್ಧಿ ಪಡಿಸಲು ಆಗ್ರಹ

• ಉದಯವಾಹಿನಿ, ಬೆಳಕವಾಡಿ

ಗ್ರಾಮದ ಕಾವೇರಿ ನದಿಗೆ ಹೋಗುವ ರಸ್ತೆಯ ಡಾಂಬರ್ ಜಲ್ಲಿ ಕಲ್ಲು ಕಿತ್ತು ಹೋಗಿ ಗುಂಡಿಗಳಿಂದ ಕೂಡಿದ್ದು, ಜನರ ಓಡಾಟಕ್ಕೆ, ವಾಹನ ಸಂಚಾರಕ್ಕೆ ತೊಂದರೆ ಉಂಟಾಗಿದೆ. ಗ್ರಾಮದ ನೆರಳೇ ಮರದಿಂದ ಕಾವೇರಿ ನದಿಯ ಹೊರಗೆ ಸುಮಾರು


ಉದಯವಾಹಿನಿ ಚಿತ್ರ

ಮುಕ್ಕಾಲು ಕಿ.ಮೀ ಉದ್ದಕ್ಕೂ ರಸ್ತೆಯ ಡಾಂಬರ್ ಜಲ್ಲಿ ಕಲ್ಲು ಕಿತ್ತು ಹೋಗಿ ಗುಂಡಿಗಳಿಂದ ಕೂಡಿದ್ದು ಸಂಪೂರ್ಣ ಹಾಳಾಗಿದೆ. ಕಾವೇರಿ ನದಿ ತೀರದಲ್ಲಿ ಕಾಶೀ ವಿಶ್ವನಾಥ, ಶಂಭುಲಿಂಗೇಶ್ವರ, ಶನೇಶ್ವರ, ನಾಗರ ಕಲ್ಲು ಹಾಗೂ ಸಲ್ಮಾನ, ಜಮೀನುಗಳಿದ್ದು ಜನರ ಓಡಾಟಕ್ಕೆ, ವಾಹನ ಸಂಚಾರಕ್ಕೆ ಸಮಸ್ಯೆಯಾಗಿದೆ.


ಹಾಗಾಗಿ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಇತ್ತ ಗಮನ ಹರಿಸಿ ಕಾವೇರಿ ನದಿ ರಸ್ತೆ ಅಭಿವೃದ್ಧಿ ಪಡಿಸಿ ಜನರಿಗೆ ಅನುಕೂಲ ಕಲ್ಪಿಸಬೇಕೆಂದು ಗ್ರಾಮದ ಶಿವಣ್ಣ, ಮಹೇಶ್, ಸತೀಶ್ ಆಗ್ರಹಿಸಿದ್ದಾರೆ.

# ಸಾಮಾಜಿಕ ಸಮಸ್ಯೆಗೆ ಇಂಜಿನಿಯರ್ಸ್ ಸ್ಪಂದಿಸಲಿ: ಜಿಲ್ಲಾಧಿಕಾರಿ

• ಉದಯವಾಹಿನಿ, ಕೋಲಾರ

ದೊಡ್ಡ ದೊಡ್ಡ ಇಂಜಿನಿಯರ್‌ಗಳನ್ನು ರೂಪಿಸಿದ್ದರೂ, ಎಷ್ಟೆಲ್ಲಾ ಪ್ರತಿಭೆಗಳಿದ್ದರೂ ನಮ್ಮ ನಗರಗಳೇಕೆ ಯೋಜನಾ ಬದ್ಧವಾಗಿಲ್ಲ ಕೋಲಾರ ನಗರವೇ ಅದಕ್ಕೊಂದು ಉದಾಹರಣೆ. ಸಾಮಾಜಿಕ ಸಮಸ್ಯೆಗಳಿಗೆ ಇಂಜಿನಿಯರ್‌ಗಳು ಸ್ಪಂದಿಸಬೇಕು, ತಮ್ಮ ಕ್ಷೇತ್ರಕ್ಕೆ ಸಂಬಂಧಿಸಿದ ಕೌಶಲ ಬೆಳೆಸಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಎಂ.ಆರ್.ರವಿ ಸಲಹೆ ನೀಡಿದರು. ನಗರ ಹೊರವಲಯದ ಸಿ.ಬೈರೇಗೌಡ ತಾಂತ್ರಿಕ ಸಂಸ್ಥೆಯಲ್ಲಿ ನಡೆದ ಪದವಿ ಪ್ರದಾನ-2026 ಕಾರ್ಯಕ್ರಮದಲ್ಲಿ ಅವರು ವಿಶೇಷ ಉಪನ್ಯಾಸ ನೀಡಿದರು.

ವಿದೇಶಕ್ಕೆ ಪ್ರತಿಭಾ ಪಲಾಯನವಾಗುತ್ತಿದೆ. ಅಲ್ಲಿ ಹೋಗಿ ದೊಡ್ಡದೊಡ್ಡ ಯೋಜನೆಗಳಿಗೆ ವಿನ್ಯಾಸ ಮಾಡುತ್ತಿದ್ದಾರೆ. ಆದರೆ, ಅವರ ಪೋಷಕರು ಮಾತ್ರ ಇಲ್ಲಿನ ಅದೇ ಅಡ್ಡದಿಡ್ಡಿ ಬೆಳೆದಿರುವ ನಗರದಲ್ಲಿ ವಾಸ ಮಾಡುತ್ತಿದ್ದಾರೆ. ಯಾವುದೇ ದೇಶಕ್ಕೆ ಹೋಗಿ ಕೆಲಸ ಮಾಡಿ, ಆದರೆ ಜನ್ಮ ನೀಡಿದ ದೇಶಕ್ಕೂ ಸ್ವಲ್ಪ ಕೊಡುಗೆ ನೀಡುವುದನ್ನು ಮರೆಯಬೇಡಿ ಎಂದು ಮನವಿ



ಉದಯವಾಹಿನಿ ಚಿತ್ರ

ಮಾಡಿದರು.ವಿಶ್ವವಿದ್ಯಾಲಯಗಳು ಹಾಗೂ ಕಾಲೇಜುಗಳು ಕೇವಲ ಪದವೀಧರರನ್ನು ಸೃಷ್ಟಿಸುತ್ತಿವೆ. ಪೋಷಕರು ತಮ್ಮಷ್ಟು ಓದಿಲ್ಲ, ಹೆಚ್ಚಿನವರು ವಿಶ್ವವಿದ್ಯಾಲಯದಮೆಟ್ಟಿಲು ಹತ್ತಿದವರಲ್ಲ. ಆದರೆ ಅವರ ಜೀವನ ಕೌಶಲ, ಜೀವನ ಪ್ರೀತಿ, ಸವಾಲುಗಳನ್ನು ಎದುರಿಸುವ ಚಾಕಚಕ್ಯತೆಯನ್ನು ಯಾವುದೇ ಕಾಲೇಜು, ವಿಶ್ವವಿದ್ಯಾಲಯ ಕಲಿಸಲ್ಲ ಎಂದು ಅಭಿಪ್ರಾಯಪಟ್ಟರು.

ತಂದೆ ತಾಯಿಗಳೇ ರೋಲ್ ಮಾಡೆಲ್ ಆಗಿರಬೇಕು. ತಮ್ಮ ಎಲ್ಲಾ ಸಾಧನೆಗಳಿಗೆ ಅವರೇ ಕಾರಣ. ತಾವು ಶ್ರೇಷ್ಠ ಇಂಜಿನಿಯರ್ ಆಗಬಹುದು; ಆದರೆ ಅವರು ಬಯಸುವುದು ಉತ್ತಮ ವ್ಯಕ್ತಿತ್ವವನ್ನು. ಹೀಗಾಗಿ, ಶಿಕ್ಷಕರು ಹಾಗೂ ಪೋಷಕರ ಶ್ರಮವನ್ನು ಮರೆಯಬಾರದು ಎಂದು ಕಿವಿಮಾತು ಹೇಳಿದರು. ಶಿಕ್ಷಣ ವಾಣಿಜೀಕರಣಗೊಂಡಿರುವ ಈ ಕಾಲಘಟ್ಟದಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ತಾಂತ್ರಿಕ ಕಾಲೇಜು ಸ್ಥಾಪನೆ ಮಾಡುವುದು ತಮಾಷೆಯಲ್ಲ. 285 ಪದವೀಧರರಲ್ಲಿ 180 ವಿದ್ಯಾರ್ಥಿಗಳಿಗೆ ಪ್ಲೇಸ್‌ಮೆಂಟ್ ಆಗಿರುವುದು ಸಂತೋಷದ ವಿಚಾರ ಎಂದು ತಿಳಿಸಿದರು.

ಕಾಲೇಜಿನ ಕಾರ್ಯದರ್ಶಿ ವಿ.ಕೃಷ್ಣಾರೆಡ್ಡಿ ಮಾತನಾಡಿ, ವಿದ್ಯಾರ್ಥಿಗಳ ಶ್ರಮದಲ್ಲಿ ಪೋಷಕರ ಬೆವರು ಇದೆ. ಅವರ ಆಸೆ ಪೂರೈಸಿ. ಅವರ ಕಣ್ಣಲ್ಲಿ ನೀರು ಹಾಕಿಸಬೇಡಿ ಎಂದರು.

ಮಾಜಿ ಸಚಿವ ದಿವಂಗತ ಸಿ.ಬೈರೇಗೌಡರಿಗೆ ಗ್ರಾಮಾಂತರ ಪ್ರದೇಶದಲ್ಲಿ ತಾಂತ್ರಿಕ ಶಿಕ್ಷಣ ಕೊಡಬೇಕೆಂಬುದು ಆಸೆ ಇತ್ತು. ಅವರ ಕಾಲದಲ್ಲಿ ಪೂರೈಸಲು ಆಗಲಿಲ್ಲ. ಅವರ ಶಿಷ್ಯರಾಗಿ ನಾನು ಹಾಗೂ ಪ್ರಭಾಕರ್ ರೆಡ್ಡಿ ಈ ಕಾಲೇಜು ಸ್ಥಾಪಿಸಿದೆವು ಎಂದು ಹೇಳಿದರು.

# ಅರ್ಹರೆಲ್ಲರಿಗೂ ಪಂಚ ಗ್ಯಾರಂಟಿ ತಲುಪಿಸಿ

## ಬಸ್ ನಿಲ್ದಾಣಗಳಲ್ಲಿ ಕುಡಿಯುವ ನೀರಿನ ಆರ್‌ಒ ಘಟಕಗಳನ್ನು ಅಳವಡಿಸಬೇಕು

• ಉದಯವಾಹಿನಿ, ಮೈಸೂರು

ಜಿಲ್ಲೆಯ ಎಲ್ಲಾ ಅರ್ಹ ಫಲಾನುಭವಿಗಳಿಗೂ 'ಪಂಚ ಗ್ಯಾರಂಟಿ' ಯೋಜನೆಗಳ ಸೌಲಭ್ಯಗಳು ತಲುಪುವಂತೆ ಅಧಿಕಾರಿಗಳು ನೋಡಿಕೊಳ್ಳಬೇಕು ಎಂದು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಜಿಲ್ಲಾ ಅಧ್ಯಕ್ಷ ಅರುಣ್‌ಕುಮಾರ್ ಸೂಚಿಸಿದರು.ಇಲ್ಲಿನ ಜಿಲ್ಲಾ ಪಂಚಾಯಿತಿಯ ಡಿ.ದೇವರಾಜ ಅರಸು ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.ಬಸ್ ನಿಲ್ದಾಣಗಳಲ್ಲಿ ಕುಡಿಯುವ ನೀರಿನ ಆರ್‌ಒ ಘಟಕಗಳನ್ನು ಅಳವಡಿಸಬೇಕು. ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಟಿಕೆಟ್ ಹಣವನ್ನು ಆನ್‌ಲೈನ್‌ನಲ್ಲೂ ಪಾವತಿಸಲು ವ್ಯವಸ್ಥೆ ಇರುವ ಬಗ್ಗೆ ಫಲಕಗಳನ್ನು ಅಳವಡಿ ಸಬೇಕು. ಈ ಬಗ್ಗೆ ಪ್ರಯಾಣಿಕರಿಗೆ ಮಾಹಿತಿ ಮಾಡಬೇಕು. ನಿರ್ವಾಹಕರು ಪ್ರಯಾಣಿಕರೊಂದಿಗೆ ಸೌಜನ್ಯದಿಂದ ವರ್ತಿಸಬೇಕು ಎಂದು ಹೇಳಿದರು. ಕೆಲವು ಮಹಿಳೆಯರಿಗೆ ಗೃಹಲಕ್ಷ್ಮಿ ಹಣ ದೊರೆಯುತ್ತಿಲ್ಲ ಎಂಬ ದೂರುಗಳಿದ್ದು, ಇದನ್ನು ಪರಿಶೀಲಿಸಬೇಕು ಎಂದು ನಿರ್ದೇಶನ ನೀಡಿದರು.

**ಪರಿಶೀಲಿಸಿ ಸೇರ್ಪಡೆ:** ಇದಕ್ಕೆ ಪ್ರತಿಕ್ರಿಯಿಸಿದ ಮಹಿಳಾ, ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕ ಬಸವರಾಜ್, ಆದಾಯ ತೆರಿಗೆ ಪಾವತಿದಾರರಿಗೆ ಗೃಹಲಕ್ಷ್ಮಿ ಹಣ ನೀಡಲು ನಿಯಮದಲ್ಲಿ ಅವಕಾಶವಿಲ್ಲ. ಯಾರಾದರೂ ಅರ್ಹ ಫಲಾನುಭವಿಗಳು ಬಿಟ್ಟು ಹೋಗಿದ್ದರೆ ಪರಿಶೀಲಿಸಿ ಸೇರ್ಪಡೆ ಮಾಡಲಾಗುವುದು' ಎಂದು


ಉದಯವಾಹಿನಿ ಚಿತ್ರ

ತಿಳಿಸಿದರು. ಬಿಪಿಎಲ್ ಕಾರ್ಡ್ ಮಾಡಿಸಲು ಪೋರ್ಟಲ್‌ನಲ್ಲಿ ಅವಕಾಶ ಕಲ್ಪಿಸಿದಾಗ ಪತ್ರಿಕಾ ಪ್ರಕಟಣೆ ನೀಡಿ ಸಾರ್ವಜನಿಕರಿಗೆ ಮಾಹಿತಿ ದೊರೆಯುವಂತೆ ಮಾಡಬೇಕು. ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯಲು ಬಿಪಿಎಲ್ ಕಾರ್ಡ್ ಅತ್ಯವಶ್ಯವಾಗಿದೆ. ಬಿಪಿಎಲ್ ಕಾರ್ಡ್ ಇಲ್ಲದಿದ್ದರೆ ರಿಯಾಯಿತಿ ದರದಲ್ಲಿ ಚಿಕಿತ್ಸೆ ಹಾಗೂ ಸ್ಕ್ಯಾನಿಂಗ್ ಸೌಲಭ್ಯಗಳು ದೊರೆಯುವುದಿಲ್ಲ. ಆದ್ದರಿಂದ ಅರ್ಹರಿಗೆ ಬಿಪಿಎಲ್ ಕಾರ್ಡ್ ನೀಡಲು ಕ್ರಮ ಕೈಗೊಳ್ಳಬೇಕು ಎಂದು ಅಧ್ಯಕ್ಷರು ಆಹಾರ ಇಲಾಖೆಯ ಉಪ ನಿರ್ದೇಶಕರಿ ಸೂಚಿಸಿದರು.

**ಜಿಲ್ಲೆಯಲ್ಲಿ 9,68,228 ಫಲಾನುಭವಿಗಳು 'ಗೃಹಜ್ಯೋತಿ' ಯೋಜನೆಯಡಿ ನೋಂದಾಯಿಸಿದ್ದಾರೆ. 6,548 ಫಲಾನುಭವಿಗಳು ನೋಂದಣಿಗೆ ಬಾಕಿ ಇದ್ದಾರೆ. ಶೇ 60ರಷ್ಟು ಫಲಾನುಭವಿಗಳಿಗೆ ಶೂನ್ಯ ಬಿಲ್ ಬರುತ್ತಿದೆ. ಶೇ. 40ರಷ್ಟು ಫಲಾನುಭವಿಗಳು ಸರಾಸರಿಗಿಂತ ಹೆಚ್ಚಿನ ವಿದ್ಯುತ್ ಬಳಕೆ ಮಾಡುವುದರಿಂದ, ಅದಕ್ಕೆ ಹಣ ಪಾವತಿಸುವಂತೆ ಬಿಲ್ ನೀಡಲಾಗುತ್ತಿದೆ.**
**-ಸುನಿಲ್, 'ಸೆಸ್ಕ್' ಎಸ್‌ಇ**

ಜಿಲ್ಲಾ ಪಂಚಾಯಿತಿ ಸಿಇಒ ಎಸ್. ಯುಕೇಶ್‌ಕುಮಾರ್ ಮಾತನಾಡಿ, ಗೃಹಲಕ್ಷ್ಮಿ ಹಣವನ್ನು ಯಾವುದೇ ಬ್ಯಾಂಕ್‌ನವರು ಸಾಲಕ್ಕೆ ವಜಾ ಮಾಡಿಕೊಳ್ಳದೆ ಮಾನವೀಯತೆ ಆಧಾರದ ಮೇಲೆ ಫಲಾನುಭವಿಗಳಿಗೆ ಬಿಡುಗಡೆ ಮಾಡಬೇಕು. ಯೋಜನೆಯ ಫಲಾನುಭವಿ ಮರಣ ಹೊಂದಿದರೆ ಅವರಿಗೆ ಹಣ ಪಾವತಿ ಆಗದಂತೆ ಅಧಿಕಾರಿಗಳು ನೋಡಿಕೊಳ್ಳಬೇಕು ಎಂದು ತಿಳಿಸಿದರು.

ಪ್ರಾಧಿಕಾರದ ಉಪಾಧ್ಯಕ್ಷ ಶಿವಕುಮಾರ್ ಮಾತನಾಡಿ, 'ಮರಣ ಹೊಂದಿದವರಿಗೂ ಗೃಹಲಕ್ಷ್ಮಿ ಹಣ ಸಂದಾಯವಾಗುತ್ತದೆ. ಅಂಥವರ ಖಾತೆಗಳಿಗೆ ಹಣ ಹಾಕುವುದು ಸ್ಥಗಿತಗೊಳಿಸಬೇಕು. ನಿಧನರಾದ ನಂತರವೂ ಹಣ ಪಾವತಿಯಾಗಿದ್ದರೆ, ಕುಟುಂಬದವರಿಂದ ಹಿಂಪಡೆಯಬೇಕು. ಮುಂದೆ ಯಾರೇ ಫಲಾನುಭವಿ ಮರಣ ಹೊಂದಿದರೆ ಹಣ ಪಾವತಿ ಸ್ಥಗಿತವಾಗುವಂತೆ ತಂತ್ರಜ್ಞಾನ ಅಳವಡಿಸಿಕೊಳ್ಳಬೇಕು ಎಂದರು.

### 23ಸಾವಿರ ಬಿಪಿಎಲ್ ಚೀಟಿ ಎಪಿಎಲ್‌ಗೆ

**ಆಹಾರ ಮತ್ತು ನಾಗರಿಕ ಸರಬರಾಜು, ಗ್ರಾಹಕರ ವ್ಯವಹಾರಗಳ ಇಲಾಖೆಯ ಜಂಟಿ ನಿರ್ದೇಶಕ ಮಂಟೇಸ್ವಾಮಿ ಮಾತನಾಡಿ, ಜಿಲ್ಲೆಯಲ್ಲಿ 6,80,301 ಪಡಿತರ ಚೀಟಿಗಳಿವೆ. ಐಟಿ ಪಾವತಿಸುವುದು ಸೇರಿದಂತೆ ವಿವಿಧ ಕಾರಣಗಳಿಂದಾಗಿ 23ಸಾವಿರ ಚೀಟಿಗಳನ್ನು ಎಪಿಎಲ್‌ಗೆ ಪರಿವರ್ತಿಸಲಾಗಿದೆ' ಎಂದು ಮಾಹಿತಿ ನೀಡಿದರು.**

## ಮಿನಿ ನ್ಯೂಸ್

# ರಾಜ್ಯದಲ್ಲಿ ಬಿಜೆಪಿ-ಜೆಡಿಎಸ್ ಮೈತ್ರಿಯ ಸರ್ಕಾರ ಅಧಿಕಾರಕ್ಕೆ ತನ್ನಿ : ಹೆಚ್‌ಡಿಕೆ

• ಉದಯವಾಹಿನಿ, ತುಮಕೂರು

ರಾಜ್ಯದ ಪ್ರಸ್ತುತ ಕಾಂಗ್ರೆಸ್ ಸರ್ಕಾರದ ಆಡಳಿತ ವೈಖರಿಗೆ ಜನರು ಬೇಸತ್ತಿದ್ದಾರೆ. ಮುಂದಿನ ದಿನಗಳಲ್ಲಿ ಬಿಜೆಪಿ, ಜೆಡಿಎಸ್‌ಮೈತ್ರಿಯ ಜನಪರ ಸರ್ಕಾರವನ್ನು ಅಧಿಕಾರಕ್ಕೆ ತರಲು ಜನರು ಆಶೀರ್ವದಿಸಬೇಕು ಎಂದು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಮನವಿ ಮಾಡಿದ್ದಾರೆ. ತಾಲ್ಲೂಕಿನ ಮುಳಕುಂಟೆ ಗ್ರಾಮದಲ್ಲಿ ನಡೆದ ಶ್ರೀ ವಿಜಯ ಚೌಡೇಶ್ವರಿ ದೇವಿ ಜಾತ್ರಾ ಮಹೋತ್ಸವದಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಬದಲಾವಣೆಯ ಗಾಳಿ ಬೀಸುತ್ತಿದ್ದು, ಜನರು ಉತ್ತಮ ಆಡಳಿತವನ್ನು ಬಯಸುತ್ತಿದ್ದಾರೆ. ಹೀಗಾಗಿ ಮುಂಬರುವ ಚುನಾವಣೆಗಳಲ್ಲಿ ಬಿಜೆಪಿ-ಜೆಡಿಎಸ್ ಮೈತ್ರಿಕೂಟವನ್ನು ಬೆಂಬಲಿಸುವ ಮೂಲಕ ಜನಪರ ಸರ್ಕಾರ ರಚಿಸಲು ಸಹಕರಿಸಬೇಕು ಎಂದು ತಿಳಿಸಿದರು. ಕಳೆದ ಲೋಕಸಭಾ ಚುನಾವಣೆಯಲ್ಲಿ ಕ್ಷೇತ್ರದಿಂದ ವಿ. ಸೋಮಣ್ಣ ಅವರನ್ನು ದಾಖಲೆ ಮತಗಳ ಅಂತರದಿಂದ ಗೆಲ್ಲಿಸಿದ್ದಕ್ಕೆ ಮತದಾರರಿಗೆ ಕೃತಜ್ಞತೆ ಸಲ್ಲಿಸಿದರು. ಈ ಗೆಲುವಿನಿಂದಾಗಿ ಸೋಮಣ್ಣ, ತಮಗೆ ಕೇಂದ್ರ ಸಚಿವರಾಗಿ ಸೇವೆ ಸಲ್ಲಿಸಲು ಅವಕಾಶ ಸಿಕ್ಕಿದೆ ಎಂದು ಸರಿಸಿದರು. ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಎನ್‌ಡಿಎ ಮೈತ್ರಿಕೂಟವು ಪಶ್ಚಿಮ ಬಂಗಾಳದ ವಿಧಾನಸಭಾ ಚುನಾವಣೆಯಲ್ಲಿ ಐತಿಹಾಸಿಕ ಜಯ ಸಾಧಿಸಿದೆ. ಈ ಫಲಿತಾಂಶ ದೇಶದ ಮುಂದಿನ ರಾಜಕೀಯ ಬೆಳವಣಿಗೆಗಳಿಗೆ ದಿಕ್ಸೂಚಿಯಾಗಿದೆ ಎಂದು ಕುಮಾರಸ್ವಾಮಿ ಅಭಿಪ್ರಾಯಪಟ್ಟರು ಕೇಂದ್ರ ಸಚಿವ ಸಂಪುಟ ಸಭೆಯಲ್ಲಿ ಭಾಗವಹಿಸಬೇಕಿರುವ ಕಾರಣ ಜಾತ್ರಾ ಮಹೋತ್ಸವದ ಬಳಿಕ ಅವರು ತುರ್ತಾಗಿ ದೆಹಲಿಗೆ ಪ್ರಯಾಣ ಬೆಳೆಸಿದರು. ಕಾರ್ಯಕ್ರಮಕ್ಕೂ ಮುನ್ನ ಸಚಿವರು ವಿಜಯ ಚೌಡೇಶ್ವರಿ ದೇವಿಯ ದರ್ಶನ ಪಡೆದು ವಿಶೇಷ ಪೂಜೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಮೈತ್ರಿ ಪಕ್ಷಗಳ ನಾಯಕರು ಹಾಗೂ ಅಪಾರ ಸಂಖ್ಯೆಯ ಗ್ರಾಮಸ್ಥರು ಉಪಸ್ಥಿತರಿದ್ದರು.

# ಕೆರೆಯಲ್ಲಿ ಈಜಲು ಹೋದ ಅಣ್ಣ-ತಮ್ಮ ನೀರುಪಾಲು

• ಉದಯವಾಹಿನಿ, ಕೋಲಾರ


ಕೆರೆಯಲ್ಲಿ ಈಜಲು ಹೋದ ಅಣ್ಣ-ತಮ್ಮ ಇಬ್ಬರೂ ನೀರುಪಾಲಾಗಿರುವ ಘಟನೆ ಕೋಲಾರದಲ್ಲಿ ನಡೆದಿದೆ. ಕೋಲಾರ ಜಿಲ್ಲೆಯ ಶ್ರೀನಿವಾಸಪುರ ತಾಲೂಕಿನ ಲಕ್ಷ್ಮಿಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಪಚ್ಚರಮಾಕಲಹಳ್ಳಿ ಬಳಿ ಈ ದುರ್ಘಟನೆ ಸಂಭವಿಸಿದೆ. ಮಾಹಿತಿಯ ಪ್ರಕಾರ, ಗಾರೆ ಕೆಲಸಕ್ಕೆಂದು ಪಚ್ಚರಮಾಕಲಹಳ್ಳಿಗೆ ತೆರಳಿದ್ದ ಯುವಕರು ಮಧ್ಯಾಹ್ನದ ತೀವ್ರ ಬಿಸಿಲಿನ ತಾಪಮಾನದಿಂದಾಗಿ ಸಮೀಪದ ಕೆರೆಯಲ್ಲಿ ಈಜಲು ಇಳಿದಿದ್ದಾರೆ. ಈ ವೇಳೆ ನೀರಿನ ಆಳ ಅಂದಾಜಿಸಲು ಸಾಧ್ಯವಾಗದೆ ಇಬ್ಬರೂ ಮುಳುಗಿ ಸಾವನ್ನಪ್ಪಿದ್ದಾರೆ ಎನ್ನಲಾಗಿದೆ.

ಇನ್ನೂ ಮೃತಪಟ್ಟ ಯುವಕರನ್ನು ರೋಣೂರು ಹೋಬಳಿ ವ್ಯಾಪ್ತಿಯ ಚಾಂಪಲ್ಲಿ ಗ್ರಾಮದ ನಿವಾಸಿಗಳಾದ ನರೇಂದ್ರ (25) ಹಾಗೂ ಚಂದನ್ (23) ಎಂದು ಗುರುತಿಸಲಾಗಿದೆ. ಕೆರೆಯಲ್ಲಿ ಈಜಲು ಹೋದ ಇಬ್ಬರು ಯುವಕರು ನೀರುಪಾಲಾದ ಹಿನ್ನೆಲೆ ಗ್ರಾಮದಲ್ಲಿ ಶೋಕ ಆವರಿಸಿದೆ. ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿದೆ. ರಾಯಲ್ಪಾಡು ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಈ ಘಟನೆ ನಡೆದಿದೆ. ಇಬ್ಬರು ಸಹ ಅಣ್ಣತಮ್ಮಂದಿರಾಗಿದ್ದು, ಯಾವುದೇ ಪ್ರಕರಣ ದಾಖಲಾಗದ ಹಿನ್ನೆಲೆ ಮರಣೋತ್ತರ ಪರೀಕ್ಷೆ ನಡೆದಿಲ್ಲ. ಹಿರಿಯರ ಸಮ್ಮುಖದಲ್ಲಿ ಸಂಬಂಧಿಕರು ಅಂತ್ಯಸಂಸ್ಕಾರ ಮಾಡಿದ್ದಾರೆ.

# ಅಕ್ರಮ ಗಾಂಜಾ ಸಾಗಣೆ ಓರ್ವನ ಬಂಧನ

• ಉದಯವಾಹಿನಿ, ಗುಂಡ್ಲುಪೇಟೆ

ಅಕ್ರಮವಾಗಿ ಗಾಂಜಾ ಸಾಗಣೆ ಮಾಡುತ್ತಿದ್ದ ವ್ಯಕ್ತಿಯನ್ನು ಗುಂಡ್ಲುಪೇಟೆ ಠಾಣೆ ಪೊಲೀಸರು ಬಂಧಿಸಿರುವ ಘಟನೆ ಪಟ್ಟಣದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ನಡೆದಿದೆ. ಕೇರಳದ ಮಾನಂದವಾಡಿಯ ಅಭಿಷೇಕ್ ಮುಮಾರ್ ಆರ್.(26) ಬಂಧಿತ ಆರೋಪಿಯಾಗಿದ್ದು ಈತ ಮೈಸೂರಿನಿಂದ ಗುಂಡ್ಲುಪೇಟೆಗೆ ಬಸ್‌ನಲ್ಲಿ ಅಕ್ರಮವಾಗಿ ಗಾಂಜಾ ಸಾಗಣೆ ಮಾಡುತ್ತಿರುವ ಕುರಿತು ದೊರೆತ ಖಚಿತ ಮಾಹಿತಿ ಮೇರೆಗೆ ಗುಂಡ್ಲುಪೇಟೆ ಠಾಣೆ ಪೊಲೀಸರು ದಾಳಿ ನಡೆಸಿ, ಪಟ್ಟಣದ ಸಾರಿಗೆ ಬಸ್ ನಿಲ್ದಾಣದಲ್ಲಿ ಈತನನ್ನು ಪರಿಶೀಲನೆಗೆ ಒಳಪಡಿಸಿದಾಗ ಬ್ಯಾಗ್‌ನಲ್ಲಿ 55 ಗ್ರಾಂ ಗಾಂಜಾ ಇರುವುದು ಕಂಡು ಬಂದ ಕೂಡಲೇ ಆತನನ್ನು ಬಂಧಿಸಿದ್ದಾರೆ. ಈ ಸಂಬಂಧ ಗುಂಡ್ಲುಪೇಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಉದಯವಾಹಿನಿ ಚಿತ್ರ

# ಚನ್ನಪಟ್ಟಣ-ಬೆಂಗಳೂರು: 'ವಜ್ರ' ಸಂಚಾರಕ್ಕೆ ಹಸಿರು ನಿಶಾನೆ

• ಉದಯವಾಹಿನಿ, ಚನ್ನಪಟ್ಟಣ

ಚನ್ನಪಟ್ಟಣ-ಬೆಂಗಳೂರು ನಡುವೆ ಸಂಚರಿಸುವ ಹವಾನಿಯಂತ್ರಿತ ವಜ್ರ ಬಿಎಂಟಿಸಿ ಬಸ್ ಸಂಚಾರಕ್ಕೆ ಬಮೂಲ್ ಅಧ್ಯಕ್ಷ ಡಿ.ಕೆ ಸುರೇಶ್, ಶಾಸಕ ಸಿ.ಪಿ. ಯೋಗೇಶ್ವರ್ ಹಸಿರು ನಿಶಾನೆ ತೋರಿಸಿದರು. ನಗರದ ಸರ್ಕಾರಿ ಬಸ್ ನಿಲ್ದಾಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಾರಿಗೆ ಇಲಾಖೆ, ಬಿಎಂಟಿಸಿ ಅಧಿಕಾರಿಗಳ ಸಮ್ಮುಖದಲ್ಲಿ ಚಾಲನೆ ನೀಡಿದ ನಂತರ ಎಲ್ಲರೂ ಬಸ್‌ನಲ್ಲಿ ತಾಲ್ಲೂಕಿನ ಬೈರಾಪಟ್ಟಣ ಬಮುಲ್ ಶಿಬಿರ ಕಚೇರಿವರೆಗೆ ಒಟ್ಟಿಗೆ ಪ್ರಯಾಣಿಸಿದರು.

ಪ್ರತಿ ದಿನ ಬೆಳಗ್ಗೆಯಿಂದ ರಾತ್ರಿವರೆಗೆ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಹವಾನಿಯಂತ್ರಿತ ಬಸ್‌ಗಳು ಚನ್ನಪಟ್ಟಣ-ಬೆಂಗಳೂರು ಮಧ್ಯೆ ಸಂಚರಿಸಲಿವೆ. ಬಿಎಂಟಿಸಿ ಬಸ್ ಸಂಚಾರದಿಂದ ಕೆಎಸ್‌ಆರ್‌ಟಿಸಿ ಬಸ್ ದಟ್ಟಣೆ, ಸಂಚಾರ ಒತ್ತಡ ಕಡಿಮೆಯಾಗಲಿದೆ ಎಂದು ಶಾಸಕ ಸಿ.ಪಿ. ಯೋಗೇಶ್ವರ್ ಹೇಳಿದರು.

# ಮೇ 13ಕ್ಕೆ ಆಯೋಗದ ಅಧ್ಯಕ್ಷ ಭೇಟಿ

• ಉದಯವಾಹಿನಿ, ರಾಮನಗರ

ಕರ್ನಾಟಕ ರಾಜ್ಯ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳ ಆಯೋಗದ ಅಧ್ಯಕ್ಷರು ಮೇ 13ರಂದು ಬೆಂಗಳೂರು ದಕ್ಷಿಣ ಜಿಲ್ಲೆಯ ಪ್ರವಾಸ ಕೈಗೊಂಡಿದ್ದಾರೆ. ಅಂದು ಸಮಾಜ ಕಲ್ಯಾಣ ಇಲಾಖೆ ಮತ್ತು ವಿವಿಧ ಇಲಾಖೆಗಳ ಅಧಿಕಾರಿಗಳ ಜೊತೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸಂಘ-ಸಂಸ್ಥೆಗಳ ಪದಾಧಿಕಾರಿಗಳ ಜೊತೆ ಪ್ರಗತಿ ಪರಿಶೀಲನಾ ಸಭೆ ಹಮ್ಮಿಕೊಂಡಿದ್ದಾರೆ. ಅಂದು ಬೆಳಿಗ್ಗೆ 11 ಗಂಟೆಗೆ ರಾಮನಗರದ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸಂಘ-ಸಂಸ್ಥೆಯ ಪದಾಧಿಕಾರಿಗಳೊಂದಿಗೆ ಸಭೆಯನ್ನು ಆಯೋಜಿಸಲಾಗಿದೆ. ಈ ಸಭೆಗೆ ಸಮುದಾಯದ ಪದಾಧಿಕಾರಿಗಳು ಭಾಗವಹಿಸಬೇಕು ಎಂದು ಬೆಂಗಳೂರು ದಕ್ಷಿಣ ಜಿಲ್ಲೆಯ ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಅಂತರಾಳದಿಂದ... EDITORIAL

# ಸಹಪಂಕ್ತಿ ಭೋಜನ, ದೇಗುಲ ಪ್ರವೇಶ: ಜಾತೀಯತೆ ತಿಳಿಗೊಳಿಸುವ ಸಂದೇಶ



ಮೈಸೂರು ಜಿಲ್ಲೆಯ ಹುಣಸೂರಿನಲ್ಲಿ ಇತ್ತೀಚೆಗೆ ನಡೆದಿರುವ ದಲಿತರು-ಬ್ರಾಹ್ಮಣರ ಸಹಭೋಜನದ ಕಾರ್ಯಕ್ರಮ ಸಾಮಾಜಿಕ ಸೌಹಾರ್ದದ ದೃಷ್ಟಿಯಿಂದ ಮಹತ್ವದ ಸಂಕೇತವಾಗಿದೆ. ಜಾತೀಯತೆಯನ್ನು ಬಲಪಡಿಸುವ ಹಾಗೂ ಜಾತಿದೌರ್ಜನ್ಯದ ಘಟನೆಗಳೇ ಎಲ್ಲೆಡೆ ಕಣ್ಣಿಗೆ ರಾಚುತ್ತಿರುವಾಗ, ಜಾತಿ ಹೆಸರಿನಲ್ಲಿ ನಡೆಯುವ ತರತಮಗಳನ್ನು ತಿಳಿಗೊಳಿಸುವ ನಿಟ್ಟಿನಲ್ಲಿ ಹುಣಸೂರಿನ ವಿದ್ಯಮಾನಕ್ಕೆ ವಿಶೇಷ ಮಹತ್ವವಿದೆ.

ಅಸ್ಪೃಶ್ಯತೆ ನಿರ್ಮೂಲನೆ ಉದ್ದೇಶದಿಂದ ದೇವಸ್ಥಾನದ ಆಡಳಿತ ಮಂಡಳಿ ಹಾಗೂ ದಲಿತ ಸಂಘರ್ಷ ಸಮಿತಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ, ದೇವಸ್ಥಾನದ ಆವರಣಕ್ಕೆ ಸೀಮಿತವಾಗಿದ್ದ ದಲಿತರನ್ನು ಮಂದಿರ ಪ್ರವೇಶ ಮಾಡಿಸಿ, ಮಂಗಳಾರತಿಯನ್ನು ನೀಡಲಾಗಿದೆ. ಬ್ರಾಹ್ಮಣರ ಬೀದಿಯಲ್ಲಿರುವ ಲಕ್ಷ್ಮೀನರಸಿಂಹ ಸ್ವಾಮಿ ದೇವಾಲಯದ ಆವರಣದಲ್ಲಿ ದಲಿತರೊಂದಿಗೆ ಬ್ರಾಹ್ಮಣರು ಸಹಪಂಕ್ತಿ ಭೋಜನ ಮಾಡಿದ್ದಾರೆ. ಈ ಮೂಲಕ ಅನಿಷ್ಟ ಜಾತಿಪದ್ಧತಿಯನ್ನು ತೊಡೆದುಹಾಕುವ ಸಂದೇಶ ನೀಡಲಾಗಿದೆ. ಬ್ರಾಹ್ಮಣರು ಮತ್ತು ಸಾಮಾಜಿಕವಾಗಿ ಪ್ರಬಲವಾದ ಇತರೆ ಸಮುದಾಯಗಳು ದಲಿತರನ್ನು ದೂರವಿಟ್ಟದ್ದರಿಂದ ಕಳೆದುಕೊಂಡಿದ್ದೇ ಜಾಸ್ತಿ ಎನ್ನುವ ಅರಿವು ಹಾಗೂ ದಲಿತರೊಂದಿಗಿನ ಒಡನಾಟದ ಮೂಲಕ ಅಸ್ಪೃಶ್ಯತೆ ನಿರ್ಮೂಲನೆ ಮಾಡುವುದು ಅವಶ್ಯ ಎನ್ನುವ ವಿವೇಕ ಈ ಹೊತ್ತಿಗೆ ಅಗತ್ಯವಾದುದು.

ಸಂವಿಧಾನವು ದಶಕಗಳ ಹಿಂದೆಯೇ ದೇಶದ ಎಲ್ಲಾ ನಾಗರಿಕರಿಗೂ ಸಮಾನ ಹಕ್ಕುಗಳನ್ನು ನೀಡಿದೆ ಹಾಗೂ ಜಾತಿ ತಾರತಮ್ಯಗಳನ್ನು ನಿರ್ಬಂಧಿಸಿದೆ. ಆದರೆ, ದೇಶದ ಅನೇಕ ಭಾಗಗಳಲ್ಲಿ ಈಗಲೂ ದಲಿತರನ್ನು ದೇವಸ್ಥಾನಗಳ ಹೊರ ಆವರಣದಲ್ಲಿಯೇ ಉಳಿಸಲಾಗಿದೆ. ಕುಡಿಯುವ ನೀರು, ಆಹಾರದಂಥ ಜೀವನವಶ್ಯಕ ಸಂಗತಿಗಳಿಂದ ಹಿಡಿದು ಕ್ಷೌರ, ಹೋಟೆಲ್‌ಗಳಂಥ ಸಾರ್ವಜನಿಕ ಸೇವೆಗಳಿಗೆ ಸಂಬಂಧಿಸಿದಂತೆಯೂ ಜಾತೀಯತೆ ಆಚರಿಸಲಾಗುತ್ತಿದೆ. ದೇವರ ಕೋಲನ್ನು ಬಾಲಕನೊಬ್ಬ ಮುಟ್ಟಿದ ಕಾರಣಕ್ಕೆ ಕುಟುಂಬವನ್ನು ಬಹಿಷ್ಕರಿಸುವ, ಪರಿಶಿಷ್ಟ ಜಾತಿಯ ಮಹಿಳೆ ನೀರು ಕುಡಿದಳೆನ್ನುವ ಕಾರಣಕ್ಕಾಗಿ ಕಿರು ನೀರು ಸರಬರಾಜು ಟ್ಯಾಂಕ್ ಸ್ವಚ್ಛಗೊಳಿ ಸುವ ಘಟನೆಗಳು ರಾಜ್ಯದಲ್ಲಿ ನಡೆದಿವೆ. ದಲಿತರ ಮೇಲೆ ಹಲ್ಲೆ, ಅತ್ಯಾಚಾರ, ಅವಮಾನ ಎಸಗುವಂಥ ಘಟನೆಗಳು ನಾಡಿನ ಒಂದಲ್ಲಾ ಒಂದು ಕಡೆ ಪ್ರತಿದಿನ ವರದಿಯಾಗುತ್ತಿವೆ. ಸ್ಮಶಾನ ಬಳಕೆಗೆ ಸಂಬಂಧಿಸಿದಂತೆಯೂ ಜಾತಿ ಆಧಾರಿತ ನಿರ್ಬಂಧಗಳು ಇನ್ನೂ ಜೀವಂತವಾಗಿವೆ ಹಾಗೂ ಈ ನಿರ್ಬಂಧಗಳು ಸಂವಿಧಾನದ ಆಶಯಗಳನ್ನು ಅಣಕಿಸುವಂತಿವೆ; ಕಾನೂನುಗಳಿಗೆ ಸವಾಲು ಎಸೆಯುವಂತಿವೆ. ಇಂಥ ಸಾಮಾಜಿಕ ಸಂದಿಗ್ಧದ ಸಂದರ್ಭದಲ್ಲಿ, ಹುಣಸೂರಿನ ಘಟನೆಯನ್ನು ಸಾಮಾಜಿಕ ಜಾಗೃತಿಯ ಮತ್ತು ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಮುನ್ನೆಲೆಗೆ ತರುವ ಪ್ರಯತ್ನವಾಗಿ ನೋಡಬೇಕಾಗಿದೆ. ದಲಿತರು ದೇಗುಲ ಪ್ರವೇಶಕ್ಕೆ ಪ್ರಯತ್ನಿಸಿದಾಗ ಊರಿನಲ್ಲಿ ಉದ್ವಿಗ್ನ ಪರಿಸ್ಥಿತಿ ತಲೆದೋರುವ ಘಟನೆಗಳು ಈಗಲೂ ನಡೆಯುತ್ತಿವೆ. ಆದರೆ, ಹುಣಸೂರಿನಲ್ಲಿ ಬ್ರಾಹ್ಮಣರೇ ದಲಿತರನ್ನು ದೇಗುಲಕ್ಕೆ ಆಹ್ವಾನಿಸಿ, ಸಹಪಂಕ್ತಿ ಭೋಜನ ಏರ್ಪಡಿಸಿ ಹೊಸತೊಂದು ಮಾದರಿ ಸೃಷ್ಟಿಸಿದ್ದಾರೆ. ಜಾತ್ಯತೀತ ಸಮಾಜವನ್ನು ರೂಪಿಸಲು ಪ್ರಯತ್ನಿಸುವುದು ಸಾಮಾಜಿಕವಾಗಿ ಮೇಲ್ವರ್ಗದಲ್ಲಿರುವ ಜಾತಿಗಳ ಹೊಣೆಗಾರಿಕೆ ಹಾಗೂ ನೈತಿಕ ಕರ್ತವ್ಯ ಎನ್ನುವುದರ ಸಂಕೇತದಂತಿರುವ ಈ ನಡೆ ಉಳಿದ ಊರುಗಳಿಗೂ ಮಾದರಿಯಾಗಬೇಕು.

ದಲಿತಕೇರಿಗಳಲ್ಲಿ ಸ್ವಾಮೀಜಿಗಳು ಪಾದಯಾತ್ರೆ ನಡೆಸುವ ಹಾಗೂ ದಲಿತರ ಮನೆಗಳಲ್ಲಿ ಭೋಜನ ಸ್ವೀಕರಿಸುವ ಕಾರ್ಯಕ್ರಮಗಳ ಮೂಲಕ ಸಾಮಾಜಿಕ ರಾಡಿಯನ್ನು ತಿಳಿಗೊಳಿಸುವ ಪ್ರಯತ್ನಗಳು ರಾಜ್ಯದಲ್ಲಿ ಆಗಾಗ ನಡೆದಿವೆ. ಆದರೆ, ಸೌಹಾರ್ದದ ಈ ನಡೆಗಳನ್ನು ಮರೆಸುವಂತೆ ಜಾತಿ ತಾರತಮ್ಯದ ಆಚರಣೆ ವ್ಯಾಪಕವಾಗಿದೆ. ವಿಭಜಕ ರಾಜಕಾರಣವೂ ಜಾತಿಪದ್ಧತಿಯನ್ನು ಬಲಗೊಳಿಸುತ್ತಿದೆ. ಇಂಥ ಸಂಕೀರ್ಣ ಸಂದರ್ಭದಲ್ಲಿ, ಹುಣಸೂರಿನ ಘಟನೆಯು ತೀರಾ ಸಣ್ಣ ವಿದ್ಯಮಾನವಾದರೂ ಅದಕ್ಕೆ ಸಾಮಾಜಿಕ ಮಹತ್ವವಿದೆ. ಇಂಥ ಸಣ್ಣಪುಟ್ಟ ಸಂಗತಿಗಳೇ ಸಾಮಾಜಿಕ ಸೌಹಾರ್ದದ ಬಗ್ಗೆ ನಂಬಿಕೆ ಉಳಿಯಲು ಆಸರೆಗಳಾಗಿವೆ. ಅಸ್ಪೃಶ್ಯತೆ ಹಾಗೂ ಕೋಮುವಾದದ ಆಚರಣೆಗೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅವಕಾಶವಿಲ್ಲ ಎನ್ನುವುದನ್ನು ಜಾತೀಯ ಮನಸ್ಸುಗಳಿಗೆ ಮನವರಿಕೆ ಮಾಡಿಕೊಡುವುದರಲ್ಲಿ ಸರ್ಕಾರಗಳು ಹಾಗೂ ಕಾನೂನು ವಿಫಲವಾಗಿವೆ. ದೇಶದ ಜಾತ್ಯತೀತ ಸ್ವರೂಪವನ್ನು ಗಾಸಿಗೊಳಿಸುವ ಮೂಲಕ ರಾಜಕೀಯಲಾಭ ಪಡೆಯುವ ಪ್ರವೃತ್ತಿ ದೇಶದಲ್ಲಿ ಚಾಲ್ತಿಯಲ್ಲಿದೆ. ಸಾಂವಿಧಾನಿಕ ಮಾರ್ಗದಿಂದ ಅಪೂರ್ಣವಾಗಿ ಉಳಿದಿರುವ ಸೌಹಾರ್ದದ ಆಶಯಗಳನ್ನು ಸಾಮಾಜಿಕ ಹಾಗೂ ಸಾಂಸ್ಕೃತಿಕ ಸಂಗತಿಗಳ ಮೂಲಕ ಸಾಧಿಸುವ ಪ್ರಯತ್ನ ಸದ್ಯದ ಅಗತ್ಯವಾಗಿದೆ. ದಲಿತರು ಹಾಗೂ ಸಾಮಾಜಿಕವಾಗಿ ಮೇಲ್ವರ್ಗಕ್ಕೆ ಸೇರಿದವರಿಗೆ- ಹಿಂದೂ ಮತ್ತು ಮುಸಲ್ಮಾನರಿಗೆ ಸಂಬಂಧಿಸಿದಂತೆ ಸೌಹಾರ್ದದ ಹಲವು ಸಂಕೇತಗಳು, ಬಹುತ್ವದ ಆಚರಣೆಗಳು ನಾಡಿನ ವಿವಿಧ ಭಾಗಗಳಲ್ಲಿವೆ. ಅಂಥ ನಿದರ್ಶನಗಳನ್ನು ಮುನ್ನೆಲೆಗೆ ತರುವ ಮೂಲಕ ಸಾಮಾಜಿಕ ಸೌಹಾರ್ದದ ಅಗತ್ಯವನ್ನು ಸಮಾಜಕ್ಕೆ ಮನವರಿಕೆ ಮಾಡಿಕೊಡುವುದು ಎಲ್ಲಾ ಪ್ರಜ್ಞಾವಂತರ ಹೊಣೆಗಾರಿಕೆಯಾಗಿದೆ. ಹುಣಸೂರಿನ ಘಟನೆ ಅಂತಹ ಹೊಣೆಗಾರಿಕೆಯಾಗಿದೆ ಹಾಗೂ ನಾಡಿಗೆ ಮಾದರಿ ಆದುದಾಗಿದೆ.

## ರಾಮಾಯಣ



### ಇಂದ್ರನ ನಂದನಕ್ಕಿಂತ ಸುಂದರವಾದ ಅಶೋಕವನವನ್ನು ಹನುಮನು ಹೊಕ್ಕುದು

• ಹಿಂದಿನ ಸಂಚಿಕೆಯಿಂದ

### ಸುಂದರಕಾಂಡ

ಶಚೀದೇವಿಯು ತನ್ನ ಕೈಯಲ್ಲಿ ಹಿಡಿದ ರನ್ನಗನ್ನಡಿಯೋ, ಸ್ವರ್ಗಸೌಧದ ಕಳಶವೋ, ಹೊಸ ಮದದಿಂದ ಕೂಡಿದ ಐರಾವತವು ಕೈಯಲ್ಲಿ ಹಿಡಿದ ತಾವರೆಯೋ, ಜಗತ್ತನ್ನು ಗೆಲ್ಲುವ ಮದನನ ಕಂಬವೋ, ಆಕಾಶದೇವಿಯು ಹಣೆಯಲ್ಲಿಟ್ಟುಕೊಂಡ ಚಂದನದ ಬೊಟ್ಟೋ, ರಸಿಕರನ್ನು ಸಂತಸಗೊಳಿಸುವ ಅಮೃತಕಳಶವೋ ಎಂಬಂತೆ ಇಂದುಬಿಂಬವು ಕಂಗೊಳಿಸಿತು. ರಾಜನು ಬರುತ್ತಿರುವನೆಂದು ಜಗತ್ತಿನಲ್ಲಿ ಧರ್ಮಕಾರ್ಯಗಳನ್ನು ಮಾಡಿ ಕೀರ್ತಿ ಗಳಿಸಬೇಕೆಂದು ದಿಕ್‌ತರುಣಿಯು ಹಾಲುಗಲ್ಲಿನ ಕಳಶದಲ್ಲಿ ಅಮೃತವನ್ನು ತುಂಬಿಕೊಂಡು ಹಸಿವೆಯಿಂದ ನರಳುವ ದ್ವಿಜಕುಲಕ್ಕೆ ಆತಿಥ್ಯವನ್ನು ಮಾಡುತ್ತಿರುವಳೋ ಎಂಬಂತೆ ನಿರ್ಮಲವಾದ ಬೆಳದಿಂಗಳು ದಿಕ್ಕುದಿಕ್ಕುಗಳಲ್ಲಿ ರಾರಾಜಿಸಿ ಧರಣಿಯ ಆನಂದ ಹೆಚ್ಚಿಸಿತು. ಇದು ಗಗನವಲ್ಲ, ಕ್ಷೀರಸಾಗರ; ಇದು ತಾರೆಗಳಲ್ಲ, ಅದರಲ್ಲಿ ಸುಳಿದಾಡುವ ಮೀನುಗಳು; ಇದು ಚಂದ್ರಬಿಂಬವಲ್ಲ, ಬಿಳಿಯ ನೈದಿಲೆ; ಮಕರಂದವನ್ನು ಹೀರಲು ಬರುವ ದುಂಬಿವಿಂಡು ಇದಲ್ಲ, ಮನ್ಮಥನ ಜೀವನೌಷಧಿಯ ಲಾಂಛನ ಎಂಬಂತೆ ಅಚ್ಚರಿಯನ್ನುಕ್ಕಿಸಿ ಚಂದ್ರಬಿಂಬವು ಗೋಚರಿಸಿತು. ಚಂದ್ರಮನ ತಂಬೆಳಗು ಹರಡಲು ಮನೆಮನೆಗಳಲ್ಲಿ ಮನಸಿಜನ ಕೀರ್ತಿಪಠಣವು ಹೆಚ್ಚಿ, ಮಾನ್ಮಥೀಯ ಉಪನಿಷತ್ತನ್ನು ಆಚಾರ್ಯರು ಉಪದೇಶಿಸಲು ತೊಡಗಿದರು.

ಬೆಳುದಿಂಗಳು ವಿಶ್ವವ್ಯಾಪಿಯಾಗಲು ಕತ್ತಲೆ ಜಾರಿ ತೊಳೆದ ಕನ್ನಡಿಯಂತೆ ಆಗಲು ಪವನಜನಿಗೆ ಎಲ್ಲವೂ ಸ್ಪಷ್ಟವಾಗಿ ಕಾಣಲಾರಂಭಿಸಿತು. ಅದರಲ್ಲಿ ಕಂಡುದು ಪರಿಮಳವಾಟಿಯೂ ಭೋಗೋತ್ಸವ ಪೇಟಿಯೂ ಆದ ವೇಶ್ಯಾವಾಟಿ. ಶೃಂಗಾರರಸಪೀಠ, ಸುವಿಲಾಸಗಳ ಮಠ; ಸಂಗೀತನಿಲಯ, ಸರಸಜನರ ಆಲಯ; ಭೋಗಿಗಳ ಅಗ್ರಹಾರ, ನರ್ತನದ ಗರುಡಿಯಂತೆ ಆ ಸ್ಥಳವು ಶೋಭಿಸಿತು. ಅದರಲ್ಲಿ ವೇಸಿಯರು ಮನ್ನಥಬಾಣವನ್ನು ಮತ್ತೆ ಹರಿತಗೊಳಿಸಿದ್ದಾರೆಯೋ ಎಂಬಂತೆ ಕಾಣಿಸಿದರು. ಉಲ್ಲಾಸಉತ್ಸಾಹಗಳಿಂದ ಕೂಡಿದ ಆ ಕೇರಿಯನ್ನು ಕಂಡು ಪ್ರಾಸಾದದಿಂದ ಇಳಿದು ಬರಲು, ಮೃಗಮದವನ್ನು ಹಣೆಯಲ್ಲಿ ಲೇಪಿಸಿಕೊಂಡು, ಕೊರಳಲ್ಲಿ ಶ್ರೀಗಂಧವನ್ನು ಬಳಿದುಕೊಂಡು, ತುಟಿಗಳಲ್ಲಿ ತಾಂಬೂಲರಾಗವನ್ನು ಹೊತ್ತು ಬರುವ ವಿಟನಂತೆ ತಂಬೆಲರು ತೀಡಿತು. ನಸುನಗೆಯ ಬೆಳ್ಬಿಂಗಳನ್ನು ಸುರಿಸಿ, ಹೊಸ ಅಲಂಕಾರದಿಂದ ನಲಿಸಿ, ವಿಟರು ಹಿಂದಿರುಗಿ ಹೋಗದಂತೆ ಶಶಿವದನೆಯರ ತಂಡವನ್ನೇ ನೋಡುತ್ತ ಅಚ್ಚರಿಯಿಂದ ಅಂಜನಾಸುತನು ಮುನ್ನಡೆದ. ಬಾಯಲ್ಲಿ ನಸುನಗೆ, ಕೊರಳಲ್ಲಿ ಕೊಂಕುಮಾತು, ಪರಿಮಳದ ತೌರೆನಿಸುವ ಉಸಿರು, ಮೋಹಕಗೊಳಿಸುವ ಅಪಾಂಗಪುರಭೆ, ಅರಳುವ ಕಣ್ಣಾವರೆಗಳಿಂದ ಕೂಡಿದ ಕಾಮಿನಿಯರು ಅಲ್ಲಿ ಮೆರೆದಾಡುತ್ತಿದ್ದರು. ಸೊಗಸುವ ಬೀದಿಯಲ್ಲಿ ಬಗೆಬಗೆಯಾಗಿ ಅಲಂಕಾರ ಮಾಡಿಕೊಂಡು, ಹಣೆಯಲ್ಲಿ ಕಸ್ತೂರಿಯ ತಿಲಕವಿಟ್ಟುಕೊಂಡು, ಚೆಂದದ ಬಟ್ಟೆಗಳನ್ನುಟ್ಟು, ಕೈಯಲ್ಲಿ ವೀಳೆಯವನ್ನು ಹಿಡಿದು ಶೃಂಗಾರಸವು ಹರಿಯುವಂತೆ ತಲೆಬಾಗಿಲಲ್ಲಿ ನಿಂತು ಸೊಗಸುಗಾರರನ್ನು ಸೆಳೆಯಲು ನಿಂತ ಬೆಡಗಿಯರನ್ನು ನೋಡುತ್ತ ನಸುನಗುತ್ತ ಮುಂದೆ ಹೋದ. ನಸುನಗೆಯ ಕುಡಿನೋಟ, ಲಲ್ಲೆ, ಸಡಗರದ ಓಡಾಟ, ಹುಸಿಮುನಿಸು, ಮೂದಲಿಕೆ, ಮುದ್ದು, ಕೊಸರುವ ಮೋಡಿ, ಹೊಸಬಗೆಯ ರಸವೊಸರ್ವ ನುಡಿಗಾರಿಕೆಗಳಿಂದ ಕುಸುಮಾಸ್ತ್ರಪೂಜೆಯನ್ನು ಕೌಶಲದಿಂದ ಮಾಡುತ್ತಿರುವ ಚಂದ್ರಮುಖಿಯರ ಅಂಗಳದಲ್ಲಿ ಕಾಮಧೇನುವು ನೆಲಸಿರುವಂತೆ ವಿಟರು ಧಾರಾಳಿಗಳಾಗಿದ್ದರು. **ಮುಂದುವರಿಯುವುದು...**



ನಾ ಕಂಡಂತೆ
ವಿಶ್ವಾಸ್.ಡಿ.ಗೌಡ
ಲೇಖಕರು
ಸಾಮಾಜಿಕ ಚಿಂತಕರು

# ಸಂಗಾತಿಯಿಲ್ಲದ ವಾರ್ಷಿಕೋತ್ಸವ ನೆನಪುಗಳ ಜೊತೆ ಸಾಗುತ್ತಿರುವ ಬದುಕು

## ಮೇ 11

ನಾನು ಮದುವೆಯಾಗಿ ಹದಿನೆಂಟು ವರ್ಷಗಳು ತುಂಬುವ ದಿನ. ಆದರೆ ಈ ಬಾರಿ ಕೂಡ ನನ್ನ ಚೈತ್ರ ನನ್ನ ಜೊತೆ ಇಲ್ಲ. ಅವಳಿಲ್ಲದ ಮೊದಲ ವಾರ್ಷಿಕೋತ್ಸವ ಹೇಗೋ ಮೌನದಲ್ಲಿ ಕಳೆಯಿತು ಈಗ ಎರಡನೇ ವರ್ಷದ ವಾರ್ಷಿಕೋತ್ಸವವೂ ಬಂದು ನಿಂತಿದೆ. ದಿನಗಳು ಮುಂದೆ ಸಾಗುತ್ತಿವೆ, ಆದರೆ ನನ್ನ ಮನಸ್ಸು ಮಾತ್ರ ಇನ್ನೂ ಅವಳ ನೆನಪುಗಳ ದಾರಿಯಲ್ಲೇ ನಡೆಯುತ್ತಿದೆ.

2024ರಲ್ಲಿ ನಮ್ಮ ಹದಿನಾರು ವರ್ಷದ ಮದುವೆ ವಾರ್ಷಿಕೋತ್ಸವವನ್ನು ಊಟಿಯಲ್ಲಿ ಬಹಳ ಸಂತೋಷದಿಂದ ಆಚರಿಸಿಕೊಂಡಿದ್ದೆವು. ಆ ಪ್ರಯಾಣದಲ್ಲಿ ನಮ್ಮ ಮಗಳು ಚಿನ್ಮಯಿಯೂ ಜೊತೆಯಲ್ಲೇ ಇದ್ದಳು. ನಾವು ಮೂವರೂ ಸೇರಿ ಕಳೆದ ಆ ಕ್ಷಣಗಳು ಇಂದು ಬದುಕಿನ ಅಮೂಲ್ಯ ನೆನಪುಗಳಾಗಿ ಉಳಿದಿವೆ. ಊಟಿಯ ಮಂಜಿನ ನಡುವೆ ನಾವು ತೆಗೆಸಿಕೊಂಡ ಎಲ್ಲಾ ಫೋಟೋಗಳನ್ನು ಚಿನ್ಮಯಿಯೇ ತುಂಬಾ ಖುಷಿಯಿಂದ ಕ್ಲಿಕ್ಕಿಸಿದ್ದಳು. ''ಇಲ್ಲಿ ನಿಲ್ಲಿ ಈಗ ಸ್ಮೈಲ್ ಮಾಡಿ'' ಎಂದು ಅವಳು ಹೇಳುತ್ತಿದ್ದ ರೀತಿ ಇನ್ನೂ ಕಿವಿಯಲ್ಲಿ ಕೇಳಿಸುತ್ತಿದೆ. ಆ ಫೋಟೋಗಳಲ್ಲಿ ಕೇವಲ ಮುಖಗಳಿಲ್ಲ ನಮ್ಮ ಕುಟುಂಬದ ಸಂತೋಷ, ಪ್ರೀತಿ ಮತ್ತು ಒಟ್ಟಿನ ಬದುಕಿನ ಉಸಿರು ಅಡಗಿದೆ.

2023ರಲ್ಲಿ ಚೈತ್ರಳ ಆಸೆಯಂತೆ ಕಾರಿನಲ್ಲಿ ಸಕಲೇಶಪುರದಿಂದ ಶಿರಡಿಗೆ ಪ್ರಯಾಣ ಮಾಡಿದ್ದೆವು. ಆರು ದಿನಗಳ ಪ್ರಯಾಣ ಸುಮಾರು ಎರಡು ಸಾವಿರ ಕಿಲೋಮೀಟರ್. ದಾರಿಯಲ್ಲಿ ವಿಜಯಪುರದ ಗೋಲ್ ಗುಂಬಜ್ ಬಳಿ ನಮ್ಮ ವಾರ್ಷಿಕೋತ್ಸವವನ್ನು ಆಚರಿಸಿಕೊಂಡಿದ್ದೆವು. ಆ ಪ್ರಯಾಣವೂ ನಮ್ಮ ಜೀವನದ ಅತ್ಯಂತ ಸುಂದರ ಅಧ್ಯಾಯಗಳಲ್ಲಿ ಒಂದು.

ಆ ಸಮಯದಲ್ಲಿ ನಾನು ದಣಿವೇ ಇಲ್ಲದೆ ಗಾಡಿ ಓಡಿಸುತ್ತಿದ್ದೆ. ಮೂರನೇ ದಿನ ಒಂದೇ ದಿನದಲ್ಲಿ ಆರು ನೂರು ಕಿಲೋಮೀಟರ್ ಓಡಿಸಿದ್ದೆ.

ಹಿಂದಿರುಗುವ ಕೊನೆ ದಿನ ಎಂಟು ನೂರು ಕಿಲೋಮೀಟರ್ ಪ್ರಯಾಣ ಮಾಡಿದ್ದೆ. ಆದರೆ ಆಗ ನನ್ನ ಜೊತೆ ಚೈತ್ರ ಇದ್ದಳು ಜೊತೆಗೆ ಚಿನ್ಮಯಿಯ ನಗುವೂ ಇತ್ತು. ದಾರಿಯುದ್ದಕ್ಕೂ ನಾವು ಮಾತನಾಡುತ್ತಾ, ತಿಂದುಕೊಳ್ಳುತ್ತಾ, ಹಾಡುಗಳನ್ನು ಹಾಡುತ್ತಾ ಸಾಗುತ್ತಿದ್ದೆವು. ಅಂತಾಕ್ಷರಿಯಲ್ಲಿ ಅಮ್ಮ-ಮಗಳು ಇಬ್ಬರೂ ಸೇರಿ ನನಗೆ ಸೋಲಿಸುತ್ತಿದ್ದರು. ಅವರಿಬ್ಬರ ತುಂಟಾಟ, ಜಗಳ, ನಗು ಕಾರಿನೊಳಗೆ ಜೀವಂತ ಸಂತೋಷ ತುಂಬಿಕೊಂಡಿರುತ್ತಿತ್ತು.

ನಾವು ಯಾವತ್ತೂ ಚಿನ್ಮಯಿಯನ್ನು ನಮ್ಮ ಸಂತೋಷದಿಂದ ದೂರ ಇಟ್ಟಿರಲಿಲ್ಲ.



ನಮ್ಮ ಪ್ರತಿಯೊಂದು ಸಂಭ್ರಮದಲ್ಲೂ ಅವಳು ನಮ್ಮ ಜೊತೆಯಲ್ಲೇ ಇರುತ್ತಿದ್ದಳು. ಕುಟುಂಬ ಅಂದರೆ ಕೇವಲ ಇಬ್ಬರ ಸಂಬಂಧವಲ್ಲ ಒಟ್ಟಿಗೆ ನಗುವ, ಆಟ ಆಡುವ, ನೆನಪುಗಳನ್ನು ಕಟ್ಟುವ ಒಂದು ಪ್ರಪಂಚ ಎಂಬುದನ್ನು ನಾವು ಬದುಕಿನಲ್ಲಿ ಅನುಭವಿಸಿದ್ದೆವು.

ಇಂದು ಪರಿಸ್ಥಿತಿ ಸಂಪೂರ್ಣ ಬದಲಾಗಿದೆ. ಈಗ ಸ್ವಲ್ಪ ದೂರ ಪ್ರಯಾಣ ಮಾಡಿದರೂ ಮನಸ್ಸೇ ಬೇಸರಗೊಳ್ಳುತ್ತದೆ. ಗಾಡಿ ಓಡಿಸುವ ಉತ್ಸಾಹವೂ ಕಡಿಮೆಯಾಗಿದೆ. ಯಾಕೆಂದರೆ ಪಕ್ಕದಲ್ಲಿ ಕುಳಿತು ಮಾತನಾಡುವ ಆ ಧ್ವನಿ ಇಲ್ಲ. ''ಜಾಗ್ರತೆ'' ಎಂದು ಹೇಳುವ ಆ ಕಾಳಜಿ ಇಲ್ಲ. ಮನೆಗೆ ಬಂದಾಗ ''ತಿಂಡಿ ಮಾಡಿದ್ದೀನಿ'' ಎಂದು ಕರೆಯುವ ಆ ಮಮತೆ ಇಲ್ಲ.

ಚೈತ್ರ ನನ್ನ ಹೆಂಡತಿ ಮಾತ್ರವಲ್ಲ ನನ್ನ ಸ್ನೇಹಿತೆ, ನನ್ನ ಧೈರ್ಯ, ನನ್ನ ನೆಮ್ಮದಿ. ಅವಳ ಮಾತುಗಳು, ತಮಾಷೆಗಳು, ಅಡುಗೆಗಳು, ನನ್ನ ಬಗ್ಗೆ ಅವಳು ತೆಗೆದುಕೊಳ್ಳುತ್ತಿದ್ದ ಕಾಳಜಿ ಇವೆಲ್ಲವೂ ಇಂದು ನನ್ನ ಬದುಕಿನ ದೊಡ್ಡ ಖಾಲಿತನವಾಗಿವೆ.

ಕೆಲವೊಮ್ಮೆ ಮನಸ್ಸು ತುಂಬಾ ಸುಸ್ತಾಗಿ ಹೋಗುತ್ತದೆ. ಬದುಕು ಎಷ್ಟು ಬೇಗ ಬದಲಾಗಿ ಬಿಡುತ್ತದೆ ಎನ್ನುವ ಪ್ರಶ್ನೆ ಕಾಡುತ್ತದೆ.

ಆದರೆ ತಕ್ಷಣ ನನ್ನ ಮಗಳು ಚಿನ್ಮಯಿಯ ಮುಖ ನೆನಪಾಗುತ್ತದೆ. ಅಪ್ಪ-ಅಮ್ಮನ ಜವಾಬ್ದಾರಿ ನೆನಪಾಗುತ್ತದೆ. ಆಗ ಮನಸ್ಸನ್ನು ಗಟ್ಟಿಗೊಳಿಸಿಕೊಂಡು ಮತ್ತೆ ಬದುಕಿನ ಕಡೆ ನಡೆಯಲು ಪ್ರಯತ್ನಿಸುತ್ತೇನೆ.

ನಿಜ ಹೇಳಬೇಕು ಅಂದ್ರೆ, ಈ ಎರಡು ವರ್ಷಗಳನ್ನು ನಾನು ಹೇಗೆ ಕಳೆದಿದ್ದೇನೆ ಅನ್ನೋದೇ ನನಗೂ ಅರ್ಥವಾಗುವುದಿಲ್ಲ. ಹೆಚ್ಚು ಯೋಚನೆ ಮಾಡದೇ, ಕೆಲಸ ಮತ್ತು ಬರವಣಿಗೆಯಲ್ಲಿ ನನ್ನನ್ನು ತೊಡಗಿಸಿಕೊಂಡು, ಮಗಳನ್ನು ನೋಡಿಕೊಂಡು ದಿನಗಳನ್ನು ತಳ್ಳುತ್ತಿದ್ದೇನೆ. ಆದರೆ ರಾತ್ರಿ ನಿಶ್ಶಬ್ದವಾಗುವಾಗ, ಒಂಟಿತನ ಕಾಡುವಾಗ, ಅವಳ ನೆನಪುಗಳು ಮಾತ್ರ ಮನಸ್ಸನ್ನು ಬಿಡುವುದೇ ಇಲ್ಲ.

ಕೆಲವರು ''ಕಾಲ ಎಲ್ಲವನ್ನು ಮರೆಸುತ್ತದೆ'' ಎನ್ನುತ್ತಾರೆ. ಆದರೆ ಕೆಲವು ವ್ಯಕ್ತಿಗಳನ್ನು ಕಾಲವೂ ಮರೆಸಲು ಸಾಧ್ಯವಿಲ್ಲ. ಅವರು ನಮ್ಮ ಉಸಿರಿನಲ್ಲೇ ಬೆರೆತು ಹೋಗಿರುತ್ತಾರೆ. ಚೈತ್ರ ಕೂಡ ಹಾಗೆಯೇ ಅವಳು ನನ್ನ ಜೊತೆ ದೇಹವಾಗಿ ಇಲ್ಲದಿದ್ದರೂ, ಪ್ರತಿದಿನ ನನ್ನ ನೆನಪುಗಳಲ್ಲಿ, ಮಾತುಗಳಲ್ಲಿ, ಬದುಕಿನಲ್ಲಿ ಜೀವಂತವಾಗಿದ್ದಾಳೆ.

ಈ ವಾರ್ಷಿಕೋತ್ಸವಕ್ಕೆ ಯಾವುದೇ ಸಂಭ್ರಮವಿಲ್ಲ
ಆದರೆ ಹೃದಯ ತುಂಬಾ ನೆನಪುಗಳಿವೆ.
ಅವಳ ಜೊತೆ ಕಳೆದ ಪ್ರತಿಯೊಂದು ಕ್ಷಣಕ್ಕೂ ನಾನು ಸದಾ ಕೃತಜ್ಞ.

# ಅಮ್ಮ ಎಂಬ ಎರಡಕ್ಷರ

**ತಾಯಂದಿರ ದಿನದ ವಿಶೇಷ**



ಮೇ 10ರಂದು ತಾಯಂದಿರ ದಿನಾಚರಣೆ ಮದರ್ ಡೇ ದಿನದ ಅರ್ಥ ಮತ್ತು ತಾಯಂದಿರ ಮಹತ್ವವನ್ನು ತಿಳಿದುಕೊಳ್ಳಬೇಕು. ತಾಯಿ ದೇವರ ಸಮಾನ. ಅಮ್ಮ ಎಂದರೆ ಜನನಿ. ಜನ್ಮ ನೀಡುವಳು ಮಗುವಿಗೆ ತಾಯಿ. ಮಕ್ಕಳನ್ನು ಸಾಕಿ ಬೆಳೆಸುವಳು ತಾಯಿ. ಮಮತೆಯ ಕಡಲು ತಾಯಿ ತನ್ನ ಮಕ್ಕಳ ಜೀವನವನ್ನು ರೂಪಿಸುವಳು ತಾಯಿ. ಮನೆಯಲ್ಲಿ ಏನೇ ಕೆಲಸವಿದ್ದರೂ ಅಮ್ಮ ನಮ್ಮನ್ನು ಒಂಬತ್ತು ತಿಂಗಳು ಹೊತ್ತು ಹೆತ್ತಿರುತ್ತಾಳೆ. ಅಮ್ಮನ ಸ್ಥಾನವನ್ನು ಯಾರಿಂದಲೂ ತುಂಬಲು ಸಾಧ್ಯವಿಲ್ಲ. ತಾಯಿಯ ಸ್ಥಾನ ಮತ್ತು ಅಮ್ಮನ ಪ್ರೀತಿ ಅತ್ಯಮೂಲ್ಯವಾದದ್ದು. ನಮ್ಮನ್ನು ಕಣ್ಣಲ್ಲಿ ಕಣ್ಣಿಟ್ಟು ಸಾಕುವಳು ಅಮ್ಮ. ಅಂತಹ ತಾಯಿಗೆ ನಾವು ಯಾವಗಲೂ ಗೌರವದಿಂದ ಕಾಣಬೇಕು. ಅದು ನಮ್ಮ ಕರ್ತವ್ಯ ಕೂಡ. ಅಮ್ಮ ನೀ ದೇವರು ಈ ಜಗವೆಲ್ಲಾ ನೀನೆ ಅಮ್ಮ. ಅಮ್ಮ ಎಂಬ ಎರಡಕ್ಷರ ಪವಿತ್ರವಾದ ಸಂಕೇತ. ಹೌದು ತಾಯಿ ದೇವರ ಸ್ವರೂಪ. ನಾವು ದೇವರನ್ನು ಎಷ್ಟು ಭಯ ಭಕ್ತಿಯಿಂದ ಗೌರವದಿಂದ ಪೂಜಿಸಿ ಆರಾದಿಸುತ್ತೇವೆಯೋ ಹಾಗೇಯೇ ಅಮ್ಮನ ಭಯ ಭಕ್ತಿಯಿಂದ ಗೌರವದಿಂದ ನೋಡಿಕೊಳ್ಳಬೇಕು. ಅಮ್ಮ ಇಲ್ಲದ ಪ್ರಪಂಚವಿಲ್ಲ. ಎಲ್ಲಾ ಮಕ್ಕಳಿಗೂ ತಾಯಿಯ ಆಶೀರ್ವಾದ ಬೇಕು ಅವರಿಂದಲೇ ನಾವು. ತಾಯಿ ಮೊದಲ ಗುರು ಮನೆಯ ಮೊದಲ ಪಾಠ ಶಾಲೆ ತನ್ನ ಮಕ್ಕಳಿಗೆ ಮೊದಲನೆಯ ಶಿಕ್ಷಕಿ ತಾಯಿ. ಮಗು ತನ್ನ ಜೀವನದಲ್ಲಿ ಹೇಳುವ ಮೊದಲ ಪದವೂ ಅಮ್ಮ. ತಾಯಿ ತನ್ನ ಮಕ್ಕಳಿಗೆ ಇಡೀ ಜೀವನವನ್ನು ತ್ಯಾಗ ಮಾಡುತ್ತಾರೆ. ತನ್ನ ಇಡೀ ಜೀವನವನ್ನು ನಮಗೆ ಅರ್ಪಿಸುತ್ತಾಳೆ. ಅಮ್ಮ ಯಾವಗಲೂ ತನ್ನ ದುಃಖಗಳನ್ನು ಮರೆತು ಮಕ್ಕಳ ಜೀವನ ಸಂತೋಷದ ಬಗ್ಗೆ ಯೋಚಿಸುತ್ತಾರೆ. ಮಕ್ಕಳು ಸಂತೋಷವಾಗಿರುವುದು ನೋಡಿ ಅವರು ಸಂತೋಷವಾಗಿರುತ್ತಾರೆ. ತಾಯಿಯ ಋಣವನ್ನು ನಾವು ಎಂದಿಗೂ ತೀರಿಸಲು ಸಾಧ್ಯವಿಲ್ಲ ಆದ್ದರಿಂದ ನಾವು ನಮ್ಮ ತಾಯಿಗೆ ಸಾಧ್ಯವಾದಷ್ಟು ಸೇವೆ ಸಲ್ಲಿಸಬೇಕು ನಮ್ಮ ವ್ಯಕ್ತಿತ್ವವನ್ನು ಹೆಚ್ಚಿಸಲು ಅವರು ತಮ್ಮ ಜೀವನವನ್ನು ಮುಡಿಪಾಗಿಟ್ಟ ಜೀವನದ ಪ್ರತಿಯೊಂದು ಸಂತೋಷವನ್ನು ನಾವು ತಾಯಿ ತಂದೆಗೇ ನೀಡಬೇಕು. ಅಮ್ಮ ಐ ಲವ್ ಯೂ... ಅಮ್ಮ ನಾ ಕಂಡ ಮೊದಲ ಮುಖ ನಾ ಕೇಳಿದ ಮೊದಲ ಧ್ವನಿ ನಾ ಪೂಜಿಸು ಮೊದಲನೇ ದೇವರು ನೀನೇ ಅಮ್ಮ. ಅಮ್ಮ ಐ ಲವ್ ಯೂ..!



- ವಿ.ಎಂ.ಎಸ್.ಗೋಪಿ, ಲೇಖಕರು

# ಮಲ್ಲರ ಬಲಕ್ಕೆ ಮೊಸರು



ಅಂತರಂಗದ ಮಾತು
ಡಾ.ಸುಧಾಕರ.ಜಿ. ಲಕ್ಕವಳ್ಳಿ
ಲೇಖಕರು
ಸಾಮಾಜಿಕ ಚಿಂತಕರು

ಕುಸ್ತಿಪಟುವಿನ ದಿನಚರಿ ಕಠಿಣ ತಾಲೀಮಿನಿಂದ ಆರಂಭವಾಗುತ್ತದೆ. ಗಂಟೆಗಟ್ಟಲೆ ಮಣ್ಣಿನಲ್ಲಿ ಹೊರಳಾಡುವಾಗ ಮಾಂಸಖಂಡಗಳು ಸವೆತಕ್ಕೆ ಒಳಗಾಗುತ್ತವೆ. ಮೊಸರು ಶರೀರದ ಆಂತರಿಕ ಶಿಲ್ಪಿಯಾಗಿ ಕೆಲಸ ಮಾಡುತ್ತದೆ. ಇದರಲ್ಲಿರುವ ಅಮೈನೋ ಆಮ್ಲಗಳು ಸವೆದ ಜೀವಕೋಶಗಳನ್ನು ಪುನಶ್ಚೇತನಗೊಳಿಸುತ್ತವೆ. ಕೃತಕ ಸಪ್ಲಿಮೆಂಟ್‌ಗಳಿಗಿಂತಲೂ ನೈಸರ್ಗಿಕವಾಗಿ ದೊರೆಯುವ ಈ ಪ್ರೋಟೀನ್ ಸ್ನಾಯುಗಳಿಗೆ ದೀರ್ಘಕಾಲಿಕ ಕ್ಷಮತೆಯನ್ನು ನೀಡುತ್ತದೆ.

**ಭಾರತೀಯ ಮಣ್ಣಿನ ಸಂಸ್ಕೃತಿಯಲ್ಲಿ ಕುಸ್ತಿ ಎನ್ನುವುದು ಕೇವಲ ಕ್ರೀಡೆಯಲ್ಲ; ಅದೊಂದು ಕಠಿಣ ತಪಸ್ಸು. ಗರಡಿ ಮನೆಯ ಕೆಮ್ಮಣ್ಣಿನ ಘಮಲು ಮತ್ತು ಪೈಲ್ವಾನರು ತೊಡೆತಟ್ಟುವ ಗಂಭೀರ ನಾದ ಈ ನೆಲದ ಶೌರ್ಯದ ಸಂಕೇತಗಳು. ಆಧುನಿಕ ಪ್ರೋಟೀನ್ ಪೌಡರ್‌ಗಳ ಅಬ್ಬರದ ನಡುವೆ, ನಮ್ಮ ಪಾರಂಪರಿಕ ಪೌಷ್ಟಿಕಾಂಶವಾದ ಮೊಸರು ಮಲ್ಲರ ಪಾಲಿಗೆ ಅಪ್ರತಿಮ ಇಂಧನವಾಗಿ ಕಾರ್ಯನಿರ್ವಹಿಸುತ್ತದೆ.**

ಮಲ್ಲರು ಸಾಮಾನ್ಯವಾಗಿ ತುಪ್ಪ, ಬಾದಾಮಿ ಮತ್ತು ದ್ವಿದಳ ಧಾನ್ಯಗಳನ್ನು ಹೇರಳವಾಗಿ ಸೇವಿಸುತ್ತಾರೆ. ಇಂತಹ ಭಾರೀ ಆಹಾರವನ್ನು ಅರಗಿಸಿಕೊಳ್ಳಲು ತೀವ್ರವಾದ ಚಯಾಪಚಯ ಕ್ರಿಯೆಯ ಅಗತ್ಯವಿರುತ್ತದೆ. ಮೊಸರಿನಲ್ಲಿರುವ ಪ್ರೊಬಯಾಟಿಕ್ಸ್ ಜೀರ್ಣಾಂಗವ್ಯೂಹವನ್ನು ಶುಚಿಗೊಳಿಸಿ, ಆಹಾರದ ಸಾರವು ರಕ್ತಗತವಾಗುವಂತೆ ನೋಡಿಕೊಳ್ಳುತ್ತವೆ. ಜೀರ್ಣಕ್ರಿಯೆ ಸುಗಮವಾಗಿದ್ದಾಗ ಮಾತ್ರ ಮಲ್ಲನ ಶರೀರದಲ್ಲಿ ಚುರುಕುತನ ಸದಾ ಜಾಗೃತವಾಗಿರುತ್ತದೆ.



ಕುಸ್ತಿಯ ಜಿದ್ದಾಜಿದ್ದಿನಲ್ಲಿ ಮಲ್ಲನ ಕೀಲುಗಳ ಮೇಲೆ ವಿಪರೀತ ಒತ್ತಡ ಬೀಳುತ್ತದೆ. ಮೊಸರಿನಲ್ಲಿ ಅಡಕವಾಗಿರುವ ಕ್ಯಾಲ್ಸಿಯಂ, ವಿಟಮಿನ್ ಡಿ ಮತ್ತು ರಂಜಕದ ಅಂಶಗಳು ಕೀಲುಗಳ ನಮನೀಯತೆಯನ್ನು ಕಾಪಾಡುತ್ತವೆ. ಇದು ಶರೀರದ ಚೌಕಟ್ಟನ್ನು ಭದ್ರಪಡಿಸಿ, ಮೂಳೆಗಳ ಸವೆತವನ್ನು ತಡೆಗಟ್ಟುತ್ತದೆ. ಇದರಿಂದ ಪೈಲ್ವಾನನ ವಯಸ್ಸು ಹೆಚ್ಚಾದರೂ ದೇಹದ ಗಟ್ಟಿತನ ಕುಂದದಂತೆ ಉಳಿಯುತ್ತದೆ.

ತೀವ್ರ ವ್ಯಾಯಾಮವು ದೇಹದಲ್ಲಿ ತಾಪವನ್ನು ಹೆಚ್ಚಿಸುತ್ತದೆ. ಮೊಸರು ನೈಸರ್ಗಿಕ ಶೀತಲಕಾರಿಯಾಗಿದ್ದು, ಆಂತರಿಕ ಉಷ್ಣತೆಯನ್ನು ತಗ್ಗಿಸುತ್ತದೆ. ದೇಹವು ತಂಪಾದಾಗ ಮಿದುಳು ಪ್ರಶಾಂತವಾಗಿರುತ್ತದೆ. ಈ ಸ್ಥಿತಿಯು ಅಖಾಡದಲ್ಲಿ ಎದುರಾಳಿಯ ಮುಂದಿನ ನಡೆಯನ್ನು ಗುರುತಿಸಲು ಬೇಕಾದ ತೀಕ್ಷ್ಣ ಏಕಾಗ್ರತೆಯನ್ನು ನೀಡುತ್ತದೆ. ಶರೀರ ಮತ್ತು ಮನಸ್ಸಿನ ಈ ಸಮತೋಲನವೇ ವಿಜಯದ ರಹಸ್ಯ.

ಮೊಸರು ದೇಹದ ವಿಷಕಾರಿ ಅಂಶಗಳನ್ನು ಹೊರಹಾಕುವ ಮೂಲಕ ನೈಸರ್ಗಿಕ ರಕ್ಷಣಾ ಕವಚವಾಗಿ ಕಾರ್ಯನಿರ್ವಹಿಸುತ್ತದೆ. ಇದರಲ್ಲಿರುವ ವಿಟಮಿನ್ ಬಿ-12 ನರಮಂಡಲದ ಆರೋಗ್ಯ ಕಾಪಾಡಿ, ಮಾಂಸಖಂಡಗಳ ಸಂಕುಚನ ಮತ್ತು ವಿಕಸನಕ್ಕೆ ನೆರವಾಗುತ್ತದೆ. ಇದು ಪಟ್ಟುಗಳನ್ನು ಹಾಕುವಾಗ ಎದುರಾಗುವ ಸ್ನಾಯು ಸೆಳೆತದ ಸಮಸ್ಯೆಯನ್ನು ನಿವಾರಿಸುತ್ತದೆ.

ಸಂಶ್ಲೇಷಿತ ಪಾನೀಯಗಳ ಇಂದಿನ ಯುಗದಲ್ಲಿ, ಮಣ್ಣಿನ ಮಗನಾದ ಮಲ್ಲನಿಗೆ ತನ್ನ ನೆಲದ ಆಹಾರವಾದ ಮೊಸರಿಗಿಂತ ಮಿಗಿಲಾದ ಬಲವರ್ಧಕ ಮತ್ತೊಂದಿಲ್ಲ. ಸಾಂಪ್ರದಾಯಿಕ ಆಹಾರ ಪದ್ಧತಿಯನ್ನು ಗೌರವಿಸಿ, ಮೊಸರಿಗೆ ಪ್ರಾಶಸ್ತ್ಯ ನೀಡಿದಲ್ಲಿ ಮಾತ್ರ, ಅಖಾಡದಲ್ಲಿ ಸಮರ್ಥ ಕಲಿಗಳ ಉದಯ ಸಾಧ್ಯ.

# ಕೆಂಪು ಈರುಳ್ಳಿ ಸೇವನೆ ಹೀಟ್ ಸ್ಟ್ರೋಕ್‌ನಿಂದ ಪಾರು



**ಬೇಸಿಗೆಯ ಊಟಕ್ಕೆ ಪೂರಕವಾಗಿ ಕೆಂಪು ಈರುಳ್ಳಿಯನ್ನು ಸಾಮಾನ್ಯವಾಗಿ ತಿನ್ನಲಾಗುತ್ತದೆ. ಆದರೆ ನೀವು ಅದಕ್ಕೆ ಒಡ್ಡಿಕೊಂಡಾಗ ಗಂಭೀರ ಆರೋಗ್ಯ ಪರಿಣಾಮಗಳನ್ನು ಉಂಟುಮಾಡುವ ಎರಡು ಸಾಮಾನ್ಯ ಸಮಸ್ಯೆಗಳನ್ನು ಈರುಳ್ಳಿ ಸೇವನೆಯಿಂದ ತಡೆಯಬಹುದು ಎಂದು ನೀವು ಎಂದಾದರೂ ಯೋಚಿಸಿದ್ದೀರಾ?**

ಶಾಖದ ಬಳಲಿಕೆ ಮತ್ತು ಶಾಖದ ಹೊಡೆತವಾಗಿದ್ದು, ಇವು ಅತಿಯಾದ ಬೆವರು, ತಲೆನೋವು, ತಲೆತಿರುಗುವಿಕೆ, ವಾಕರಿಕೆ, ವೇಗದ ಹೃದಯ ಬಡಿತ, ಗೊಂದಲ, ಚರ್ಮದ ಕೆಂಪು ಮತ್ತು ಇನ್ನೂ ಅನೇಕ ಗಂಭೀರ ಲಕ್ಷಣಗಳನ್ನು ಉಂಟುಮಾಡುತ್ತವೆ. ಮಾಲಿಕ್ಯೂಲ್ಸ್ ಜರ್ನಲ್‌ನಲ್ಲಿ ಪ್ರಕಟವಾದ ಸಂಶೋಧನೆಯು ಬೇಸಿಗೆಯ ಊಟದೊಂದಿಗೆ ಕೆಂಪು ಈರುಳ್ಳಿಯನ್ನು ಸೇವಿಸುವಂತೆ ಸೂಚಿಸುತ್ತದೆ, ಏಕೆಂದರೆ ಅವುಗಳು ಪ್ರೋಟೀನ್‌ಗಳು, ಫೀನಾಲಿಕ್ ಸಂಯುಕ್ತಗಳು, ಫ್ಲೇವನಾಯ್ಡ್‌ಗಳು ಮತ್ತು ಉತ್ಕರ್ಷಣ ನಿರೋಧಕಗಳನ್ನು ಒಳಗೊಂಡಿರುತ್ತವೆ, ಇದು ದೇಹದ ಮೇಲೆ ಉಂಟಾಗುವ ಸಂಭಾವ್ಯ ಶಾಖದ ಒತ್ತಡವನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ. ಇಷ್ಟೇ ಅಲ್ಲ, ಹೆಚ್ಚುತ್ತಿರುವ ಶಾಖದ ಒತ್ತಡವನ್ನು ಎದುರಿಸಲು ನಿಮ್ಮ ದೇಹದ ಸಾಮರ್ಥ್ಯಕ್ಕೆ ಪ್ರಯೋಜನಕಾರಿಯಾಗುವ ವಿವಿಧ ಪ್ರಯೋಜನಕಾರಿ ಗುಣಗಳು ಕೆಂಪು ಈರುಳ್ಳಿಯಲ್ಲಿವೆ.

**ಈರುಳ್ಳಿಯಲ್ಲಿರುವ ಪೋಷಕಾಂಶಗಳು:** ಕೆಂಪು ಈರುಳ್ಳಿಯನ್ನು ಬೇಸಿಗೆಯ ಸಾಂಪ್ರದಾಯಿಕ ಆಹಾರಕ್ರಮಗಳು ಮತ್ತು ಮನೆಮದ್ದುಗಳಲ್ಲಿ ದೇಹವು ತೀವ್ರ ಶಾಖವನ್ನು ನಿಭಾಯಿಸಲು ಸಹಾಯ ಮಾಡುತ್ತದೆ. ಅವು ಉತ್ಕರ್ಷಣ ನಿರೋಧಕಗಳು, ಕ್ವೆರ್ಸೆಟಿನ್ ನಂತಹ ಫ್ಲೇವನಾಯ್ಡ್‌ಗಳು ಮತ್ತು ಸಲ್ಫರ್ ಸಂಯುಕ್ತಗಳನ್ನು ಒಳಗೊಂಡಿರುತ್ತವೆ, ಇದು ಒಟ್ಟಾರೆ ಆರೋಗ್ಯವನ್ನು ಬೆಂಬಲಿಸುತ್ತದೆ ಮತ್ತು ದೇಹವು ಶಾಖ-ಸಂಬಂಧಿತ ಒತ್ತಡವನ್ನು ನಿರ್ವಹಿಸಲು ಸಹಾಯ ಮಾಡುತ್ತದೆ ಎನ್ನುತ್ತಾರೆ ಸ್ಪರ್ಶ್ ಆಸ್ಪತ್ರೆಯ ಪೌಷ್ಟಿಕಾಂಶ ತಜ್ಞೆ ಶ್ರೀಮತಿ ವಿದ್ಯಾ ನರಸಿಂಹನ್.

**ಶಾಖದ ಹೊಡೆತವನ್ನು ತಡೆಗಟ್ಟಲು ಅತ್ಯಂತ ಪರಿಣಾಮಕಾರಿ ಮಾರ್ಗಗಳು**

- **ಚೆನ್ನಾಗಿ ಹೈಡ್ರೀಕರಿಸಲು ಸಾಕಷ್ಟು ನೀರು ಪಡೆಯುವುದು**
- **ಅಗತ್ಯವಿದ್ದಾಗ ಎಲೆಕ್ಟ್ರೋಲೈಟ್‌ಗಳೊಂದಿಗೆ ದ್ರವಗಳನ್ನು ಕುಡಿಯುವುದು**
- **ಮಧ್ಯಾಹ್ನದ ಸಮಯದಲ್ಲಿ, ದೀರ್ಘಕಾಲದವರೆಗೆ ಸೂರ್ಯನ ಬೆಳಕಿಗೆ ಒಡ್ಡಿಕೊಳ್ಳುವುದನ್ನು ತಪ್ಪಿಸುವುದು**
- **ಹಗುರವಾದ ಮತ್ತು ತೆಳ್ಳಗಿನ ಬಟ್ಟೆಗಳನ್ನು ಧರಿಸುವುದು**
- **ತಂಪಾದ ಅಥವಾ ನೆರಳಿನ ವಾತಾವರಣದಲ್ಲಿ ವಿಶ್ರಾಂತಿ ಪಡೆಯುವುದು**

**ಈರುಳ್ಳಿಯನ್ನು ನಾನಾ ರೀತಿಯಲ್ಲಿ ಬಳಸಬಹುದು**



ಸಲಾಡ್‌ಗಳು, ಚಟ್ನಿಗಳು, ರೈತಾಗಳು ಅಥವಾ ರಿಫ್ರೆಶ್ ಬೇಸಿಗೆ ಊಟಗಳಲ್ಲಿ ಸೇರಿಸಿದಾಗ ಅವುಗಳ ಮಧ್ಯಮ ನೀರಿನ ಅಂಶವು ಜಲಸಂಚಯನಕ್ಕೆ ಕೊಡುಗೆ ನೀಡುತ್ತದೆ. ಅನೇಕ ಸಾಂಪ್ರದಾಯಿಕ ಪದ್ಧತಿಗಳಲ್ಲಿ, ಬಿಸಿ ವಾತಾವರಣದಲ್ಲಿ ಹಸಿ ಈರುಳ್ಳಿ ಅಥವಾ ಈರುಳ್ಳಿ ರಸವನ್ನು ಸೇವಿಸಲಾಗುತ್ತದೆ ಮತ್ತು ಕೆಲವು ಜನರು ಶಾಖದ ಹೊಡೆತವನ್ನು ಕಡಿಮೆ ಮಾಡಲು ಜಾನಪದ ಪರಿಹಾರವಾಗಿ ಈರುಳ್ಳಿ ರಸವನ್ನು ಬಾಹ್ಯವಾಗಿ ಅನ್ವಯಿಸುತ್ತಾರೆ. ಆದಾಗ್ಯೂ, ಶಾಖದ ಹೊಡೆತವನ್ನು ತಡೆಗಟ್ಟಲು ಅಥವಾ ಚಿಕಿತ್ಸೆ ನೀಡಲು ನೇರ ವಿಧಾನವಾಗಿ ಈರುಳ್ಳಿಯನ್ನು ಬೆಂಬಲಿಸುವ ವೈಜ್ಞಾನಿಕ ಪುರಾವೆಗಳು ಇನ್ನೂ ಸೀಮಿತವಾಗಿವೆ.

**ಬೇಸಿಗೆಯ ಸೂಪರ್‌ಫುಡ್:** ಕೆಂಪು ಈರುಳ್ಳಿಯನ್ನು ಬೇಸಿಗೆಯ ಸೂಪರ್‌ಫುಡ್ ಎಂದು ಪರಿಗಣಿಸಲಾಗುತ್ತದೆ, ಏಕೆಂದರೆ ಅವುಗಳು ಬೇಸಿಗೆಯ ಆಯ್ಕೆಯನ್ನಾಗಿ ಮಾಡುವ ಹಲವಾರು ಗುಣಲಕ್ಷಣಗಳನ್ನು ಹೊಂದಿವೆ. ಜರ್ನಲ್ ಆಫ್ ಫುಡ್ ಮೆಷರ್ಮೆಂಟ್ ಅಂಡ್ ಕ್ಯಾರೆಕ್ಟರೈಸೇಶನ್‌ನಲ್ಲಿ ಪ್ರಕಟವಾದ ವ್ಯಾಪಕ ಸಂಶೋಧನೆಯ ಪ್ರಕಾರ, ಕೆಂಪು ಈರುಳ್ಳಿ ಹೆಚ್ಚಿನ ಪ್ರಮಾಣದ ನೀರಿನ ಅಂಶ ಮತ್ತು ಎಲೆಕ್ಟ್ರೋಲೈಟ್‌ಗಳನ್ನು ಹೊಂದಿದ್ದು ಅದು ಹೆಚ್ಚು ಕಾಲ ಬಿಸಿಲಿನಲ್ಲಿ ಇರುವುದರಿಂದ ಉಂಟಾಗುವ ನೀರಿನ ನಷ್ಟವನ್ನು ಪೂರೈಸುತ್ತದೆ.

**ನಿರ್ಜಲೀಕರಣವನ್ನು ತಡೆಯಲು ಸಹಾಯ**

ಫುಡ್ ಬಯೋಸೈನ್ಸ್ ಜರ್ನಲ್‌ನಲ್ಲಿ ಪ್ರಕಟವಾದ ಸಂಶೋಧನೆಯು ಕೆಂಪು ಈರುಳ್ಳಿಯಲ್ಲಿರುವ ಕ್ವೆರ್ಸೆಟಿನ್ ಅನ್ನು ಪ್ರತಿದಿನ ಮಧ್ಯಮ ಪ್ರಮಾಣದಲ್ಲಿ ಸೇವಿಸಿದಾಗ ನಿರ್ಜಲೀಕರಣವನ್ನು ತಡೆಯಲು ಸಹಾಯ ಮಾಡುತ್ತದೆ. ಈ ಪ್ರಯೋಜನಕಾರಿ ಸಂಯುಕ್ತದ ಜೊತೆಗೆ, ಇದು ಇವುಗಳನ್ನು ಸಹ ಒಳಗೊಂಡಿದೆ.

- **ನೈಸರ್ಗಿಕ ಲವಣಗಳು ಮತ್ತು ಖನಿಜಗಳು, ಇದು ತೀವ್ರ ಶಾಖದಲ್ಲಿ ಸಾಮಾನ್ಯವಾಗಿ ಕಂಡುಬರುವ ನೀರು ಮತ್ತು ಎಲೆಕ್ಟ್ರೋಲೈಟ್‌ಗಳ ನಷ್ಟವನ್ನು ಬೆಂಬಲಿಸುತ್ತದೆ.**
- **ಕೆಂಪು ಈರುಳ್ಳಿ ಬಾಯಾರಿಕೆ ಮತ್ತು ಲಾಲಾರಸವನ್ನು ಉತ್ತೇಜಿಸಲು ಸಹಾಯ ಮಾಡುತ್ತದೆ, ಇದು ನಿಧಾನಗತಿಯ ಜೀರ್ಣಾಂಗ ವ್ಯವಸ್ಥೆಯನ್ನು ನಿವಾರಿಸುತ್ತದೆ.**
- **ದೇಹವು ತನ್ನ ಕೋರ್ ತಾಪಮಾನವನ್ನು ಕಾಪಾಡಿಕೊಳ್ಳಲು ಹೆಣಗಾಡುತ್ತಿರುವಾಗ ಅಡ್ಡಿಪಡಿಸುವ ದ್ರವ ಸಮತೋಲನವನ್ನು ಬೆಂಬಲಿಸುತ್ತದೆ.**

**ಶಾಖದ ಹೊಡೆತವನ್ನು ತಡೆಯಲು**

ಕೆಂಪು ಈರುಳ್ಳಿ ಒಂದು ಕ್ರಿಯಾತ್ಮಕ ಆಹಾರವಾಗಿದೆ, ಅಂದರೆ ಅವು ಶಾಖದ ಹೊಡೆತದ ಸಮಯದಲ್ಲಿ ಸಂಭವಿಸುವ ಲಕ್ಷಣಗಳ ತೀವ್ರತೆಯನ್ನು ಕಡಿಮೆ ಮಾಡಬಹುದು. ಇಂಡಿಯನ್ ಜರ್ನಲ್ ಆಫ್ ಅಗ್ರಿಕಲ್ಚರಲ್ ಸೈನ್ಸಸ್‌ನಲ್ಲಿ ಪ್ರಕಟವಾದ ಸಂಶೋಧನೆಯು ಕೆಂಪು ಈರುಳ್ಳಿ ಶಾಖದ ಒತ್ತಡದಿಂದ ಬಳಲುತ್ತಿರುವ ದೇಹಕ್ಕೆ ಪ್ರಯೋಜನವನ್ನು ನೀಡುತ್ತದೆ ಎಂದು ವಿವರಿಸುತ್ತದೆ. ಆದರೆ ನೈಸರ್ಗಿಕ ತಂಪಾಗಿಸುವ ವಿಧಾನಗಳು ಮತ್ತು ಜಲಸಂಚಯನ ವಿಧಾನಗಳನ್ನು ಪ್ರಾರಂಭಿಸುವ ಮೂಲಕ ಸಂಭವನೀಯ ಶಾಖದ ಹೊಡೆತವನ್ನು ತಡೆಗಟ್ಟಲು ಒಟ್ಟಾರೆ ಪ್ರೋಟೋಕಾಲ್ ಅನ್ನು ಅನುಸರಿಸಬೇಕಾಗುತ್ತದೆ.

### ಸಸಿಗಳನ್ನು ನೆಡುವದರ ಜೊತೆಗೆ ಪೋಷಿಸುವಂತಹ ಕಾರ್ಯ ಅರಣ್ಯ ಅಧಿಕಾರಿಗಳು ಮಾಡಬೇಕು

# ನೀರಿಲ್ಲದೇ ರಸ್ತೆಬದಿ ಸಸಿಗಳ ರೋಧನೆ, ಅಧಿಕಾರಿಗಳ ಬೇಜವಾಬ್ದಾರಿತನ

• ಉದಯವಾಹಿನಿ, ತಾಳಿಕೋಟೆ

ಪಟ್ಟಣದ ಕೆಲವು ಬಡಾವಣೆಗಳಲ್ಲಿ ಮಂಗಗಳ ಹಾವಳಿ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ಇದು ಬಿಸಿಲಿನ ತಾಪಕ್ಕೆ ಗಿಡಮರಗಳೆನ್ನದೇ ಮನೆಗಳೊಳಗೆ ಹಾಗೂ ಶಾಲಾ ಕಾಲೇಜುಗಳು ಪ್ರವೇಶಿಸಿ ಉಪಟಳ ಮುಂದುವರೆಸಿದ್ದರಿಂದ ಸಾರ್ವಜನಿಕರಿಗೆ ದೊಡ್ಡ ತಲೆನೋವಾಗಿ ಪರಿಣಮಿಸಿದೆ. ಬಿಸಿಲಿನ ತಾಪ ಹೆಚ್ಚುತ್ತಾ ಸಾಗಿದ್ದರಿಂದ ಮಂಗಗಳು ಅರಣ್ಯದಿಂದ ಪಟ್ಟಣದೊಳಗೆ ಪ್ರವೇಶ ಮಾಡುವದರ ಜೊತೆಗೆ ಸಾರ್ವಜನಿಕರಿಗೆ ಕಿರಿ ಕಿರಿ ಉಂಟು ಮಾಡತೊಡಗಿವೆ ಕೆಲವು ಬಡಾವಣೆಗಳಲ್ಲಿಯ ದೊಡ್ಡ ಮರಗಳಲ್ಲಿ ಜಿಗಿದಾಟ ನಡೆಸುತ್ತಿದ್ದರೆ ಇನ್ನೂ ಕೆಲವು ಮಂಗಗಳು ಬಡಾವಣೆಯ ಮನೆಯ ಬಾಗಿಲು ತೆಗೆದಿದ್ದರೆ ಸಾಕು ಮನೆಯೊಳಗೆ ನುಗ್ಗುತ್ತಿವೆ ಅಲ್ಲೇ ಶಾಲಾ ಕಾಲೇಜುಗಳು ಪ್ರವೇಶಿಸಿ ತಮ್ಮ ಬಿದ್ದಿ ಪ್ರದರ್ಶಿಸುತ್ತಿವೆ, ಮಂಗಗಳನ್ನು ಬೇರೆಡೆ ಸಾಗಿಸುವ ಕುರಿತು ಸಾರ್ವಜನಿಕರು ಈಗಾಗಲೇ ಸಾಕಷ್ಟು ಭಾರಿ ಅರಣ್ಯ ಅಧಿಕಾರಿಗಳಿಗೆ ದೂರವಾಣಿಯ ಮೂಲಕ ಮೌಖಿಕವಾಗಿ ತಿಳಿಸಿದರೂ ಕೂಡಾ ಕ್ಯಾರೆ ಎನ್ನುತ್ತಿಲ್ಲಾ.

ಇನ್ನು ಕೆಲವು ಬಡಾವಣೆಗಳಲ್ಲಿ ಬೃಹತ್ ಆಕಾರದ ನೂರಾರು ವರ್ಷಗಳ ಹಳೆಯ ಮರಗಳು ಗಾಳಿಗೆ ಉರುಳಿ ಬಿದ್ದ ಪ್ರಸಂಗಗಳು ನಡೆದಿವೆ ಇವುಗಳನ್ನು ಕೂಡಲೇ ತೆರವುಗೊಳಿಸಿ ಹೊಸ ಗಿಡಗಳನ್ನು ನೆಡಬೇಕೆಂಬ ಯೋಚನೆಯೊಂದಿಗೆ ವಾಲಿರುವ ಮರಗಳ ತೆರವಿಗೆ ತಿಳಿಸಿದರೂ ಕೂಡಾ ಅವುಗಳನ್ನು ತೆರವುಗೊಳಿಸುವ ಗೋಜಿಗೆ ಹೋಗುತ್ತಿಲ್ಲಾ ಬೃಹತ್ ಮರಗಳ ಟೊಂಗೆಗಳು ಕೆಲವು ಬಡಾವಣೆಗಳ ಮನೆಗಳ ಮೇಲೆ ಬಿದ್ದು ಗೋಡೆಗಳು ಕುಸಿದಿವೆ ಅಲ್ಲದೇ ಕೆಲವು ಕಡೆ ವಿದ್ಯುತ್ ವಾಯರ್ಗಳ ಮೇಲೆ ಬಿದ್ದಿದ್ದರಿಂದ ವಾಯರ್ಗಳು ಕೂಡಾ ಹರಿದು ನೆಲಕ್ಕೆ ಬಿದ್ದಿವೆ ಆದರೆ ಈ ಘಟನಾವಳಿಯಲ್ಲಿ ಯಾವ ಜೀವಹಾನಿಯಾಗಿಲ್ಲಾವೆಂಬುದು ನೆಮ್ಮದಿ ಬಿಟ್ಟರೆ ಯಾವ ಹೊತ್ತಿನಲ್ಲಿ ಯಾರಬಲಿ ತೆಗೆದುಕೊಳ್ಳುತ್ತವೆ ಎಂಬ ಆತಂಕ ಜನರಲ್ಲಿ ಕಾಡತೊಡಗಿವೆ. ಒಂದು ವಾರದ ಹಿಂದೆ ಪಟ್ಟಣದ ಪೊಲೀಸ್ ಸ್ಟೇಷನ್ ಹತ್ತಿದ ನಾಗಪ್ಪನಕಟ್ಟಿಯಬಳಿ ಬೃಹತ್ ಮರವು ಗಾಳಿಗೆ ರಸ್ತೆಗೆ ಉರುಳಿ ಬಿದ್ದಿತ್ತು ಎರಡುದಿನಗಳಾದರೂ ಇದನ್ನು ತೆರವುಗೊಳಿಸುವ ಗೋಜಿಗೆ ಅರಣ್ಯ ಅಧಿಕಾರಿಗಳು ಹೋಗದ ಕಾರಣ ದೇವಸ್ಥಾನಕ್ಕೆ ಬರುವ ಭಕ್ತಾಧಿಗಳು ಪುರಸಭೆ ಸಿಬ್ಬಂದಿಗಳ ಸಹಾಯದ ಮೂಲಕ ತೆರವುಗೊಳಿಸಿಕೊಂಡ ಘಟನೆ ನಡೆದಿದೆ.

ತಾಳಿಕೋಟೆ ನಗರದ ಅಲ್ಲದೇ ಪ್ರಮುಖ ಮುಖ್ಯ ರಸ್ತೆಗಳ ಮಗ್ಗಲಿಗೆ


ಉದಯವಾಹಿನಿ ಚಿತ್ರ

> ಮಂಗಗಳ ಉಪಟಳ ಬಗ್ಗೆ ದೂರು ಬಂದಿತ್ತು ಮಂಗಗಳ ಹಿಡಿಯಲು ತರಬೇತಿ ಹೊಂದಿದವರನ್ನು ಕರೆಸಲು ಖರ್ಚು ತಗಲುತ್ತದೆ ಈ ಕುರಿತು ಖರ್ಚು ಬರಿಸುವ ಕುರಿತು ಪುರಸಭೆಗೆ ಲೇಟರ್ ಬರೆದಿದ್ದೇವೆ ಮತ್ತು ರಸ್ತೆಬದಿಗೆ ನಮ್ಮ ಇಲಾಖೆಯಿಂದ ಹಚ್ಚಲಾದ ಸಸಿಗಳಿಗೆ ಎರಡು ಭಾರಿ ನೀರುಣಿಸಲು ಅವಕಾಶವಿದೆ ಸಸಿಗಳು ಒಣಗುತ್ತಿರುವ ಬಗ್ಗೆ ಮಾಹಿತಿ ಇಲ್ಲಾ ಪರಿಶೀಲಿಸುತ್ತೇನೆ ನೂರಾರು ವರ್ಷಗಳ ಬೃಹತ್ ಮರಗಳಲ್ಲಿ ಪುರಾತನ ನಂಬಿಕೆ ಜನರದ್ದು ಇರುತ್ತದೆ ಇದರಿಂದ ತೆರವುಗೊಳಿಸಿಲ್ಲಾ ತೆರವುಗೊಳಿಸುವ ಕುರಿತು ಯಾರಾದರೂ ತಿಳಿಸಿದರೆ ಅಂತವುಗಳನ್ನು ತೆರವುಗೊಳಿಸುತ್ತೇವೆ. -ಬಿ.ಆಯ್.ಬಿರಾದಾರ
> ಪ್ರಾದೇಶಿಕ ಅರಣ್ಯ ಅಧಿಕಾರಿ.

ಅರಣ್ಯ ಇಲಾಖೆಯಿಂದ ಸಸಿಗಳನ್ನು ನೆಡಲಾಗಿದೆ ಆದರೆ ಅವುಗಳ ಪೋಷಿಸುವ ಕಾರ್ಯಕ್ರಮ ವಾಗುತ್ತಿಲ್ಲಾ ರಸ್ತೆಪಕ್ಕ ಹಚ್ಚಿದ ಸಸಿಗಳಿಗೆ ನೀರುಣಿಸುವ ಕಾರ್ಯ ನಡೆಯದ್ದರಿಂದ ಅವುಗಳು ಒಣಗಿಹೋಗುತ್ತಿವೆ ಮೊದಲೇ ಬಿಸಿಲಿನ ತಾಪ ಹೆಚ್ಚುತ್ತಾ ಸಾಗಿದ್ದರಿಂದ ಭೂಮಿಯ ಪಾತಾಳದ ಮೇಲೆ ನಡೆಯುವದೇ ದುಸ್ಥರವೆಂಬ ಸಂದರ್ಭದಲ್ಲಿ ಸಸಿಗಳಿಗೆ ನೀರುಣಿಸದಿದ್ದರೆ ಅವುಗಳ ಇದ್ದ ಸ್ಥಳದಲ್ಲಿಯೇ ಒಣಗಿ ನಿಲ್ಲುತ್ತಿವೆ. ಅರಣ್ಯ ಇಲಾಖೆಯಿಂದ ಕೇವಲ ಸಸಿಗಳನ್ನು ನೆಡುವ ಕಾರ್ಯ ಮಾತ್ರವಲ್ಲಾ ಅವುಗಳನ್ನು ಪೋಷಿಸುವ ಕಾರ್ಯವನ್ನೂ ಕೂಡಾ ಮಾಡಬೇಕು ಕೆಲವುಕಡೆಗಳಲ್ಲಿ ಮರಗಳ ಮಾರಣಹೋಮ ನಡೆಯುವದನ್ನು ತಡೆಗಟ್ಟಬೇಕು ಅಲ್ಲದೇ ಪ್ರಾಣಿ ಪಕ್ಷೀ ಸಂಕುಲಗಳನ್ನು ಸಂರಕ್ಷೀಸುವದರೊಂದಿಗೆ ಅವುಗಳಿಗೆ ವ್ಯವಸ್ಥೆ ಕಲ್ಪಿಸುವಂತಹ ಕೆಲಸ ಮಾಡಬೇಕು ಆದರೆ ಅರಣ್ಯ ಅಧಿಕಾರಿಗಳಿಂದ ಯಾವುದೇ ಕಾರ್ಯ ಕಂಡುಬರುತ್ತಿಲ್ಲಾ ಅರಣ್ಯ ಅಧಿಕಾರಿಗಳ ಬೇಜವಾಬ್ದಾರಿತನಕ್ಕೆ ರಸ್ತೆಬದಿ ಹಚ್ಚಿದ ಸಸಿಗಳಿಗೆ ಅರಣ್ಯ ಅಧಿಕಾರಿಗಳೇ ಮರಣಶಾಸನ ಬರೆದಂತಿದೆ. ಕೆಲವು ನೂರಾರು ವರ್ಷಗಳ ಹಳೆಯ ಮರಗಳು ಗಾಳಿಗೆ ಉರುಳಿ ಬಿದ್ದು ಬಲಿಗಾಗಿ ಕಾಯ್ದಂತೆ ಎದ್ದು ಕಾಣುತ್ತಿವೆ. ಬಡಾವಣೆಗಳಲ್ಲಿ ಮಂಗಗಳು ಮಹಿಳೆಯರು ಮತ್ತು ಮಕ್ಕಳ ಮೇಲೆ ದಾಳಿ ಮಾಡುತ್ತಿರುವ ಪ್ರಕರಣಗಳು ಅಲ್ಲಲ್ಲಿ ವರದಿಯಾಗಿವೆ ಮಂಗಗಳನ್ನು ಕಾಡಿಗೆ ಅಟ್ಟುವಲ್ಲಿ ಪುನರ್ವಸತಿ ಕಲ್ಪಿಸುವಲ್ಲಿ ಅರಣ್ಯ ಇಲಾಖೆಯು ವಿಫಲವಾಗಿದೆ ಎಂಬ ಆರೋಪ ಸಾರ್ವಜನಿಕರಿಂದ ಭಲವಾಗಿ ಕೇಳಿಬರುತ್ತಿದೆ.

> ಸಸಿಗಳನ್ನು ನೆಡುವದರ ಜೊತೆಗೆ ಪೋಷಿಸುವಂತಹ ಕಾರ್ಯ ಅರಣ್ಯ ಅಧಿಕಾರಿಗಳು ಮಾಡಬೇಕು ಆದರೆ ಹಚ್ಚಿದ ಸಸಿಗಳಿಗೆ ನೀರುಣಿಸದೇ ಅವುಗಳಿಗೆ ಅಧಿಕಾರಿಗಳೇ ಮರಣಶಾಸನ ಬರೆಯುತ್ತಿರುವದು ದುರದೃಷ್ಠಕರ, ಮಂಗಗಳು ಬಡಾವಣೆಯಲ್ಲಿಯ ಮನೆಗಳಿಗೆ ಅಲ್ಲದೇ ಶಾಲಾ ಕಾಲೇಜುಗಳಿಗೆ ನುಗ್ಗಿ ಕಿರಿಕಿರಿ ಮಾಡುತ್ತಿವೆ ಅವುಗಳನ್ನು ಅರಣ್ಯಕ್ಕೆ ರವಾನಿಸುವ ಕಾರ್ಯವಾಗುತ್ತಿಲ್ಲಾ ನೂರಾರು ವರ್ಷಗಳ ಗಿಡ ಮರಗಳ ಟೊಂಗೆಗಳು ಗಾಳಿಗೆ ಮುರಿದು ಬಿದ್ದಿವೆ ಅಂತವುಗಳನ್ನು ತೆರವುಗೊಳಿಸಿ ಹೊಸ ಸಸಿಗಳನ್ನು ನೆಡುವ ಕಾರ್ಯ ಮಾಡಬೇಕು ಇಲ್ಲದಿದ್ದರೆ ಕರವೇ ಸಂಘಟನೆಯಿಂದ ಬೀದಿಗಿಳಿದು ಹೋರಾಟ ಮಾಡಬೇಕಾಗುತ್ತದೆ.
> -ನಿಸಾರ ಬೇಪಾರಿ, ಕರವೇ ಸಂಘಟನೆಯ ತಾಲ್ಲೂಕಾ ಅಧ್ಯಕ್ಷ

**ಅಧಿಕಾರಿಗಳೇ ಮರಣಶಾಸನ ಬರೆಯುತ್ತಿರುವದು ದುರದೃಷ್ಠಕರ**

> ಮಂಗಗಳ ಹಿಡಿಯಲು ತರಬೇತಿ ಹೊಂದಿದವರನ್ನು ಕರೆಸಲು ಖರ್ಚು ಬರಿಸಲು ಪುರಸಭೆಯಿಂದ ಸಿದ್ದರಿದ್ದೇವೆ ಅರಣ್ಯ ಇಲಾಖೆಯಿಂದ ತರಬೇತಿದಾರರನ್ನು ಕರೆಸುವ ಮತ್ತು ಅದಕ್ಕೆ ತಗಲುವ ವೆಚ್ಚದ ಬಗ್ಗೆ ಯಾವುದೇ ಲೇಟರ್ ನಮಗೆ ಬರೆದಿಲ್ಲಾ ಹಾಗೇನಾದರೂ ಅರಣ್ಯ ಇಲಾಖೆಯಿಂದ ಖರ್ಚು ಭರಿಸುವ ಕುರಿತು ಲೇಟರ್ ಬಂದರೆ ಖರ್ಚು ಭರಿಸಲು ಸಿದ್ದರಿದ್ದೇವೆ. ನೂರಾರು ವರ್ಷಗಳ ಹಳೆಯ ಮರಗಳು ಕೆಲವೆಡೆ ರಸ್ತೆಗೆ ಉರುಳಿ ಬಿದ್ದಿದ್ದವು ಅವುಗಳನ್ನು ನಮ್ಮ ಪುರಸಭೆಯ ಸಿಬ್ಬಂದಿಗಳ ಮೂಲಕ ತೆರವುಗೊಳಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಟ್ಟಿದ್ದೇವೆ. -ವಸಂತ ಪವಾರ ಪುರಸಭೆ ಮುಖ್ಯಾಧಿಕಾರಿ ತಾಳಿಕೋಟೆ

## ಕಲಾ ಪ್ರಕಾರ ಯಾವುದೇ ಇರಲಿ ಸಂಪೂರ್ಣ ತೊಡಗಿಸಿಕೊಂಡು ಪ್ರಬುದ್ದತೆ ಪಡೆಯಬೇಕು

• ಉದಯವಾಹಿನಿ, ಬಳ್ಳಾರಿ

ನಗರದ ಡಾ.ಜೋಳದರಾಶಿ ದೊಡ್ಡನಗೌಡ ರಂಗ ಮಂದಿರದಲ್ಲಿ ಇಂದು ರಾಯಚೂರಿನ ಬೆಳಕು ಸಾಹಿತ್ಯ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಟ್ರಸ್ಟ್ ನಿಂದ ಗಡಿನಾಡು ಸಮ್ಮೇಳನ ನಡೆಯಿತು.

ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಡಾ.ಅಮರೇಶ ನುಗಡೋಣಿ ಅವರು ಸಮ್ಮೇಳನ ಉದ್ಘಾಟನೆ ಮಾಡಿ, ರಾಜ್ಯದ ಪ್ರತಿಭೆಗಳನ್ನು ಗುರುತಿಸುವ ಕಾರ್ಯ ಈ ಕಾರ್ಯಕ್ರಮದ ಮೂಲಕ ಆಗುತ್ತಿರುವುದು ಸಂತಸದ ಸಂಗತಿ. ಯಾವುದೇ ಕಲಾ ಪ್ರಕಾರ ಇರಲಿ. ಅದರಲ್ಲಿ ಸಂಪೂರ್ಣ ಮನಸ್ಸು ತೊಡಗಿಸಿಕೊಂಡು ಪ್ರಬುದ್ದತೆ ಪಡೆಯಬೇಕು ಎಂದರು. ಯಾಕೆ, ಯಾರಿಗಾಗಿ ಈ ಕಲೆ ಸಾಹಿತ್ಯ ಎಂಬ ಅರಿವು ಸಹ ಇರಬೇಕು. ಕೇವಲ ಫ್ಯಾಶನ್ ಆಗದೆ, ಕಲಾತ್ಮಕತೆಯನ್ನು



ಉದಯವಾಹಿನಿ ಚಿತ್ರ

ಮೈಗೂಡಿಸಿಕೊಳ್ಳಬೇಕು. ಎಷ್ಟು ಬರೆದೆ ಎಂಬುದು ಮುಖ್ಯ ಅಲ್ಲ. ಅವು ಎಷ್ಟು ಕಾಲ ಸಮಾಜಕ್ಕೆ ಪ್ರಸ್ತುತ ಎಂಬುದನ್ನು ಅರಿತು. ಲೋಕದ ಅನಿಷ್ಟತೆಯನ್ನು ಪ್ರಶ್ನಿಸುವಂತಿರಬೇಕು. ಅಂತಹುದನ್ನು ನಾವು ಶಿವ ಶರಣ ವಚನಗಳಲ್ಲಿ ಕಾಣುತ್ತೇವೆ ಎಂದರು. ಸಮಾರಂಭಗಳಲ್ಲಿ ಸನ್ಮಾನ ಮಾಡುವುದು, ಮಾಡಿಸಿಕೊಳ್ಳುವುದೇ ಮುಖ್ಯ ಆಗದೆ. ಸಮಾಜದಲ್ಲಿ ಸನ್ಮಾನ ಮಾಡಿಸಿಕೊಂಡವರು ಹತ್ತು ವರ್ಷಗಳ ನಂತರ ಹೇಗೆಗುರುತಿಸಿಕೊಳ್ಳುವಂತೆ ಆಗಿದ್ದಾರೆ ಎನ್ನುವಂತಾಗಬೇಕು.ಕಲ್ಯಾಣ ಕರ್ನಾಟಕದಲ್ಲಿ ಪ್ರತಿಭೆಗಳು ಇಂತಹ ಸಂಸ್ಥೆ ಮೂಲಕ ಬೆಳಕಿಗೆ ಬರಲಿ ಎಂದು ಆಶಿಸಿದರು. ಕಲ್ಯಾಣ ಕರ್ನಾಟಕದ ಅಭಿವೃದ್ಧಿ ಸರ್ಕಾರ, ಜನಪ್ರತಿನಿಧಿಗಳು, ಶಿಕ್ಷಕರಿಂದ ಮಾತ್ರ ಸಾಧ್ಯ ಇಲ್ಲ. ಎಲ್ಲರೂ ನಾವು ಶೈಕ್ಷಣಿಕ ಅಭಿವೃದ್ದಿಗೆ ಪೂರಕವಾಗಿ ದುಡಿಯಬೇಕು ಎಂದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿವೃತ್ತ ಉಪ ನಿರ್ದೇಶಕ ಚೋರನೂರು ಕೊಟ್ರಪ್ಪ ಮಾತನಾಡಿ, ಬಳ್ಳಾರಿಯಲ್ಲಿ ಬೆಳಕು ಸಂಸ್ಥೆಯಿಂದ ಇಂತಹ ಗಡಿ ಸಮ್ಮೇಳನ ನಡೆಸಿದ್ದು ಸ್ವಾಗತಾರ್ಹ, ಗಡಿ ಎಂಬುದು ಭೌಗೋಳಿಕವಾಗಿ ಇರುತ್ತೆ, ಆದರೆ ಕಲೆ, ಸಾಹಿತ್ಯ ಸಂಸ್ಕೃತಿಗೆ ಗಡಿ ಇರಲ್ಲ ಸರ್ವತ್ರ ಮಾನ್ಯವಾದುದು ಎಂದರು.

ಸಮ್ಮೇಳನದ ಅಧ್ಯಕ್ಷರಾಗಿ ಬಳ್ಳಾರಿ ಜಿಲ್ಲಾ ಕಲಾವಿದರ ಸಂಘದ ಅಧ್ಯಕ್ಷ ಯಲ್ಲನಗೌಡ ಶಂಕರಬಂಡೆ ಇದ್ದರು.

## ಮಿನಿ ನ್ಯೂಸ್

### ಚಿನ್ನಾಭರಣ ಕಳವು: ದೂರು ದಾಖಲು

• ಉದಯವಾಹಿನಿ, ಭಟ್ಕಳ

ತಾಲ್ಲೂಕಿನಲ್ಲಿ ಕಿದ್ವಾಯಿ ರಸ್ತೆಯಲ್ಲಿರುವ ಮನೆಗೆ ಹಿಂಬದಿ ಬಾಗಿಲು ಮುರಿದು ಒಳನುಗ್ಗಿದ ಕಳ್ಳರು ನಗದು ಚಿನ್ನಾಭರಣ ದೋಚಿ ಪರಾರಿಯಾದ ಘಟನೆ ನಡೆದಿದೆ. ಮನೆಯ ಮಾಲಕಿ ಸಾಹಿದ್ ಅಕ್ತರ ಅತರ್ ಅಹ್ಮದ ಬಂಟ್ವಾಳ ಶಹರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ಶುಕ್ರವಾರ ಬೆಳಿಗ್ಗೆ 5 ಗಂಟೆಗೆ ಮನೆಯ ಹಿಂಬದಿಯ ಕಿಟಕಿಯ ಗಾಜು ಒಡೆದು ಬಾಗಲಿನ ಚಿಲಕ ತೆಗೆದು ಒಳನುಗ್ಗಿದ ಕಳ್ಳರು 55 ಗ್ರಾಂ ತೂಕದ ರೂ.5.50 ಲಕ್ಷ ಮೌಲ್ಯದ ಚಿನ್ನಾಭರಣ ಹಾಗೂ ರೂ.10 ಸಾವಿರ ನಗದು ದೋಚಿ ಪರಾರಿಯಾಗಿದ್ದಾರೆ ಎಂದು ದೂರಿನಲ್ಲಿ ತಿಳಿಸಿದ್ದಾರೆ. ಸ್ಥಳಕ್ಕೆ ಶ್ವಾನದಳ ಹಾಗೂ ಬೆರಳಚ್ಚುಗಾರರು ಭೇಟಿ ನೀಡಿ ಪರಿಶೀಲಿಸಿದ್ದು. ಕಳ್ಳರ ಪತ್ತೆಗೆ ತನಿಖೆ ಮುಂದುವರೆದಿದೆ.

### ಅಕ್ರಮ ಜಾನುವಾರು ಸಾಗಣೆ: ಬಂಧನ

• ಉದಯವಾಹಿನಿ, ಉಡುಪಿ

ವಾಹನದಲ್ಲಿ ಅಕ್ರಮವಾಗಿ ಜಾನುವಾರು ಸಾಗಣೆ ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ಪೊಲೀಸರು ಹಿರಿಯಡ್ಕದ ಪಕ್ಕಾಲು ಹೆಬ್ಬಾರು ಸೇತುವೆ ಬಳಿಯಲ್ಲಿ ಬಂಧಿಸಿದ್ದಾರೆ. ಕುರ್ಕಾಲುವಿನ ಸುಹಾಸ್ (21) ಹಾಗೂ ಕಾಪು ಭರತ್ ನಗರದ ಲವ ಶೆಟ್ಟಿ (64) ಬಂಧಿತ ಆರೋಪಿಗಳು. ಇವರು ಕಸಾಯಿಖಾನೆಗೆ ಮಾಂಸ ಮಾಡಲು ಪೆರ್ಡೂರು ಕಡೆಯಿಂದ ಹಿರಿಯಡ್ಕ ಕಡೆಗೆ ಟೆಂಪೋ ಗೂಡ್ಸ್ ವಾಹನದಲ್ಲಿ ಅಕ್ರಮವಾಗಿ 4 ಜಾನುವಾರುಗಳನ್ನು ಸಾಗಿಸುತ್ತಿದ್ದು. ಪಕ್ಕಾಲು ಹೆಬ್ಬಾರು ಸೇತುವೆ ಬಳಿ ವಾಹನ ಚಾಲಕನ ನಿಯಂತ್ರಣ ತಪ್ಪಿ ಚರಂಡಿಗೆ ಇಳಿದಿದೆ. ಈ ವೇಳೆ ಆರೋಪಿಗಳನ್ನು ಬಂಧಿಸಿ, ಜಾನುವಾರುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಈ ಬಗ್ಗೆ ಹಿರಿಯಡ್ಕ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

### ಕಾರ್ಮಿಕನಿಗೆ ಉದ್ಯೋಗದಾತರು ಪರಿಹಾರ ನೀಡಬೇಕು: ನ್ಯಾಯಾಧೀಶೆ ರಾಜೇಶ್ವರಿ

• ಉದಯವಾಹಿನಿ ಬ್ಯಾಡಗಿ

ಉದ್ಯೋಗದ ಸಮಯದಲ್ಲಿ ಅಪಘಾತಕ್ಕೀಡಾದ ಪ್ರತಿಯೊಂದು ನೋಂದಾಯಿತ ಕಾರ್ಮಿಕನಿಗೆ ಉದ್ಯೋಗ ದಾತರು ಪರಿಹಾರ ನೀಡಬೇಕು ಎಂದು ಹಿರಿಯ ನ್ಯಾಯಾಧೀಶೆ ರಾಜೇಶ್ವರಿ ಪುರಾಣಿಕ ಹೇಳಿದರು. ಪಟ್ಟಣದ ಸಾಯಿ ಗಾರ್ಮೆಂಟ್ಸ್‌ನಲ್ಲಿ ವಿಶ್ವ ಕಾರ್ಮಿಕ ದಿನಾಚರಣೆ ಅಂಗವಾಗಿ ಜಿಲ್ಲಾ ಕಾನೂನು ಸೇವೆಗಳ ಸಮಿತಿ, ವಕೀಲರ ಸಂಘ ಹಾಗೂ ಕಾರ್ಮಿಕ ಇಲಾಖೆ ಇವರ ಸಂಯುಕ್ತ ಆಶ್ರಯದಲ್ಲಿ ಈಚೆಗೆ ಏರ್ಪಡಿಸಿದ್ದ ಕಾನೂನು ಸಾಕ್ಷರತಾ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ದೇಶದ ಪ್ರಗತಿಗೆ ಮಹತ್ವದ ಕೊಡುಗೆ ನೀಡುತ್ತಿರುವ ಅಸಂಖ್ಯಾತ ಕಾರ್ಮಿಕರ ಪರಿಶ್ರಮ ಸ್ಮರಿಸುವುದು ಅಗತ್ಯವಾಗಿದೆ. ಕಾರ್ಮಿಕರು ಅತ್ಯಂತ ಸಂಕಷ್ಟ ಎದುರಿಸುತ್ತಿದ್ದು, ದುಶ್ಚಟಗಳಿಂದ ದೂರವಿದ್ದು, ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸುವ ನಿಟ್ಟಿನಲ್ಲಿ ಪ್ರಯತ್ನಗಳನ್ನು ಮಾಡಬೇಕಾಗಿದೆ ಎಂದರು. ಜಿಲ್ಲಾ ಕಾರ್ಮಿಕ ಅಧಿಕಾರಿ ತರನ್ನುಮ ಬೆಂಗಾಲಿ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಎಚ್.ವಿ.ಶೈಲಜಾ, ಪ್ರಭು ಶೀಗಿಹಳ್ಳಿ, ಕೆ.ಆರ್. ಲಮಾಣಿ, ರಾಜಣ್ಣ ನ್ಯಾಮತಿ, ವಕೀಲರ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಎಚ್.ಸಿ.ಸಿದ್ದನಗೌಡ, ತಾಲ್ಲೂಕು ಘಟಕದ ಪದಾಧಿಕಾರಿಗಳಾದ ಜಿ.ಬಿ.ಯಲಗಚ್ಚ, ಎಚ್.ಜಿ.ಮುಳಗುಂದ ಹಾಜರಿದ್ದರು.

### 34,720 ಕೆ.ಜಿ ಅನ್ನಭಾಗ್ಯ ಅಕ್ಕಿ ವಶ

• ಉದಯವಾಹಿನಿ ಗದಗ

ರಾಜ್ಯ ಸರ್ಕಾರ ನೀಡುವ ಅನ್ನ ಭಾಗ್ಯ ಪಡಿತರ ಅಕ್ಕಿಗೆ ಪಾಲಿಶ್ ಮಾಡಿ, ವಿವಿಧ ಬ್ರ್ಯಾಂಡ್‌ಗಳ ಹೆಸರು ಬಳಸಿ, ಪ್ರೀಮಿಯಂ ಅಕ್ಕಿಯೆಂದು ಹೊರ ರಾಜ್ಯಗಳಿಗೆ ದುಬಾರಿ ಬೆಲೆಗೆ ಮಾರಾಟ ಮಾಡಲು ಸಾಗಿಸುತ್ತಿದ್ದ ರೂ.14 ಲಕ್ಷ ಮೌಲ್ಯದ 34,720 ಕೆ.ಜಿ. ಅಕ್ಕಿಯನ್ನು ಗದಗ ಪೊಲೀಸರು ವಶಕ್ಕೆ ಪಡೆದಿದ್ದಾರೆ. ಅಕ್ರಮವಾಗಿ ಸಾಗಣೆ ಮಾಡುತ್ತಿದ್ದ ಅಕ್ಕಿ ಜತೆಗೆ ಮಧ್ಯಪ್ರದೇಶದ ನೋಂದಣಿ ಇರುವ ರೂ.29 ಲಕ್ಷ ಮೌಲ್ಯದ 10 ಚಕ್ರಗಳ ದೊಡ್ಡ ಟ್ರಕ್ ಮತ್ತು ಲಾರಿ ಚಾಲಕನನ್ನು ವಶಕ್ಕೆ ಪಡೆಯಲಾಗಿದೆ. ಪೊಲೀಸರು ಟ್ರಕ್ ಚಾಲಕನನ್ನು ವಿಚಾರಣೆಗೆ ಒಳಪಡಿಸಿದಾಗ ಮೋಸದ ಅಕ್ಕಿ ಜಾಲದ ವಿಚಾರ ಬೆಳಕಿಗೆ ಬಂದಿದೆ.

ಹೊರ ಜಿಲ್ಲೆಗಳಲ್ಲಿ ಸಂಗ್ರಹಿಸಿದ್ದ ಅನ್ನಭಾಗ್ಯ ಅಕ್ಕಿ ತುಂಬಿರುವ ಲಾರಿ ಗದಗ ಜಿಲ್ಲೆಯ ಮೂಲಕ ಹೊರ ರಾಜ್ಯಕ್ಕೆ ತೆರಳಲಿದೆ ಎಂಬ ಖಚಿತ ಮಾಹಿತಿ ಸಿಕ್ಕಿತ್ತು. ಅದರಂತೆ ನಗರದ ತೋಂಟದಾರ್ಯ ಇಂಜಿನಿಯರಿಂಗ್ ಕಾಲೇಜು ಬಳಿ ದಾಳಿ ನಡೆಸಿ, ಅಕ್ರಮವಾಗಿ ಸಾಗಣೆ ಮಾಡುತ್ತಿದ್ದ ಅಕ್ಕಿಯನ್ನು ವಶಕ್ಕೆ ಪಡೆಯಲಾಗಿದೆ ಎಂದು ಗದಗ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರೋಹನ್ ಜಗದೀಶ್ ತಿಳಿಸಿದ್ದಾರೆ.

ಅಕ್ಕಿಯ ಅಸಲಿಯತ್ತು ಪರೀಕ್ಷಿಸುವ ಸಲುವಾಗಿ ಪೊಲೀಸರು ಆಹಾರ ನಿರೀಕ್ಷಕರು ಮತ್ತು ತಜ್ಞರನ್ನು ಕರೆಯಿಸಿ ಪರೀಕ್ಷೆ ಮಾಡಿಸಿದ್ದಾರೆ. ಇದು ಅನ್ನ ಭಾಗ್ಯ ಅಕ್ಕಿಗೆ ಪಾಲಿಶ್ ಮಾಡಿ, ಪ್ರೀಮಿಯಂ ಅಕ್ಕಿ ಎಂದು ದುಬಾರಿ ಬೆಲೆಗೆ ಮಾರಾಟ ಮಾಡುವ ಜಾಲ ಎಂದು ತಜ್ಞರು ದೃಢೀಕರಿಸಿದ್ದಾರೆ. ಪಡಿತರ ಅಕ್ಕಿಗೆ ಪಾಲಿಶ್ ಮಾಡಿ ಮಾರಾಟ ಮಾಡುವ ವಿಚಾರ ಗೊತ್ತಾಗಬಾರದೆಂದು ಖದೀಮರು ನಕಲಿ ಬಿಲ್, ದಾಖಲೆಗಳನ್ನು ಕೂಡ ಸೃಷ್ಟಿಸಿದ್ದಾರೆ.

## ರದ್ದಾದ ವಿಮಾನಗಳು ಕುಸಿದ ಪ್ರಯಾಣಿಕರ ಸಂಖ್ಯೆ



• ಉದಯವಾಹಿನಿ, ಬೆಳಗಾವಿ

ಇಲ್ಲಿನ ಸಾಂಬ್ರಾ ವಿಮಾನ ನಿಲ್ದಾಣದಿಂದ ವಿವಿಧ ಮಾರ್ಗಗಳಲ್ಲಿ ಕಾರ್ಯಾಚರಣೆ ನಡೆಸುತ್ತಿದ್ದ ವಿಮಾನಗಳ ಸೇವೆ ರದ್ದಾಗುತ್ತಿದೆ. ಇದರಿಂದ ಸಾಂಬ್ರಾ ನಿಲ್ದಾಣ ಸೊರಗುತ್ತಿದ್ದು, ಪ್ರಯಾಣಿಕರ ಸಂಖ್ಯೆಯೂ ಕುಸಿಯುತ್ತಿದೆ. 2024-25ನೇ ಸಾಲಿನಲ್ಲಿ ಸಾಂಬ್ರಾ ವಿಮಾನ ನಿಲ್ದಾಣ ಮಾರ್ಗವಾಗಿ 3,40,295 ಜನರು ಪ್ರಯಾಣಿಸಿದ್ದರು. 2025-26ನೇ ಸಾಲಿನಲ್ಲಿ ಆ ಸಂಖ್ಯೆ 3,01,516ಕ್ಕೆ ಇಳಿಕೆಯಾಗಿದೆ. ಪ್ರಯಾಣಿಕರಿಂದ ಉತ್ತಮ ಸ್ಪಂದನೆಯಿದ್ದರೂ ವಿವಿಧ ಮಾರ್ಗಗಳಲ್ಲಿ ಸೇವೆ ರದ್ದುಪಡಿಸಿದ್ದಕ್ಕೆ ಜನರಿಂದ, ಅದರಲ್ಲೂ ಉದ್ಯಮಿಗಳಿಂದ ಅಸಮಾಧಾನವಿದೆ. ಇಲ್ಲಿಂದ ಕಾರ್ಯಾಚರಣೆ ನಡೆಸುತ್ತಿದ್ದ ವಿಮಾನಗಳ ಸಂಖ್ಯೆ ಪ್ರಮಾಣ ಕುಸಿಯಲು ಸ್ಥಳೀಯ ಜನಪ್ರತಿನಿಧಿಗಳ ನಿರ್ಲಕ್ಷ್ಯವೂ ಕಾರಣ ಎಂಬ ಆರೋಪವಿದೆ. ಯಾವುದೇ ಮಾರ್ಗದಲ್ಲಿ ಸೇವೆ ರದ್ದುಪಡಿಸಬೇಡಿ. ರದ್ದಾದ ಮಾರ್ಗಗಳಲ್ಲಿ ಪುನಃ ಆರಂಭಿಸಿ ಎಂದು ನಾವು ಕೋರಿದ್ದೇವೆ. ಆದರೆ, ಇಂಧನ ದರ ಹೆಚ್ಚಳ ಕಾರಣಕ್ಕೆ ವಿಮಾನಯಾನ ಸಂಸ್ಥೆಗಳು ಮನಸ್ಸು ಮಾಡುತ್ತಿಲ್ಲ ಎಂದು ಸಂಸದ ಜಗದೀಶ ಶೆಟ್ಟರ್ ಹೇಳುತ್ತಾರೆ.


ಉಡಾನ್-3 ಯೋಜನೆಯಡಿ ಸಾಂಬ್ರಾದಿಂದ ಮುಂಬೈ, ಪುಣೆ, ಹೈದರಾಬಾದ್, ತಿರುಪತಿ, ಸೂರತ್, ಕಡಪ, ಮೈಸೂರು, ಇಂದೋರ್, ಜೋಧಪುರ, ಅಹಮದಾ ಬಾದ್, ನಾಸಿಕ್ ಮತ್ತು ನಾಗುರಕ್ಕೆ ನೇರ ವಿಮಾನಗಳು 2019ರಿಂದ ಹಾರಾಟ ನಡೆಸಿದ್ದವು. ಪ್ರಯಾಣಿಕರಿಂದಲೂ ಉತ್ತಮ ಪ್ರತಿಕ್ರಿಯೆ ಸಿಕ್ಕಿತ್ತು. ಆದರೂ, ಯೋಜನೆ ಮುಗಿದ ಕಾರಣ ವಿಮಾನಯಾನ ಸಂಸ್ಥೆಗಳು ಹಂತ-ಹಂತವಾಗಿ ಸೇವೆ ಸ್ಥಗಿತಗೊಳಿಸಿದವು. ಉಡಾನ್-3 ಯೋಜನೆಯಡಿ ಕಾರ್ಯಾಚರಣೆ ನಡೆಸುತ್ತಿದ್ದ ಎಲ್ಲಾ ವಿಮಾನಗಳ ಸೇವೆ ಈ ವರ್ಷ ರದ್ದಾಗಿದೆ.

## ಕಾರ್ಮಿಕರ ಹಕ್ಕುಗಳ ರಕ್ಷಣೆಗೆ ಸಂಘಟನೆಗಳು ಬಲವಾಗಬೇಕು

• ಉದಯವಾಹಿನಿ, ಆಳಂದ

ಕಾರ್ಮಿಕರ ಸಾಮಾಜಿಕ ಭದ್ರತೆ, ಆರೋಗ್ಯ, ಶಿಕ್ಷಣ ಹಾಗೂ ಹಕ್ಕುಗಳ ರಕ್ಷಣೆಗೆ ಹಾಗೂ ಸರ್ಕಾರದ ಸೌಲಭ್ಯಗಳನ್ನು ಪಡೆದುಕೊಳ್ಳಲು ಕಾರ್ಮಿಕ ಸಂಘಟನೆಗಳು ಇನ್ನಷ್ಟು ಬಲಿಷ್ಠವಾಗಬೇಕು ಎಂದು ಕಾರ್ಮಿಕ ಇಲಾಖೆ ಜಿಲ್ಲಾಧಿಕಾರಿ ಶರಣಪ್ಪ ಆರ್. ಹಳಿಮನಿ ಹೇಳಿದರು. ತಾಲ್ಲೂಕಿನ ನಿಂಬರಗಾದಲ್ಲಿ ನಿಂಬರಗಾ ವಲಯ ಕಟ್ಟಡ ಮತ್ತು ಕಲ್ಲು ಕ್ವಾರಿ ಕಾರ್ಮಿಕ ಸಂಘದ ಆಶ್ರಯದಲ್ಲಿ ಆಯೋಜಿಸಿದ್ದ ನಿಂಬರಗಾ ಕಾರ್ಮಿಕ ಸಂಘಟನೆ ಸೇವಾ ಕೇಂದ್ರ ಉದ್ಘಾಟನೆ ಹಾಗೂ 140ನೇ ವಿಶ್ವ ಕಾರ್ಮಿಕ ದಿನಾಚರಣೆ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ದೇಶದ ಅಭಿವೃದ್ಧಿಯಲ್ಲಿ ಕಾರ್ಮಿಕರ ಪಾತ್ರ ಅತ್ಯಂತ ಮಹತ್ವದ್ದಾಗಿದ್ದು, ಕಟ್ಟಡ ಮತ್ತು ಕಲ್ಲು ಕ್ವಾರಿ ಕಾರ್ಮಿಕರು ಕಠಿಣ ಪರಿಸ್ಥಿತಿಯಲ್ಲಿಯೂ ದುಡಿಯುತ್ತಾ ಸಮಾಜದ ನಿರ್ಮಾಣದಲ್ಲಿ ಪ್ರಮುಖ ಕೊಡುಗೆ ನೀಡುತ್ತಿದ್ದಾರೆ. ಸರ್ಕಾರದ ವಿವಿಧ ಕಾರ್ಮಿಕ ಕಲ್ಯಾಣ ಯೋಜನೆಗಳನ್ನು ಪ್ರತಿಯೊಬ್ಬ ಕಾರ್ಮಿಕರು ಸದುಪಯೋಗಪಡಿಸಿಕೊಳ್ಳಬೇಕು ಎಂದು ಅವರು ತಿಳಿಸಿದರು.


ಉದಯವಾಹಿನಿ ಚಿತ್ರ

> ಕಾರ್ಮಿಕ ವರ್ಗದ ಏಕತೆ ದೇಶದ ಪ್ರಗತಿಗೆ ಮೂಲಶಕ್ತಿ. ಕಾರ್ಮಿಕರ ಶ್ರಮಕ್ಕೆ ಸಮರ್ಪಕ ಗೌರವ ಮತ್ತು ನ್ಯಾಯಯುತ ವೇತನ ದೊರಕುವಂತಾಗಬೇಕು. ದುಡಿಯುವ ವರ್ಗದ ಹಿತಾಸಕ್ತಿಗಾಗಿ ಸಂಘಟನೆಗಳು ನಿರಂತರ ಹೋರಾಟ ನಡೆಸುತ್ತಿವೆ. -ಪ್ರಭುದೇವ ಯಳಸಂಗಿ

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಹಿರಿಯ ಕಾರ್ಮಿಕ ನಿರೀಕ್ಷಕ ರವಿಂದ್ರಕುಮಾರ್ ಎನ್. ಬೆಳ್ಳೂರ ಮಾತನಾಡಿ, ಅಸಂಘಟಿತ ಕಾರ್ಮಿಕರು ಸರ್ಕಾರದ ಸೌಲಭ್ಯಗಳ ಕುರಿತು ಹೆಚ್ಚಿನ ಅರಿವು ಹೊಂದಬೇಕಾಗಿದೆ. ಕಾರ್ಮಿಕ ಇಲಾಖೆ ಮೂಲಕ ದೊರೆಯುವ ಆರೋಗ್ಯ, ಶಿಕ್ಷಣ, ವಿಮೆ ಹಾಗೂ ನಿವೃತ್ತಿ ಸೌಲಭ್ಯಗಳ ಬಗ್ಗೆ ಜಾಗೃತಿ ಅಗತ್ಯವಿದೆ. ಅರ್ಹರ ಅರ್ಜಿ ಸಲ್ಲಿಸಿ ಸೌಲಭ್ಯಗಳನ್ನು ಪಡೆದುಕೊಳ್ಳಬೇಕು ಎಂದು ಹೇಳಿದರು.

ಎಐಕೆಎಸ್ ರಾಜ್ಯ ಕಾರ್ಯಾಧ್ಯಕ್ಷ ಮೌಲಾ ಮುಲ್ಲಾ ಮಾತನಾಡಿ, ಗ್ರಾಮೀಣ ಭಾಗದ ಕಾರ್ಮಿಕರು ಇನ್ನೂ ಅನೇಕ ಮೂಲಭೂತ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ. ಕಾರ್ಮಿಕರ ಮಕ್ಕಳಿಗೆ ಉತ್ತಮ ಶಿಕ್ಷಣ ಹಾಗೂ ಸಾಮಾಜಿಕ ಭದ್ರತೆ ಕಲ್ಪಿಸುವುದು ಸಮಾಜದ ಹಾಗೂ ಕಾರ್ಮಿಕ ಇಲಾಖೆಯ ಜವಾಬ್ದಾರಿಯಾಗಿದೆ ಎಂದು ಅಭಿಪ್ರಾಯಪಟ್ಟರು. ಕಿಸಾನಸಭಾ ಜಿಲ್ಲಾಧ್ಯಕ್ಷ ಭೀಮಾಶಂಕರ ಮಾಡಿಯಾಳ ಮಾತನಾಡಿ, ಕಾರ್ಮಿಕರು ಸಂಘಟಿತರಾಗಿ ಇಲಾಖೆಯ ಸೌಲಭ್ಯಗಳನ್ನು ಪಡೆದುಕೊಳ್ಳಬೇಕು ಎಂದು ಹೇಳಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸಂಘದ ಅಧ್ಯಕ್ಷ ಯಲ್ಲಪ್ಪ ಎಸ್. ಕಟ್ಟಿಮನಿ ಮಾತನಾಡಿ, ನಿಂಬರಗಾ ಪ್ರದೇಶದ ಕಾರ್ಮಿಕರ ಸಮಸ್ಯೆಗಳಿಗೆ ಸ್ಪಂದಿಸುವ ಉದ್ದೇಶದಿಂದ ಸೇವಾ ಕೇಂದ್ರ ಆರಂಭಿಸಲಾಗಿದೆ. ಕಾರ್ಮಿಕರ ಹಕ್ಕುಗಳಿಗಾಗಿ ಸಂಘವು ಸದಾ ಕಾರ್ಯನಿರ್ವಹಿಸಲಿದೆ ಎಂದರು.

## ಬೇಸಿಗೆಯಲ್ಲೂ ಮಡಕೆಗೆ ಬೇಡಿಕೆ ಕುಸಿತ

• ಉದಯವಾಹಿನಿ, ಹನುಮಸಾಗರ

ಬಿರು ಬೇಸಿಗೆಯಲ್ಲೂ ಮಣ್ಣಿನ ಮಡಕೆಗಳಿಗೆ ಬೇಡಿಕೆ ಕುಸಿಯುತ್ತಿರುವುದು ಕುಂಬಾರ ಸಮುದಾಯದ ಬದುಕನ್ನು ದುಸ್ತರಗೊಳಿಸಿದೆ. ಆಧುನಿಕ ತಂತ್ರಜ್ಞಾನದ ಫ್ರಿಜರ್ ಗಳ ಬಳಕೆಯಿಂದಾಗಿ ಜನರು ಮಣ್ಣಿನ ಮಡಕೆಗಳಿಂದ ದೂರ ಸರಿಯುತ್ತಿದ್ದು, ಇದು ಸಾಂಪ್ರದಾಯಿಕ ಕುಂಬಾರಿಕೆ ವೃತ್ತಿಯನ್ನು ನಂಬಿರುವವರ ಜೀವನೋಪಾಯಕ್ಕೆ ದೊಡ್ಡ ಹೊಡೆತ ನೀಡಿದೆ. ಇಲ್ಲಿಯ ಸೋಮವಾರದ ಸಂತೆಯಲ್ಲಿ ಮಣ್ಣಿನ ಮಡಕೆಗಳನ್ನು ಮಾರಾಟಕ್ಕಿಟ್ಟಿದ್ದ ಶಾಂತವ್ವ ಕುಂಬಾರ ಅವರು ಈ ಕುರಿತು ತಮ್ಮ ಅಳಲು ತೋಡಿಕೊಂಡರು. ಒಂದು ಮಣ್ಣಿನ ಮಡಕೆಯೂ ಮಾರಾಟವಾಗದೆ ಇರುವುದರಿಂದ ಜೀವನ ನಡೆಸುವುದು ಕಷ್ಟಕರವಾಗಿದೆ ಎಂದರು. ಮಲ್ಲಪ್ಪ ಕುಂಬಾರ ಅವರ ಪ್ರಕಾರ, ಒಂದು ನೀರಿನ ಮಡಕೆಗೆ ರೂ. 200 ರಿಂದ 250 ಬೆಲೆ ಇದೆ. ಆದರೂ ಕೂಡ ಯಾರೂ ಇದನ್ನು ಕೊಳ್ಳಲು ಆಸಕ್ತಿ ತೋರಿಸುತ್ತಿಲ್ಲ ಎಂದು ದುಃಖ ವ್ಯಕ್ತಪಡಿಸಿದರು. ಬಾದಾಮಿಯಿಂದ ಮಣ್ಣಿನ


ಉದಯವಾಹಿನಿ ಚಿತ್ರ

ಮಡಕೆಗಳು ಮತ್ತು ಮಣ್ಣಿನ ಒಲೆಗಳನ್ನು ತಂದು ರೂ. 20-30 ಲಾಭಕ್ಕಾಗಿ ಮಾರಾಟ ಮಾಡುವ ಮಂಗಳಾ ಕುಂಬಾರ ಅವರ ಪರಿಸ್ಥಿತಿಯೂ ಭಿನ್ನವಾಗಿಲ್ಲ. ದಿನದಲ್ಲಿ ಒಂದು ಮಡಕೆಯೂ ಮಾರಾಟವಾಗದಿರುವುದರಿಂದ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಈ ಕೆಲಸವನ್ನು ಮೆಚ್ಚಿಕೊಂಡಿರುವುದು ವ್ಯರ್ಥವಾಗುತ್ತಿದೆ ಎಂದು ನೋವಿನಿಂದ ನುಡಿದರು. ಮಣ್ಣಿನ ಮಡಕೆಯ ನೀರು ನೈಸರ್ಗಿಕವಾಗಿ ತಂಪಾಗಿರುವುದಲ್ಲದೆ, ಖನಿಜಾಂಶಗಳನ್ನು ಉಳಿಸಿಕೊಂಡು ದೇಹಕ್ಕೆ ಪ್ರಯೋಜನಕಾರಿಯಾಗಿದೆ ಎಂದು ತಜ್ಞರು ಹೇಳುತ್ತಾರೆ.

ಕುಂಬಾರ ಸಮುದಾಯದ ಬದುಕನ್ನು ಉಳಿಸಲು ಮತ್ತು ಸಾಂಪ್ರದಾಯಿಕ ಕರಕುಶಲತೆಯನ್ನು ಪ್ರೋತ್ಸಾಹಿಸಲು ಸರ್ಕಾರ ಮುಂದಾಗಬೇಕಿದೆ. ಮಣ್ಣಿನ ಮಡಕೆಗಳ ಬಳಕೆಯನ್ನು ಪುನರುಜ್ಜಿವನಗೊಳಿಸುವುದರಿಂದ ಆರೋಗ್ಯಕರ ಜೀವನಶೈಲಿಯನ್ನು ಉತ್ತೇಜಿಸುವುದರ ಜೊತೆಗೆ, ಶತಮಾನಗಳಿಂದ ನಡೆದುಕೊಂಡು ಬಂದಿರುವ ಕುಂಬಾರಿಕೆ ವೃತ್ತಿಯನ್ನು ಉಳಿಸಲು ಸಾಧ್ಯವಾಗುತ್ತದೆ ಎಂದು ಸಾರ್ವಜನಿಕರು ಆಶಿಸುತ್ತಾರೆ.

# ಮುಂದಿನ 5 ವರ್ಷದಲ್ಲಿ ಸುಸ್ಥಿರ ಅಭಿವೃದ್ಧಿಗೆ ದೃಷ್ಟಿಕೋನಯೋಜನೆ ಅತ್ಯಗತ್ಯ


### ಮೂಲಸೌಕರ್ಯ ಸೃಷ್ಠಿ, ಬಂಡವಾಳ ಹಕುವುದಷ್ಟೆ ಅಲ್ಲ ಮಾನವ ಬಂಡವಳ ಸೃಷ್ಠಿ ನಮ್ಮ ಆದ್ಯತೆಯಾಗಬೇಕಿದೆ: ಡಾ.ಅಜಯ್ ಸಿಂಗ್

• ಉದಯವಾಹಿನಿ, ಕಲಬುರಗಿ

ಮುಂದಿನ ಐದು ವರ್ಷದಲ್ಲಿ ಕಲ್ಯಾಣ ಕರ್ನಾಟಕ ಭಾಗದಲ್ಲಿ ಆರ್ಥಿಕ, ಸಾಮಾಜಿಕ, ಆರೋಗ್ಯ, ಶೈಕ್ಷಣಿಕ ಒಳಗೊಂಡಂತೆ ಸಮಗ್ರ ಮತ್ತು ಸುಸ್ಥಿರ ಅಭಿವೃದ್ಧಿಗೆ ದೃಷ್ಟಿಕೋನ ಯೋಜನೆಗಳು ರೂಪಿಸುವ ಅಗತ್ಯವಿದೆ ಎಂದು ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಡಾ.ಅಜಯ್ ಸಿಂಗ್ ಹೇಳಿದರು.

ಕಲಬುರಗಿ ನಗರದ ತಾಜ್ ಸುಲ್ತಾನಪುರ ರಸ್ತೆಯ ಹೋಟೆಲ್ ಎನ್‌ರೈಸ್‌ನಲ್ಲಿ ಕೆ.ಕೆ.ಆರ್.ಡಿ.ಬಿ. ಮಂಡಳಿ ಆಯೋಜಿಸಿದ ಕಲ್ಯಾಣ ಕರ್ನಾಟಕ ಅಭಿವೃದೀಗಾಗಿ ದೃಷ್ಟಿಕೋನ ಯೋಜನೆ 2026-2031 ಕಾರ್ಯಗಾರದಲ್ಲಿ ವಿಡಿಯೋ ಕಾನ್ಫರೆನ್ಸ್ ಮೂಲಕ ಭಾಗವಹಿಸಿ ಮಾತನಾಡಿದ ಅವರು, ಪ್ರದೇಶದಲಿ ಹಿಂದುಳಿವಿಕೆ ಹೋಗಲಾಡಿಸಲು ಮೂಲಸೌಕರ್ಯ ಸೃಷ್ಠಿ, ಬಂಡವಾಳ ಹಕುವುದಷ್ಟೆ ಅಲ್ಲ ಮಾನವ ಬಂಡವಳ ಸೃಷ್ಠಿ ನಮ್ಮ ಆದ್ಯತೆಯಾಗಬೇಕಿದೆ ಎಂದರು.

371ಜೆ ರಚನೆಯಾದ ಮಂಡಳಿಗೆ 2013-14 ರಿಂದ 2025-26ರ ವರೆಗೆ ಸುಮಾರು 23,704 ಕೋಟಿ ರೂ. ಅನುದಾನ ಹಂಚಿಕೆಯಾಗಿದ್ದು, ಇದರಲ್ಲಿ 17,005 ಕೋಟಿ ರೂ. ಖರ್ಚು ಮಾಡಿ ಕೃಷಿ, ನೀರಾವರಿ, ಶಿಕ್ಷಣ, ಆರೋಗ್ಯ, ರಸ್ತೆ, ಮೂಲಸೌಕರ್ಯ ವಲಯದಲ್ಲಿ ಹಣ ಖರ್ಚು ಮಾಡಿದ್ದೇವೆ. ಇನ್ನು ಕಳೆದ ಮೂರು ವರ್ಷದಲ್ಲಿ ಡಾ.ಡಿ.ಎಂ. ನಂಜುಂಡಪ್ಪ ಅವರ ವರದಿಯಂತೆ ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚಿನ ಒತ್ತು ನೀಡಿದ್ದು,


ಉದಯವಾಹಿನಿ ಚಿತ್ರ

ಆರೋಗ್ಯ ಆವಿಷ್ಕಾರ ಕಾರ್ಯಕ್ರಮ ಮೂಲಕ ಆರೋಗ್ಯ ಸಂಸ್ಥೆಗಳ ಬಲವರ್ಧನೆ ಮಾಡಿದ್ದೇವೆ. ಶಿಕ್ಷಣ ಆವಿಷ್ಕಾರ ಕಾರ್ಯಕ್ರಮದ ಮೂಲಕ ಪ್ರದೇಶದಲ್ಲಿ ಎಲ್.ಕೆ.ಜಿ., ಯು.ಕೆ.ಜಿ., ಆಂಗ್ಲ ಮಾಧ್ಯಮ ಬೋಧನೆಗೆ ಅವಕಾಶ ಮಾಡಿಕೊಡಲಾಗಿದ್ದು, 42 ಸಾವಿರ ಮಕ್ಕಳು ಪ್ರವೇಶಾತಿ ಪಡೆದಿದ್ದಾರೆ. 294 ಕೆ.ಪಿ.ಎಸ್. ಶಾಲೆ ನಿರ್ಮಿಸಲಾಗುತ್ತಿದೆ ಎಂದರು. ಸಾವಿರಾರು ಕೋಟಿ ರೂ. ಹಣ ಖರ್ಚು ಮಾಡಿ ಮೂಲಸೌಕರ್ಯ, ಕಟ್ಟಡ, ಸೇವೆಗಳು ಸ್ಥಾಪಿಸಿದೆಯಾದರು ಇನ್ನು ಈ ಭಾಗದಲ್ಲಿ ತಲಾ ಆದಾಯ ಚೇತನರಿಕೆ ಕಂಡಿಲ್ಲ. ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ಹಿಂದಿದ್ದೇವೆ. ರಾಜ್ಯದ ತಲಾ ಆದಾಯ 4.25 ಲಕ್ಷ ರೂ. ಇದೆ. ಬೆಂಗಳೂರು ನಗರ ಜಿಲ್ಲೆಯ ತಲಾ ಆದಾಯ 9.03 ಲಕ್ಷ ರೂ. ಗಳಿದ್ದರೆ ಕಲಬುರಗಿ ಜಿಲ್ಲೆಯ ತಲಾ ಆದಾಯ ಕೇವಲ 1.69 ಲಕ್ಷ ರೂ. ಮಾತ್ರ. ಪ್ರಾದೇಶಿಕ ಅಸಾಮಾನತೆ, ಅಪೌಷ್ಠಿಕ ಮುಕ್ತ ಪ್ರದೇಶ, ಉತ್ತಮ ಆರೋಗ್ಯ ಮತ್ತು ಶಿಕ್ಷಣ, ತಲಾ ಆದಾಯ ಮತ್ತು ಎಚ್.ಡಿ.ಐ ಸೂಚ್ಯಂಕ ವೃದ್ಧಿ ನಮಗೆ ಸವಾಲಾಗಿವೆ. ಇದಕ್ಕಾಗಿ ಕೊರತೆಯ ದತ್ತಾಂಶಗಳನ್ನು ಸಂಗ್ರಹಿಸಿ ತ್ವರಿತಗತಿಯಲ್ಲಿ ಪ್ರಗತಿ ಹೊಂದಲು ಹೊಸ ಆಲೋಚನೆಗಳು, ಚಿಂತನೆಗಳಿಂದ ಅಭಿವೃದ್ಧಿಯ ಅಂತರ ತುಂಬುವಿಕೆಗೆ ಕ್ರಿಯಾ ಯೋಜನೆಗಳು ರೂಪಿಸಬೇಕಿದ್ದು, ಹೀಗಾಗಿ ಪ್ರದೇಶದ ಎಲ್ಲಾ ಇಲಾಖೆಗಳು ಈ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗಬೇಕು ಎಂದು ಅಜಯ್ ಸಿಂಗ್ ಹೇಳಿದರು.

ಪ್ರಾದೇಶಿಕ ಅಸಮಾನತೆ ನಿವಾರಣೆ ನಿಟ್ಟಿನಲ್ಲಿ ಹಿಂದೆ 2002ರಲ್ಲಿ ಡಾ.ಡಿ.ಎಂ.ನಂಜುಂಡಪ್ಪ ಸಲ್ಲಿಸಿದ ವರದಿ ಎರಡು ದಶಕವಾದ ಕಾರಣ ಇತ್ತೀಚೆಗೆ ತಮ್ಮ ಅಧ್ಯಕ್ಷತೆಯಲ್ಲಿ ಸರ್ಕಾರ ರಚಿಸಿದ ಪ್ರಾದೇಶಿಕ ಅಸಮಾನತೆ ನಿವಾರಣೆ ಸಮಿತಿಯು ಈಗಾಗಲೆ ರಾಜ್ಯ ಸರ್ಕಾರಕ್ಕೆ ತನ್ನ ವರದಿ ಸಲ್ಲಿಸಿದ್ದು, ಮುಂದಿನ 5 ವರ್ಷದಲ್ಲಿ ಪ್ರತಿ ವರ್ಷ 8 ಸಾವಿರ ಕೋಟಿ ರೂ. ಗಳಂತೆ ಒಟ್ಟು 43,914 ಕೋಟಿ ರೂ. ವಿವಿಧ ವಲಯದಲ್ಲಿ ಖರ್ಚು ಮಾಡಲು ಶಿಫಾರಸ್ಸು ಮಾಡಲಾಗಿದೆ ಎಂದರು.

ಕೆ.ಕೆಆರ್.ಡಿ.ಬಿ. ಮಂಡಳಿಯ ಅಪರ ನಿರ್ದೇಶಕಿ ಪ್ರವೀಣಪ್ರಿಯಾ ಅವರು ಮಂಡಳಿಗೆ ಕಳೆದ 2013-14 ರಿಂದ 2025-26ರ ವರೆಗೆ ರಾಜ್ಯ ಸರ್ಕಾರದಿಂದ ಅನುದಾನ ಹಂಚಿಕೆ, ಖರ್ಚು, ವಲಯಯವಾರು ಪ್ರಗತಿ ಕುರಿತು ವಿವರಣೆ ನೀಡಿ ಮಾತನಾಡಿದ ಅವರು, ಇದೂವರೆಗೆ ಬಿಡುಗಡೆಯಾದ 23,704 ಕೋಟಿ ರೂ. ಅನುದಾನದಲ್ಲಿ 17,105 ಕೋಟಿ ರೂ. ಖರ್ಚು ಮಾಡಿದ್ದು, 45,066 ಕಾಮಗಾರಿಗಳ ಪೈಕಿ 36,072 ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ. ಇದರಲ್ಲಿ ಬೀದರ ಜಿಲ್ಲೆಗೆ 3,007 ಕೋಟಿ ರೂ., ಕಲಬುರಗಿ ಜಿಲ್ಲೆಗೆ 4,559.39 ಕೋಟಿ ರೂ., ಯಾದಗಿರಿಗೆ 2,417.06 ಕೋಟಿ ರೂ., ರಾಯಚೂರು ಜಿಲ್ಲೆಗೆ 3,784.30 ಕೋಟಿ ರೂ., ಕೊಪ್ಪಳ ಜಿಲ್ಲೆಗೆ 2,778.35 ಕೋಟಿ ರೂ., ಬಳ್ಳಾರಿ ಜಿಲ್ಲೆಗೆ 1482.49 ಕೋಟಿ ರೂ., ವಿಜಯನಗರ ಜಿಲ್ಲೆಗೆ 1,954.18 ಕೋಟಿ ರೂ. ಹಾಗೂ ಪ್ರದೇಶಕ್ಕೆ ಸೀಮಿತವಾದ ಬೃಹತ್ ಯೋಜನೆಗಳಿಗೆ 1,721 ಕೋಟಿ ರೂ. ಖರ್ಚು ಮಾಡಲಾಗಿದೆ ಎಂದು ವಿವರಿಸಿದರು.

ಕಲಬುರಗಿ ವಿಭಾಗದ ಪ್ರಾದೇಶಿಕ ಆಯುಕ್ತರಾದ ಜಹೀರಾ ನಸ್ಸೀಮ್ ಅವರು ಉದ್ಘಾಟಿಸಿದ ಈ ಕಾರ್ಯಾಗಾರದಲ್ಲಿ ಕೆ.ಕೆ.ಆರ್.ಡಿ.ಬಿ. ಮಂಡಳಿ ಕಾರ್ಯದರ್ಶಿ ನಳಿನ್ ಅತುಲ್, ಆರ್ಥಿಕ ತಜ್ಞೆ ಪ್ರೊ.ಛಾಯಾ ದೇಗಾಂವಕರ್ ಇದ್ದರು.

**ಮಾನವ ಬಂಡವಾಳ ವೃದ್ಧಿ ಮುಖ್ಯ**

ವಿಡಿಯೋ ಕಾನ್ಫರೆನ್ಸ್ ಮೂಲಕ ಭಾಗವಹಿಸಿದ ಆರ್ಥಿಕ ತಜ್ಞ ಪ್ರೊ. ಗೋವಿಂದರಾವ ಅವರು ಮಾತನಾಡಿ, ಕರ್ನಾಟಕ ದೇಶದಲ್ಲಿ ತೀವ್ರಗತಿಯಲ್ಲಿ ಅಭಿವೃದ್ಧಿ ಹೊಂದುತ್ತಿರುವ ರಾಜ್ಯಗಳಲ್ಲಿ ಒಂದಾಗಿದ್ದರು, ಇಲ್ಲಿನ ಉತ್ತರ ಕರ್ನಾಟಕ ಪ್ರದೇಶ ಅದರಲ್ಲಿಯೂ ಕಲ್ಯಾಣ ಕರ್ನಾಟಕ ಭಾಗ ತೀರಾ ಹಿಂದುಳಿದಿದೆ. 2002ರಲ್ಲಿ ಅಂದಿನ 175 ತಾಲ್ಲೂಕುಗಳಲ್ಲಿನ 102 ತಾಲ್ಲೂಕು ಇಂದಿಗೂ ಹಾಗೆ ಇವೆ. ಬಹುಪಾಲು ಇವು ಉತ್ತರ ಕರ್ನಾಟಕ್ಕೆ ಸೇರಿವೆ. ಸಿಕ್ಕಿಂ, ಗೋವಾ ನಂತರ ಹೆಚ್ಚಿನ ತಲಾ ಆದಾಯ ಹೊಂದಿರುವ ರಾಜ್ಯ ನಮ್ಮದಾಗಿದ್ದರೂ ಕಲಬುರಗಿ ಸೇರಿದಂತೆ ಈ ಭಾಗದ ಜನರ ತಲಾ ಆದಾಯ ತುಂಬಾ ಕಡಿಮೆ. ರಾತ್ರೋರಾತ್ರಿ ಹಣ ಸುರಿದರೆ ಬೆಳಗಾಗೋದ್ರಲ್ಲಿ ಅಭಿವೃದ್ಧಿ ಕಾಣಲು ಅಸಾಧ್ಯ. ಹೀಗಾಗಿ ಇಲ್ಲಿನ ಸರ್ಕಾರಿ ಸಂಸ್ಥೆಗಳು ಲಭ್ಯ ಸಂಪನ್ಮೂಲ ಮತ್ತು ಮಾನವ ಸಂಪನ್ಮೂಲ ಬಳಸಿ ಕಾರ್ಯಕ್ಷಮತೆ ಸುಧಾರಣೆ ಜೊತೆಗೆ ಮಾನವ ಬಂಡವಾಳ ಸೃಷ್ಠಿಸಬೇಕಿದೆ ಎಂದು ಅವರು ಅಭಿಪ್ರಾಯಪಟ್ಟರು.

**ಬೆಳಗಾಗೋದ್ರಲ್ಲಿ ಅಭಿವೃದ್ಧಿ ಕಾಣಲು ಅಸಾಧ್ಯ**

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಸಾಯಂಕಾಲ | 04:30 ರಿಂದ 06:00 |
| ಗುಳಿಕ ಕಾಲ | ಮಧ್ಯಾಹ್ನ | 03:00 ರಿಂದ 04:30 |
| ಯಮಗಂಡ ಕಾಲ | ಮಧ್ಯಾಹ್ನ | 12:00 ರಿಂದ 01:30 |

**ಮೇಷ** ಸಂತೃಪ್ತಿಯ ಜೀವನಕ್ಕಾಗಿ ನಿಮ್ಮ ಮಾನಸಿಕ ದೃಢತೆಯನ್ನು ಸುಧಾರಿಸಿ. ಇಂದು ನೀವು ನಿಮ್ಮ ಮನೆಯ ಹಿರಿಯ ಜನರಿಂದ ಹಣವನ್ನು ಉಳಿಸುವ ಬಗ್ಗೆ ಯಾವುದೇ ಸಲಹೆಯನ್ನು ತೆಗೆದುಕೊಳ್ಳಬಹುದು.

**ವೃಷಭ** ಇಂದು ನೀವು ನಿಮ್ಮ ಮಕ್ಕಳ ಮೇಲೆ ಹೆಮ್ಮೆಯನ್ನು ಅನುಭವಿಸುವಿರಿ. ಮನೆಯಲ್ಲಿ ಸಮಸ್ಯೆಗಳು ಉದ್ಭವವಾಗುವಂತೆ ತೋರುತ್ತಿರುವುದರಿಂದ ನಿಮ್ಮ ಮಾತುಗಳ ಬಗ್ಗೆ ಎಚ್ಚರ ವಹಿಸಿ.

**ಮಿಥುನ** ಇಂದು ನೀವು ಆರಾಮವಾಗಿರುವ ಭಾವನೆ ಹೊಂದಿರುತ್ತೀರಿ ಮತ್ತು ಆನಂದಿಸಲು ಸೂಕ್ತ ಮನೋಭಾವದಲ್ಲಿರುತ್ತೀರಿ. ವಿವಾಹಿತರು ತಮ್ಮ ಮಕ್ಕಳ ಅಧ್ಯಯನದ ಮೇಲೆ ಹೆಚ್ಚು ಹಣವನ್ನು ಖರ್ಚು ಮಾಡಬೇಕಾಗುತ್ತದೆ.

**ಕರ್ಕಾಟಕ** ಹೆದರಿಕೆ ನಿಮ್ಮ ಸಂತೋಷವನ್ನು ಹಾಳುಗೆಡವಬಹುದು. ನೀವು ಇದು ನಮ್ಮ ಆಲೋಚನೆಗಳು ಮತ್ತು ಕಲ್ಪನೆಯ ಪ್ರಭಾವವೆಂದು ಅರ್ಥಮಾಡಿಕೊಳ್ಳಬೇಕು. ಇದು ಸ್ವಾಭಾವಿಕತೆಯನ್ನು ಕೊಲ್ಲುತ್ತದೆ.

**ಸಿಂಹ** ನಿಮ್ಮ ಮೇಲೆ ಬಹಳಷ್ಟು ಅವಲಂಬಿಸಿರುತ್ತದೆ ಮತ್ತು ನಿರ್ಣಯಗಳನ್ನು ತೆಗೆದುಕೊಳ್ಳಲು ಮಾನಸಿಕ ಅಗತ್ಯವಾಗಿರುತ್ತದೆ. ಹಣಕಾಸಿನಲ್ಲಿ ಸುಧಾರಣೆ ಅಗತ್ಯ ವಸ್ತುಗಳನ್ನು ಖರೀದಿಸುವುದನ್ನು ಅನುಕೂಲಕರವಾಗಿಸುತ್ತದೆ.

**ಕನ್ಯಾ** ನಿಮ್ಮ ಅಪಾರ ವಿಶ್ವಾಸ, ಸುಲಭದ ಕೆಲಸದ ವೇಳಾಪಟ್ಟಿ ಇಂದು ವಿಶ್ರಾಂತಿಗೆ ಸಾಕಷ್ಟು ಸಮಯ ನೀಡುತ್ತದೆ. ಹಣ ನಿಮ್ಮ ಕೈಯಲ್ಲಿ ಉಳಿಯುದಿಲ್ಲ, ಹಣವನ್ನು ಉಳಿಸುವಲ್ಲಿ ಅನೇಕ ತೊಂದರೆಗಳನ್ನು ಎದುರಿಸಬೇಕಾಗುತ್ತದೆ

**ತುಲಾ** ನಿಮ್ಮಲ್ಲಿ ಕೆಲವರು ಇದು ಬಲವಂತವಾಗಿ ಪ್ರಮುಖ ನಿರ್ಧಾರಗಳನ್ನು ಕೈಗೊಳ್ಳಬೇಕಾಗಬಹುದು, ಇದು ನಿಮ್ಮನ್ನು ಉದ್ವೇಗಭರಿತರನ್ನಾಗಿಯೂ ಹಾಗೂ ಗಾಬರಿಯಿರುವವರನ್ನಾಗಿಯೂ ಮಾಡಬಹುದು.

**ವೃಶ್ಚಿಕ** ನಿಮ್ಮ ಭರವಸೆ ಒಂದು ಸಮೃದ್ಧ ಸೂಕ್ಷ್ಮ ಪರಿಮಳಯುಕ್ತ ಬೆರಗುಗೊಳಿಸುವ ಹೂವಿನ ಹಾಗೆ ಅರಳುತ್ತದೆ. ಪ್ರಮುಖ ಜನರು ವಿಶೇಷವರ್ಗ ಹೊಂದಿರುವ ಯಾವುದಕ್ಕಾದರೂ ಹಣಕಾಸು ನೀಡಲು ಸಿದ್ಧವಾಗಿರುತ್ತಾರೆ.

**ಧನಸ್ಸು** ನೀವು ಪಾರ್ಟಿ ನೀಡಲು ಯೋಜಿಸುತ್ತಿದ್ದಲ್ಲಿ ನಿಮ್ಮ ಎಲ್ಲಾ ಒಳ್ಳೆಯ ಸ್ನೇಹಿತರನ್ನು ಆಮಂತ್ರಿಸಿ ನಿಮ್ಮನ್ನು ಅಸ್ತುಷ್ಟಗೊಳಿಸುವ ಬಹಳಷ್ಟು ಜನರಿರುತ್ತಾರೆ. ನಿಮ್ಮ ಧೈರ್ಯ ಪ್ರೀತಿಯನ್ನು ಗೆಲ್ಲಬಹುದು.

**ಮಕರ** ನಿಮ್ಮ ಆರೋಗ್ಯ ಸುಧಾರಿಸಲು ಸಹಕಾರಿಯಾಗುವ ಕೆಲಸಗಳನ್ನು ಮಾಡಬಹುದಾದ ಒಂದು ದಿನ. ನಿಮ್ಮ ಸಹೋದರ-ಸಹೋದರಿಯರಲ್ಲಿ ಒಬ್ಬರು ಇಂದು ನಿಮ್ಮಿಂದ ಹಣವನ್ನು ಎರವಲು ಪಡೆಯಬಹುದು.

**ಕುಂಭ** ನಿಮಗೆ ನಿಮ್ಮ ಅತ್ತೆಮನೆ ಬದಿಯಿಂದ ಯಾವುದೇ ಕೆಟ್ಟ ಸುದ್ಧಿ ಸಿಗಬಹುದು. ಇದರಿಂದಾಗಿ ನಿಮ್ಮ ಮನಸ್ಸಿಗೆ ದುಃಖವಾಗುತ್ತದೆ ಮತ್ತು ನೀವು ಸಾಕಷ್ಟು ಸಮಯವನ್ನು ಆಲೋಚಿಸುವಲ್ಲಿ ಕಳೆಯಬಹುದು.

**ಮೀನ** ನಿಮ್ಮ ಶಾಂತತೆಯನ್ನು ಕಾಪಾಡಿಕೊಳ್ಳಲು ಸಹಾಯ ಮಾಡುವ ಚಟುವಟಿಕೆಗಳಲ್ಲಿ ನಿಮ್ಮನ್ನು ತೊಡಗಿಸಿಕೊಂಡಿರಿ. ತನ್ನ ಹಣವನ್ನು ಹೇಗೆ ಸಂಗ್ರಹಿಸುವುದು ಎಂಬ ಈ ಕೌಶಲ್ಯವನ್ನು ನೀವು ಕಲಿಯಬಹುದು.

### ಆರೋಗ್ಯದಲ್ಲಿ ಏರುಪೇರುಗಳಿಂದ ಆಸ್ಪತ್ರೆಗಳಿಗೆ ಬರುವ ರೋಗಿಗಳ ಸಂಖ್ಯೆಯಲ್ಲಿ ಏರಿಕೆ

# ಬಿಸಿಲಿನ ಹೊಡೆತಕ್ಕೆ ಬದಲಾಯಿತು ಕಾರ್ಮಿಕರ ಕೆಲಸದ ಟೈಂ

• ಉದಯವಾಹಿನಿ, ಮಂಗಳೂರು

ಕರಾವಳಿಯಲ್ಲಿ ಬಿಸಿಲಿನ ಅಬ್ಬರ ಒಂದೇ ರೀತಿಯಲ್ಲಿ ಏರಿಕೆಯಾಗುತ್ತಿದೆ. ಬೆಳಗ್ಗಿನ ಹೊತ್ತಿನಲ್ಲಿಯೇ ಇಳೆ ಕಾದ ಕಾವಲಿಯಾಗಿ ಬಿಡುತ್ತದೆ. ವಿಶೇಷವಾಗಿ ಬಿಸಿಲಿನ ಝಳ ತಪ್ಪಿಸುವ ಉದ್ದೇಶದಿಂದ ಕಾರ್ಮಿಕರು ರಾತ್ರಿ ಹೊತ್ತು ಬೆಳಕು ಹಾಕಿ ಕೆಲಸ ಮಾಡುವ ಟ್ರೆಂಡ್ ಸೃಷ್ಟಿಯಾಗಿದೆ. ಮತ್ತೊಂದೆಡೆ ಆರೋಗ್ಯ ಇಲಾಖೆಯಿಂದ ಬಿಸಿಲಾಘಾತದ ಮಾಹಿತಿ ಪಡೆಯಲು ವಾಟ್ಸ್ ಆ್ಯಪ್ ಗ್ರೂಪ್‌ನ್ನೇ ಸಿದ್ಧಪಡಿಸಲಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಿಸಿಲು, ಸೆಕೆ ವಿಪರೀತವಾಗಿ ಸಾಗುತ್ತಿದೆ. ಕೆಲವು ಭಾಗದಲ್ಲಿ ಮಳೆ ಬಂದರೂ ಕೂಡ ಬಿಸಿಲು, ಸೆಕೆಯ ಪ್ರಮಾಣ ನಿಯಂತ್ರಣಕ್ಕೆ ಬರ್ತಾ ಇಲ್ಲ. ಆರೋಗ್ಯದಲ್ಲಿ ಏರುಪೇರುಗಳಿಂದ ಆಸ್ಪತ್ರೆಗಳಿಗೆ ಬರುವ ರೋಗಿಗಳ ಸಂಖ್ಯೆಯಲ್ಲಿ ಏರಿಕೆ ಕಾಣಿಸಿಕೊಂಡಿದ್ದು, ವೆನ್ಲಾಕ್‌ನಲ್ಲಿ ಈಗಾಗಲೇ 10 ಬೆಡ್‌ಗಳ ವ್ಯವಸ್ಥೆಯನ್ನು ಮಾಡಿದ್ದು, ಆಸ್ಪತ್ರೆಯ ವೈದ್ಯರು ಸೇರಿದಂತೆ ಸಿಬ್ಬಂದಿಗಳು ವಾಟ್ಸ್ ಆ್ಯಪ್ ಗ್ರೂಪ್‌ವೊಂದನ್ನು ರಚನೆ ಮಾಡಿದ್ದು, ಆಸ್ಪತ್ರೆಯ ಮಾತ್ರವಲ್ಲ ಹೊರ ಭಾಗದಲ್ಲಿ ಬಿಸಿಲಾಘಾತದಿಂದ ಸಮಸ್ಯೆಗೆ ಗುರಿಯಾದವರ ಮಾಹಿತಿ ಬಂದ ತಕ್ಷಣವೇ ಪೂರಕವಾಗಿ ಸ್ಪಂದಿಸುವ ವೈದ್ಯರ ತಂಡವೊಂದನ್ನು ರಚನೆ ಮಾಡಲಾಗಿತ್ತು. ತಕ್ಷಣಕ್ಕೆ ಪರಿಹಾರ ನೀಡುವ ಕೆಲಸ ಕೂಡ ಸಾಗುತ್ತಿದೆ. ಬೆಳಗ್ಗೆ 11ರಿಂದ ಸಂಜೆ 4ರ ತನಕನೂ ಬಿಸಿಲು ಸಾಕಷ್ಟು ಇರುವುದರಿಂದ ಈ ಬಳಿಕ ಕಾರ್ಮಿಕರಿಂದ ಕೆಲಸ ತೆಗೆಸಿಕೊಳ್ಳುವ ಕಾರ್ಯ ಸಾಗುತ್ತಿದೆ. ವಿಶೇಷವಾಗಿ ಬೆಳಕು ಹಾಕಿ ಕಾರ್ಮಿಕರು ರಾತ್ರಿಯ ತನಕನೂ ದುಡಿಯಲು ಅವಕಾಶವನ್ನು ಕೆಲಸ ಒಪ್ಪಿಕೊಂಡ ಗುತ್ತಿಗೆದಾರರ ಮಾಡುತ್ತಿದ್ದಾರೆ. ಈ ಸಮಯದಲ್ಲಿ ಕಾರ್ಮಿಕರು ಕೂಡ ಹೆಚ್ಚು ಕೆಲಸ ಮಾಡಲು ಬಯಸುತ್ತಾರೆ. ಮುಖ್ಯವಾಗಿ ಹೊರರಾಜ್ಯದ, ಹೊರಜಿಲ್ಲೆಯ ಕಾರ್ಮಿಕರು ಇಂತಹ ಕೆಲಸಕ್ಕೆ ಮುಂದಾಗುತ್ತಿದ್ದಾರೆ ಎನ್ನುತ್ತಾರೆ ಕಟ್ಟಡ ಕಾಮಗಾರಿಯೊಂದರ ಗುತ್ತಿಗೆದಾರ ಮಹಮ್ಮದ್ ಶರೀಫ್.

**ದ.ಕನ್ನಡದಲ್ಲಿ ತಾಪಮಾನ ಏರಿಕೆ**



ಉದಯವಾಹಿನಿ ಚಿತ್ರ

#### ವಾಟ್ಸ್ ಆ್ಯಪ್ ಗ್ರೂಪ್ ರೆಡಿ

ಬಿಸಿಲಘಾತದ ಪ್ರಕರಣಗಳು ಕಾಣಿಸಿಕೊಳ್ಳುವ ಸಾಧ್ಯತೆ ಇರುವುದರಿಂದ ಈಗಾಗಲೇ 10 ಬೆಡ್‌ಗಳ ವ್ಯವಸ್ಥೆಯನ್ನು ಮಾಡಲಾಗಿದೆ. ಬಹಳಷ್ಟು ಮಂದಿ ಬಿಸಿಲಾಘಾತಕ್ಕೆ ಗುರಿಯಾದವರು ನೇರವಾಗಿ ಆಸ್ಪತ್ರೆಗೆ ಬರಲು ಹಿಂದೇಟು ಹಾಕುತ್ತಾರೆ. ಅದಕ್ಕಾಗಿ ಆಸ್ಪತ್ರೆಯ ವೈದ್ಯರನ್ನು ಒಳಗೊಂಡ ವಾಟ್ಸ್ ಆ್ಯಪ್ ಗ್ರೂಪ್ ರಚನೆ ಮಾಡಿದ್ದು, ಸಮಸ್ಯೆಗೆ ಒಳಗಾದವರಿಗೆ ತಕ್ಷಣವೇ ಚಿಕಿತ್ಸೆ, ಮಾಹಿತಿ, ಮಾರ್ಗದರ್ಶನ ಮಾಡುವ ಕಾರ್ಯವನ್ನು ಮಾಡಲಾಗುತ್ತಿದೆ ಎಂದು ವೆನ್ಲಾಕ್ ಆಸ್ಪತ್ರೆಯ ಜಿಲ್ಲಾ ವೈದ್ಯಕೀಯ ಅಧೀಕ್ಷಕ ಡಾ.ಶಿವಪ್ರಕಾಶ್ ಡಿ.ಎಸ್ ಹೇಳುತ್ತಾರೆ.

#### ಕೆಲಸದ ಅವಧಿ ಬದಲು

ಮಂಗಳೂರು ನಗರ ಭಾಗದಲ್ಲಿ 50ಕ್ಕೂ ಅಧಿಕ ಕಡೆಯಲ್ಲಿ ಕಟ್ಟಡ ಕಾಮಗಾರಿಗಳು ಸಾಗುತ್ತಿದೆ. ಅದರಲ್ಲೂ ಮುಖ್ಯವಾಗಿ ಬೃಹತ್ ಕಟ್ಟಡ ಕಾಮಗಾರಿಯಲ್ಲಿ ಕಾರ್ಮಿಕರು ಸಾಕಷ್ಟು ಬಿಸಿಲಿಗೆ ದೇಹ ಒಡ್ಡುವುದರಿಂದ ಆರೋಗ್ಯ ಸಮಸ್ಯೆ, ತಲೆ ಸುತ್ತು ಸೇರಿದಂತೆ ಇತರ ಲಕ್ಷಣಗಳು ಗೋಚರವಾಗುತ್ತಿದೆ. ಇದರಿಂದ ಕಾರ್ಮಿಕರ ಕೆಲಸದ ಅವಧಿಯಲ್ಲಿ ಕೆಲವು ಮಾರ್ಪಾಡು ಮಾಡುವ ಮೂಲಕ ಕಾರ್ಮಿಕರ ಆರೋಗ್ಯ ಕಾಳಜಿಯನ್ನು ಮಾಡಲಾಗುತ್ತಿದೆ.

- ದಕ್ಷಿಣ ಕನ್ನಡದಲ್ಲಿ ಏರುತ್ತಿರುವ ತಾಪಮಾನದ ಹಿನ್ನಲೆಯಲ್ಲಿ ಕಾರ್ಮಿಕರ ಕೆಸಲದ ಸಮಯದಲ್ಲಿ ಬದಲಾವಣೆ
- ಬಿಸಿಲಿನ ಝಳದಿಂದ ತತ್ತರಿಸಿದ ಕಟ್ಟಡ ಹಾಗೂ ಇತರೆ ಕಾರ್ಮಿಕರ ಆರೋಗ್ಯಕ್ಕೆ ಹೆಚ್ಚಿದ ಕ್ರಮಗಳು
- ವೆನ್ಲಾಕ್ ಆಸ್ಪತ್ರೆಯಲ್ಲಿ 10 ಬೆಡ್‌ಗಳ ವ್ಯವಸ್ಥೆ, ಬಿಸಲಾಘಾತ ಸಮಸ್ಯೆ ನಿಭಾಯಿಸಲು ವೈದ್ಯರನ್ನು ಒಳಗೊಂಡ ವಾಟ್ಸಾಪ್ ಗ್ರೂಪ್ ರಚಿಸಿದ ಆರೋಗ್ಯ ಇಲಾಖೆ

ನಗರ ಭಾಗದಲ್ಲಿ ಕಸ ವಿಲೇವಾರಿಯ ಸ್ವಚ್ಛತಾ ಕಾರ್ಮಿಕರು ಬಹಳಷ್ಟು ಕಡೆಯಲ್ಲಿ ಬೆಳಗ್ಗೆಯಿಂದ 10ರವರೆಗೆ ದುಡಿದು ಈ ಬಳಿಕ ಸಂಜೆಯ ಬಳಿಕ ಹೆಚ್ಚು ಕೆಲಸ ಮಾಡಲು ಬಯಸುತ್ತಾರೆ. ನಗರದಲ್ಲಿ ಕಸದ ವಿಲೇವಾರಿಯ ಲಾರಿಗಳು ಅದನ್ನು ತೆಗೆದುಕೊಂಡು ಪಚ್ಚನಾಡಿ ಭಾಗಕ್ಕೆ ಸಾಗಿಸುವ ಕೆಲಸ ಕೂಡ ರಾತ್ರಿ ಹೊತ್ತಿನಲ್ಲಿ ಜಾಸ್ತಿಯಾಗುತ್ತದೆ ಎನ್ನುತ್ತಾರೆ ವಾಲೆನ್ಸಿಯಾದ ನಿವಾಸಿ ಸಂತೋಷ್ ಮೊಂತೆರೋ. ಬಿಸಿಲಾಘಾತ ಜನರನ್ನು ಹೆಚ್ಚು ಕಾಡುತ್ತಿದೆ. ದೇಹದ ಉಷ್ಣತೆ 104 ಫ್ಯಾರನ್‌ಹಿನ್ ಹೀಟ್ ಅಥವಾ ಅದಕ್ಕಿಂತ ಹೆಚ್ಚು, ಗೊಂದಲ, ಪ್ರಜ್ಞೆ ತಪ್ಪುವುದು ಇಂತಹ ಲಕ್ಷಣಗಳು ಕಂಡು ಬರುತ್ತದೆ. ಇಂತಹ ಸಮಯದಲ್ಲಿ ವ್ಯಕ್ತಿಗಳನ್ನು ತಂಪಾದ ಸ್ಥಳಕ್ಕೆ ಕರೆದುಕೊಂಡು ಹೋಗುವುದು ಅಥವಾ ನೀರಿನಿಂದ ಮುಖ ದೇಹಕ್ಕೆ ತಂಪು ಮಾಡುವ ಕೆಲಸ ಮಾಡಬೇಕು. ವ್ಯಕ್ತಿ ಎಚ್ಚರವಾಗಿದ್ದರೆ ತಣ್ಣೀರು ಅಥವಾ ಎಲೆಕ್ಟ್ರೋಲೈಟ್ ಇರುವ ಪಾನೀಯ ನೀಡುವುದು ಒಳ್ಳೆಯದು ಎನ್ನುತ್ತಾರೆ ವೈದ್ಯ ಡಾ. ಅಭಿಷೇಕ್ ಟಿ.ಆರ್.

## ಬಾಕಿ ವೇತನಕ್ಕಾಗಿ ಉಪಹಾರ ನೀಡದ ಇಂದಿರಾ ಕ್ಯಾಂಟೀನ್ ಸಿಬ್ಬಂದಿ

• ಉದಯವಾಹಿನಿ, ಬಳ್ಳಾರಿ

ನಗರದಲ್ಲಿನ ಏಳು ಇಂದಿರಾ ಕ್ಯಾಂಟೀನ್ ಗಳಲ್ಲಿ ಇಂದು ಬೆಳಗಿನ ಉಪಹಾರ ವಿತರಣೆಯಾಗಲಿಲ್ಲ. ಕಾರಣ ಇಲ್ಲಿನ ಉದ್ಯೋಗಿಗಳಿಗೆ ವೇತನ ನೀಡದೇ ಇದ್ದುದಕ್ಕೆಂದು ತಿಳಿದು ಬಂದಿದೆ. ನಗರದ ಮೋತಿ ಸರ್ಕಲ್, ಓಪಿಡಿ, ಟ್ರಾಮಾಕೇರ್ ಸೆಂಟರ್, ಬಾಪೂಜಿನಗರ, ಜಿಲ್ಲಾ ಆಸ್ಪತ್ರೆ, ಬೆಳಗಲ್ಲು ಕ್ರಾಸ್‌ನಲ್ಲಿ ಇಂದಿರಾ ಕ್ಯಾಂಟೀನ್‌ಗಳಿವೆ. ಮುಖ್ಯ ಮಂತ್ರಿ ಸಿದ್ದರಾಮಯ್ಯ ಬಡ ಜನತೆ ಆರ್ಥಿಕ ಸಂಕಷ್ಟದಿಂದ ಊಟ ಉಪಹಾರ ಇಲ್ಲದೇ ಬದುಕಬಾರದೆಂಬ ಸಂಕಲ್ಪದೊಂದಿಗೆ ರಾಜ್ಯಾದ್ಯಂತ ಈ ಇಂದಿರಾ ಕ್ಯಾಂಟೀನ್ ಗಳನ್ನು ಆರಂಭಿಸಿದರು. ಇಲ್ಲಿ ಬೆಳಿಗ್ಗೆ 5 ರೂ.ಗೆ ಉಪಹಾರ, ಮಧ್ಯಾಹ್ನ ಮತ್ತು ರಾತ್ರಿ ವೇಳೆ 10 ರೂ. ಗೆ ಊಟವನ್ನು ನೀಡಲಾಗುತ್ತಿದೆ. ಇದರ ವ್ಯತ್ಯಾಸದ ಹಣವನ್ನು ಆಯಾ ಸ್ಥಳೀಯ ಸಂಸ್ಥೆಗಳಿಂದ ನೀಡುತ್ತಿದೆ.

ಬಳ್ಳಾರಿ ನಗರದ ಏಳು ಕ್ಯಾಂಟೀನ್ ಗಳಲ್ಲಿ ದಿನ ನಿತ್ಯ 3 ರಿಂದ ಸಾವಿರ ಜನ ಊಟ ಉಪಹಾರ ನೀಡಲಾಗುತ್ತದೆ. ಮಾಸಿಕ 13 ರಿಂದ 15 ಲಕ್ಷ ರೂಗಳನ್ನು ಪಾಲಿಕೆ ನೀಡುತ್ತದೆ. ಆದರೆ ಇವಗಳನ್ನು ನಿರ್ವಹಣೆ ಮಾಡಲು ಗುತ್ತಿಗೆದಸರ ಕಂಪನಿಗೆ ಕಳೆದ 9 ತಿಂಗಳಿಂದ ಪಾಲಿಕೆಯವರು ಹಣ ನೀಡದ ಕಾರಣ. ಕಂಪನಿಯವರು ಇಲ್ಲಿ ಕೆಲಸ ಮಾಡುತ್ತಿದ್ದ 50 ಕ್ಕೂ ಹೆಚ್ಚು ಸಿಬ್ಬಂದಿಗಳಿಗೆ ಕಳೆದ ಮೂರು ತಿಂಗಳಿಂದ ವೇತನ ನೀಡದ ಕಾರಣ ಅವರು ಇಂದಿನಿಂದ ಉಪಹಾರ ಊಟ ತಯಾರಿಸಿ ಸರಬರಾಜು ಮಾಡದಿರಲು ನಿರ್ಧರಿಸಿದ್ದರು.



ಉದಯವಾಹಿನಿ ಚಿತ್ರ

ಹಾಗಾಗಿ ಬೆಳಿಗ್ಗೆ ನಗರದ ಏಳು ಇಂದಿರಾ ಕ್ಯಾಂಟೀನ್ ಗಳಲ್ಲಿ ಉಪಹಾರದ ಸರಬರಾಜು ಆಗಲಿಲ್ಲ. ಕಳೆದ ಎರೆಡು ಮೂರು ದಿನಗಳ ಹಿಂದೆ ಪಾಲಿಕೆ ಬಾಕಿ ಪೈಕಿ ಮೂರು ತಿಂಗಳ ಬಾಕಿ ಹಣ ಬಿಡುಗಡೆ ಮಾಡಿದೆಯಂತೆ. ಈ ವಿಷಯ ತಿಳಿದು ಸಂಜೆವಾಣಿ ಕ್ಯಾಂಟೀನ್ ನಿರ್ವಹಣೆ ಮಾಡುವವರಿಗೆ ಕೇಳಿದ್ದರಿಂದ ಅವರು ತಕ್ಷಣ ಎಚ್ಚೆತ್ತು ಸಿಬ್ವಂದಿಗೆ ಬಾಕಿ ವೇತನ ಕೊಡುವುದಾಗಿ ಹೇಳಿ. ಮಧ್ಯಾಹ್ನ ವೇಳೆಗೆ ಅಡುಗೆ ಸಿದ್ದಪಡಿಸಿ, ಮಧ್ಯಾಹ್ನಕ್ಕೆ ಊಟ ಸರಬರಾಜು ಮಾಡಲಾಯ್ತು. ಇನ್ನೂ ಪಾಲಿಕೆ ಐದು ತಿಂಗಳ ಬಾಕಿ ಹಣ ಬಿಡುಗಡೆ ಮಾಡಬೇಕಿದೆಯಂತೆ.

> ಮುಖ್ಯ ಮಂತ್ರಿ ಸಿದ್ದರಾಮಯ್ಯನವರು ಬಡ ಜನತೆ ಹಸಿವಿನಿಂದ ಬಳಲಬಾರದೆಂದು ಆರಂಭಿಸಿದ ಇಂದಿರಾ ಕ್ಯಾಂಟೀನ್‌ಗಳು ಯಾವುದೇ ಕಾರಣಕ್ಕೂ ಬಂದ್ ಆಗಬಾರದು. ಸಕಾಲಕ್ಕೆ ಪಾಲಿಕೆ ಅನುದಾನ ನೀಡಬೇಕು. -ಶಿವರಾಜ್ ಹೆಗಡೆ, ಕಾಂಗ್ರೆಸ್ ಮುಖಂಡರು ಬಾಪೂಜಿ ನಗರ, ಬಳ್ಳಾರಿ.

## ಖನಿಜ ಪ್ರತಿಷ್ಠಾನ ನಿಧಿ ಬಳಕೆಗೆ ಸೂಚನೆ

• ಉದಯವಾಹಿನಿ, ಮಂಗಳೂರು

ಗಣಿಗಾರಿಕೆಯಿಂದ ಹಾನಿಯಾದ ಪ್ರದೇಶಗಳ ಸುಧಾರಣೆ ಮತ್ತು ಸಂತ್ರಸ್ತರ ಉಪಯೋಗಕ್ಕಾಗಿ ಜಿಲ್ಲಾ ಖನಿಜ ಪ್ರತಿಷ್ಠಾನ ನಿಧಿಯ ಬಳಕೆಯ ಬಗ್ಗೆ ಚರ್ಚಿಸಲು ಶೀಘ್ರದಲ್ಲೇ ಜಿಲ್ಲೆಯ ಶಾಸಕರೊಂದಿಗೆ ಸಭೆ ನಡೆಸಲಾಗುವುದು ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದ್ದಾರೆ. ಅವರು ಜಿಲ್ಲಾಧಿಕಾರಿ ಕಚೇರಿಯಲ್ಲಿ ಜಿಲ್ಲಾ ಖನಿಜ ಪ್ರತಿಷ್ಠಾನ ನಿಧಿಯ ಬಳಕೆಯ ಬಗ್ಗೆ ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಕ್ರಷರ್, ಕಲ್ಲುಗಣಿಗಾರಿಕೆ, ಮರಳುಗಾರಿಕೆ ಸೇರಿದಂತೆ ವಿವಿಧ ಗಣಿಗಾರಿಕೆಗಳಿಂದ ತೊಂದರೆಗೀಡಾದ ಪ್ರದೇಶಗಳಲ್ಲಿ ರಸ್ತೆ, ಶಾಲೆ ಮತ್ತು ಅಂಗನವಾಡಿ ಕಟ್ಟಡ ಸೇರಿದಂತೆ ಮೂಲ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಲು ಜಿಲ್ಲಾ ಖನಿಜ ಪ್ರತಿಷ್ಠಾನ ನಿಧಿಯಲ್ಲಿ ಅವಕಾಶವಿದೆ. 2015 ರಿಂದ ಇದುವರೆಗೆ ಜಿಲ್ಲಾ ಖನಿಜ ಪ್ರತಿಷ್ಠಾನ ನಿಧಿಯಲ್ಲಿ 47.62 ಕೋಟಿ ರೂ. ಮೊತ್ತ ಸಂಗ್ರಹವಾಗಿದೆ. ಗಣಿಗಾರಿಕೆ ರಾಯಲ್ಟಿಯ ಶೇ. 10 ರಷ್ಟನ್ನು ಖನಿಜ ಪ್ರತಿಷ್ಠಾನ ನಿಧಿಗೆ ಸಂಗ್ರಹಿಸಲಾಗುತ್ತಿದೆ ಎಂದು ಅವರು ಹೇಳಿದರು.



ಉದಯವಾಹಿನಿ ಚಿತ್ರ

ಈ ನಿಟ್ಟಿನಲ್ಲಿ ಅಗತ್ಯವಿರುವ ಪ್ರದೇಶಗಳಲ್ಲಿ ಅಭಿವೃದ್ಧಿ ಕಾರ್ಯ ಕೈಗೊಳ್ಳಲು ಜಿಲ್ಲೆಯ ಶಾಸಕರೊಂದಿಗೆ ಅತಿ ಶೀಘ್ರವೇ ಸಭೆ ನಡೆಸಿ ಈ ಮೊತ್ತವನ್ನು ಸದ್ಬಳಕೆ ಮಾಡಲು ಚರ್ಚಿಸಲಾಗುವುದು ಎಂದು ತಿಳಿಸಿದರು. ಜಿಲ್ಲಾಧಿಕಾರಿ ದರ್ಶನ್ ಹೆಚ್.ವಿ ಮಾತನಾಡಿ, ಗಣಿಗಾರಿಕೆ ಪ್ರದೇಶದ 5 ಕಿ.ಮೀ ವ್ಯಾಪ್ತಿಯ ಪ್ರದೇಶದಲ್ಲಿ ಹಾನಿಯಾದ ಪ್ರದೇಶಗಳನ್ನು ಅಭಿವೃದ್ಧಿ ಕಾರ್ಯ ಕೈಗೊಳ್ಳಲು ಈ ನಿಧಿಯಲ್ಲಿ ಅವಕಾಶವಿದೆ ಎಂದರು.

## ಶಾಲೆ ವಿಲೀನಕ್ಕೆ ತೀವ್ರ ವಿರೋಧ

• ಉದಯವಾಹಿನಿ, ಬಳ್ಳಾರಿ

ಬಳ್ಳಾರಿ ಜಿಲ್ಲೆಯ ಹೊಸ ಯರಗುಡಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯನ್ನು ಕೆಪಿಎಸ್ ಶಾಲೆಗೆ ವಿಲೀನ ಮಾಡುವುದನ್ನು ವಿರೋಧಿಸಿ ಇಂದು ಎಐಡಿಎಸ್‌ಓ ಮತ್ತು ಸಾರ್ವಜನಿಕ ಶಿಕ್ಷಣ ಉಳಿಸಿ ಸಮಿತಿ ನೇತೃತ್ವದ ಅಡಿಯಲ್ಲಿ ಗ್ರಾಮಸ್ಥರು ಇಡೀ ಊರೆಲ್ಲಾ ಪ್ರತಿಭಟನಾ ಮೆರವಣಿಗೆ ಮಾಡಿ, ಶಾಲೆ ಮುಂದೆ ಬ್ಯಾನರ್ ಕಟ್ಟಿ, ಶಾಲೆಯ ಮುಖ್ಯ ಶಿಕ್ಷಕರ ಮೂಲಕ ಮಾನ್ಯ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಿದರು. ಈ ಶಾಲೆ ಮುಚ್ಚಿದಲ್ಲಿ ನೂರಾರು ತಳ ಸಮುದಾಯದ ಮಕ್ಕಳು ಶಿಕ್ಷಣದಿಂದ ವಂಚಿರಾಗುತ್ತಾರೆ, ಕೆ ಪಿ ಎಸ್ ಯೋಜನೆ ಶಾಲೆ ಮುಚ್ಚುವ ಹುನ್ನಾರ ಹೊಂದಿರುವ ಯೋಜನೆ ಇದರ ವಿರುದ್ಧ ನಮ್ಮ ಹೋರಾಟವಾಗಿದೆ. ಸರ್ಕಾರ ಜನರ ವಿರೋಧದ ನಡುವೆಯೂ ನಮ್ಮ ಶಾಲೆಯನ್ನು ಮುಚ್ಚಲು ಮುಂದಾದಲ್ಲಿ ನಮ್ಮ ತೀವ್ರ ವಿರೋಧವನ್ನು ಎದುರಿಸಬೇಕಗುತ್ತದೆ ಎಂದು ಎಚ್ಚರಿಕೆ ನೀಡಿದರು.

## ಶುದ್ಧ ನೀರು ಪೂರೈಕೆಗೆ ಸೂಚನೆ

• ಉದಯವಾಹಿನಿ, ನವಲಗುಂದ

ಗ್ರಾಮೀಣ ಪ್ರದೇಶಗಳಲ್ಲಿ ನೀರು ಸರಬರಾಜಿನಲ್ಲಿ ಯಾವುದೇ ವ್ಯತ್ಯಯವಾಗದಂತೆ ಹಾಗೂ ಶುದ್ಧ ನೀರು ಪೂರೈಕೆಯಾಗುವಂತೆ ನೋಡಿಕೊಳ್ಳಲು ಸಂಬಂಧಪಟ್ಟ ಅಧಿಕಾರಿಗಳಿಗೆ ಧಾರವಾಡ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಜಿಲ್ಲಾ ಪಂಚಾಯಿತಿ ಭುವನೇಶ ಪಾಟೀಲ ನಿರ್ದೇಶನ ನೀಡಿದರು.

ಕುಡಿಯುವ ನೀರು, ಮನರೇಗಾ ಕರ ವಸೂಲಾತಿ, ಸಾಮಾಜಿಕ ಲೆಕ್ಕ ಪರಿಶೋಧನೆ ವಸೂಲಾತಿ ಹಾಗೂ ವಿವಿಧ ಯೋಜನೆಗಳ ಕಾಮಗಾರಿ ಅಪೇಕ್ಷಣಾ ವಸೂಲಾತಿ ಪ್ರಗತಿ ಪರಶೀಲನಾ ಸಭೆಯಲ್ಲಿ ಮಾತನಾಡಿದ ಅವರು ಶುದ್ಧ ನೀರು ಪೂರೈಕೆಯಾಗುತ್ತಿರುವ ಕುರಿತು ಖಚಿತ ಪಡಿಸಿಕೊಳ್ಳಿ ಈ ನಿಟ್ಟಿನಲ್ಲಿ ಸಂಬಂಧಪಟ್ಟ ಗ್ರಾಮ ಪಂಚಾಯಯಿತಿಗಳು ಸಾಕಷ್ಟು ಮುನ್ನೆಚ್ಚರಿಕೆಗಳನ್ನು ತೆಗೆದುಕೊಳ್ಳಬೇಕು. ಅಲ್ಲದೇ ಮನರೇಗಾ ಯೋಜನೆಗಳಲ್ಲಿ ಪ್ರಗತಿ ಸಾಧಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

## ತಾಂತ್ರಿಕ ತೊಂದರೆ: ಕೆಲಸವಿಲ್ಲದೆ ವಾಪಸಾದ ಕಾರ್ಮಿಕರು

• ಉದಯವಾಹಿನಿ, ಲಕ್ಷ್ಮೇಶ್ವರ

ತಾಲ್ಲೂಕಿನ ಸುರಣಗಿ ಗ್ರಾಮ ಪಂಚಾಯಿತಿಯಲ್ಲಿ ವಿಬಿಜಿ ರಾಮ್ ಜಿ (ನರೇಗಾ) ಕಾಮಗಾರಿ ಸಂಬಂಧ ತಾಂತ್ರಿಕ ತೊಂದರೆಯಿಂದಾಗಿ ಕೆಲಸಕ್ಕೆ ತೆರಳಿದ್ದ ನೂರಾರು ಕಾರ್ಮಿಕರು ಕೆಲಸದಿಂದ ವಂಚಿತರಾಗಿ ಮರಳಿ ಬಂದ ಘಟನೆ ಜರುಗಿದೆ. ಘಟನೆ ವಿವರಃ ಸುರಣಗಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಜಾಬ್ ಕಾರ್ಡ್ ಹೊಂದಿರುವ ನೂರಾರು ಕಾರ್ಮಿಕರು ಕೆಲಸಕ್ಕೆ ತೆರಳಿದ್ದರು.

ಆದರೆ ಈಗಿನ ನಿಯಮಾವಳಿಯಂತೆ ತಂತ್ರಾಂಶದ ಮೂಲಕ ಮುಖ ಚರ್ಯೆ ತೆಗೆದುಕೊಳ್ಳುವ ಸಂದರ್ಭದಲ್ಲಿ ಮಿಸ್ ಮ್ಯಾಚ್ ಎಂದು ಬರುತ್ತಿದ್ದಂತೆ ಕೂಲಿ ಕಾರ್ಮಿಕರ ಸಹನೆಯ ಕಟ್ಟೆ ಒಡೆಯಿತು. ಕೆಲಸಕ್ಕೆ ಬಂದಿದ್ದ ನೂರಾರು ಕಾರ್ಮಿಕರಲ್ಲಿ ಕೆಲವರಿಗೆ ಕೆಲಸ ಸಿಕ್ಕರೆ ಇನ್ನು ಕೆಲವರಿಗೆ ಸಿಗಲಿಲ್ಲ ಇದರಿಂದ ರೋಸಿ ಹೋದ ಮಹಿಳಾ ಕೂಲಿ ಕಾರ್ಮಿಕರು ಎಲ್ಲವನ್ನು ಸರಿಪಡಿಸಿಕೊಂಡು ಕೆಲಸವನ್ನು ಆರಂಭಿಸಿ ಒಬ್ಬರಿಗೆ ಕೆಲಸ ಕೊಟ್ಟು ಇನ್ನೊಬ್ಬರಿಗೆ ಕೊಡುವುದಿಲ್ಲ ಎಂದರೆ ಇದು ಯಾವ ನ್ಯಾಯ ಎಲ್ಲವನ್ನು ಸ್ಥಗಿತಗೊಳಿಸಿ ಎಂದು ಆಕ್ರೋಶ ವ್ಯಕ್ತಪಡಿಸಿದ್ದರು ಆಗ ಪಂಚಾಯತಿ ಸಿಬ್ಬಂದಿ ತಾಂತ್ರಿಕ ದೋಷವನ್ನು ಸರಿಪಡಿಸಿಕೊಂಡು ಕೆಲಸ ಆರಂಭಿಸುವುದಾಗಿ ಹೇಳಿದ ನಂತರ ಬಂದ ದಾರಿಗೆ ಸುಂಕವಿಲ್ಲ ಎಂಬಂತೆ ಕೂಲಿ ರಹಿತರಾಗಿ ಮರಳಿದರು.

## ನಡೆ-ನುಡಿ ಒಂದಾದರೆ ಜೀವನಕ್ಕೆ ಬೆಲೆ

• ಉದಯವಾಹಿನಿ, ಬೀದರ್

ನಡೆ-ನುಡಿ ಒಂದಾದರೆ ಜೀವನಕ್ಕೊಂದು ಅರ್ಥ, ಬೆಲೆ ಬರುತ್ತದೆ ಎಂದು ಜಗದ್ಗುರು ಶಿವಯೋಗೀಶ್ವರ ಸ್ವಾಮೀಜಿ ನುಡಿದರು. ನಗರದ ಬಸವ ಮುಕ್ತಿ ಮಂದಿರದಲ್ಲಿ ಆಯೋಜಿಸಿದ್ದ ಚಿಂತನ ಹಾಗೂ ಪ್ರಸಾದ ದಾಸೋಹ ಕಾರ್ಯಕ್ರಮದ ಸಾನಿಧ್ಯ ವಹಿಸಿ ಅವರು ಮಾತನಾಡಿದರು.

ಸಿದ್ದೇಶ್ವರ ಸ್ವಾಮೀಜಿ ಅವರು ಬೀದರನಲ್ಲಿ ಪ್ರವಚನ ನೀಡಿದ್ದ ಸಂದರ್ಭದಲ್ಲಿ ನಿಸರ್ಗದ ಮಡಿಲಲ್ಲಿ ಕೃಷಿ ಜತೆ ಆಧ್ಯಾತ್ಮಿಕ ಜೀವನ ನಡೆಸುವುದಾಗಿ ಹೇಳಿದ್ದೆ. ಅದರಂತೆ ನಡೆದುಕೊಂಡಿದ್ದೇನೆ ಎಂದು ಅವರು ತಿಳಿಸಿದರು. ಸಂಕಲ್ಪ ಪೂರ್ಣಗೊಳಿಸಲು ನಗರ ತ್ಯಜಿಸಿ ಭಾತಂಬ್ರಾದಲ್ಲಿ ನೆಲೆಸಿದ್ದೇನೆ. ಅಲ್ಲಿಯ ಮಠ ಜೀರ್ಣೋದ್ಧಾರ ಮಾಡಿದ್ದೇನೆ. ಮಠದ ಅಧೀನದ 32 ಎಕರೆ ಜಮೀನಿನಲ್ಲಿ ಕೃಷಿ ಚಟುವಟಿಕೆ ಕೈಗೊಂಡಿದ್ದೇನೆ ಎಂದು ಹೇಳಿದರು.

ಸಿದ್ದೇಶ್ವರ ಸ್ವಾಮೀಜಿ ಅವರು ಮಠದ ಜಮೀನಿನಲ್ಲಿ 5 ಸಸಿ ನೆಟ್ಟಿದ್ದರು. ನಂತರ ನಾನು ಪ್ರತಿ ವರ್ಷ ಸಸಿಗಳನ್ನು ನೆಡುತ್ತಾ ಬಂದಿದ್ದೇನೆ. ಈಗ ಅಲ್ಲಿ ಮಾವು ಸೇರಿ 300 ಮರಗಳು ಇವೆ. ಕೃಷಿಯಲ್ಲಿ ಸ್ವಾವಲಂಬನೆ ಸಾಧಿಸಿದ್ದೇನೆ. ಶಾಂತಿ, ನೆಮ್ಮದಿ ಹಾಗೂ ಸಮಾಧಾನ ಕಂಡುಕೊಂಡಿದ್ದೇನೆ. 82ನೇ ವಯಸ್ಸಿನಲ್ಲೂ ಸಂತಸದಿಂದ ಇದ್ದೇನೆ ಎಂದು ತಿಳಿಸಿದರು. ಅನೇಕ ದಿನಗಳ ಅಪೇಕ್ಷೆಯಂತೆ ಮಠದ ಜಮೀನಲ್ಲಿಯೇ ಬೆಳೆದ ಮಾವಿನ ಹಣ್ಣಿನ ರಸ, ಹೋಳಿಗೆ, ಭಜಿ, ಅನ್ನ, ಸಾಂಬಾರು ಪ್ರಸಾದ ಭಕ್ತರಿಗೆ ಉಣಬಡಿಸಿದ್ದೇನೆ ಎಂದರು. ಬಸವಾದಿ ಶರಣರ ತತ್ವಗಳನ್ನು ಎಲ್ಲರೂ ಪಾಲಿಸಬೇಕು ಎಂದು ಹೇಳಿದರು. ಜಾಗತಿಕ ಲಿಂಗಾಯತ ಮಹಾಸಭಾದ ಜಿಲ್ಲಾ ಘಟಕದ ಅಧ್ಯಕ್ಷ ಬಸವರಾಜ ಧನ್ನೂರ ಮಾತನಾಡಿ, ಶಿವಯೋಗೀಶ್ವರ ಸ್ವಾಮೀಜಿ ಅವರು ನುಡಿದಂತೆ ನಡೆದು ಎಲ್ಲರಿಗೆ ಮಾದರಿಯಾಗಿದ್ದಾರೆ ಎಂದು ಹೇಳಿದರು. ಸಾಮಾಜಿಕ ಹಾಗೂ ಧಾರ್ಮಿಕ ಕ್ಷೇತ್ರಕ್ಕೆ ಶ್ರೀಗಳ ಕೊಡುಗೆ ಅಪಾರವಾಗಿದೆ ಎಂದು ಬಣ್ಣಿಸಿದರು.



ಉದಯವಾಹಿನಿ ಚಿತ್ರ

## ಬ್ರಿಮ್ಸ್ ಅವ್ಯವಸ್ಥೆ ಸರಿಪಡಿಸದಿದ್ದರೆ ಹೋರಾಟ: ಸ್ವಾಮಿದಾಸ

• ಉದಯವಾಹಿನಿ, ಬೀದರ

ರೋಗಿಗಳ ಚಿಕಿತ್ಸೆಗಾಗಿ ಸರ್ಕಾರ ಕೋಟಿ ಕೋಟಿ ಹಣ ಖರ್ಚು ಮಾಡಿ ಬ್ರಿಮ್ಸ್‌ನಲ್ಲಿ ವಿವಿಧ ಉಪಕರಣಗಳನ್ನು ನೀಡಿದೆ. ಆದರೆ ಅವುಗಳ ಸದುಪಯೋಗ ಆಗದಿರುವುದು ದುರಂತ. ಈ ಕುರಿತು ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಜಿಲ್ಲಾಧಿಕಾರಿಗಳು ಕ್ರಮ ಕೈಗೊಳ್ಳಬೇಕೆಂದು ಬಹುಜನ ಸೇವಾ ಸಮಿತಿ ರಾಜ್ಯ ಸಂಚಾಲಕ ಸ್ವಾಮಿದಾಸ ಕೆಂಪೆನೋರ್ ತಿಳಿಸಿದರು.

ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಕರೆದ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು ಜಿಲ್ಲಾ ಉಸ್ತುವಾರಿ ಸಚಿವರು ಕ್ಯಾಥ್‌ಲ್ಯಾಬ್ ಉದ್ಘಾಟಿಸಿ ಒಂದು ವರ್ಷ ಕಳೆದರೂ ಜನತೆಗೆ ಅದರ ಉಪಯೋಗ ಆಗುತ್ತಿಲ್ಲ. ಡಯಾಲಿಸಿಸ್ ವಿಭಾಗ ಸರಿಯಾಗಿ ನಡೆಯುತ್ತಿಲ್ಲ. ಈ ನಡುವೆ ಲಕ್ಷಾಂತರ ಮೌಲ್ಯದ ಎಸಿ ಮತ್ತು ಕಾಪರ್ ತಂತಿ ಕಳವು ಆಗಿದೆ. ಇದನ್ನೆಲ್ಲ ಗಮನಿಸಿದರೆ ಬ್ರಿಮ್ಸ್ ಆಸ್ಪತ್ರೆಯ ವ್ಯವಸ್ಥೆ ಸಂಪೂರ್ಣ ಹದಗೆಟ್ಟಿದೆ ಎಂದರು. ದೂರದ ಹೈದರಾಬಾದ, ಸೋಲಾಪುರ ಕಡೆಗೆ ರೋಗಿಗಳು ಹೋಗಬಾರದು.

ರೋಗಿಗಳ ಸಮಯ ಮತ್ತು ಹಣದ ಉಳಿತಾಯ ಮಾಡುವ ಸಲುವಾಗಿ ಇಲ್ಲಿಯೇ ಬ್ರಿಮ್ಸ್‌ನಲ್ಲಿ ಕ್ಯಾಥ್‌ಲ್ಯಾಬ್ ಮತ್ತು ಡಯಾಲಿಸಿಸ್ ಮತ್ತು ಇನ್ನಿತರ ಚಿಕಿತ್ಸೆಯ ವ್ಯವಸ್ಥೆ ಮಾಡಲಾಗಿದೆ ಎಂದು ಹೇಳುವ ಜನಪ್ರತಿನಿಧಿಗಳ ಮಾತು ಭಾಷಣಕ್ಕೆ ಮಾತ್ರ ಸೀಮಿತವಾಯಿತೇ? ಎಂದು ಸ್ವಾಮಿದಾಸ್ ಪ್ರಶ್ನಿಸಿದರು. ಈಗಿರುವ ಬ್ರಿಮ್ಸ್ ನಿರ್ದೇಶಕಿ ಡಾ. ಶಾಂತಲಾ ಕೌಜಲಗಿಗೆ ಕೈಬಿಟ್ಟು ನುರಿತ ಅನುಭವಿ ನಿರ್ದೇಶಕರನ್ನು ನೇಮಕ ಮಾಡಬೇಕು. ತುರ್ತಾಗಿ ಕ್ಯಾಥ್‌ಲ್ಯಾಬ್ ಆರಂಭಿಸಬೇಕು. ವೈದ್ಯರು ಆಸ್ಪತ್ರೆಯಲ್ಲಿ ಠಿಕಾಣಿ ಹೂಡುವಂತೆ ಮಾಡಬೇಕು. ಅನಧಿಕೃತವಾಗಿ ಕರ್ತವ್ಯ ನಿರ್ವಹಿಸುತ್ತಿರುವ ಜೈಸಿಂಗ್ ಅವರನ್ನು ವಜಾ ಮಾಡಬೇಕು. ಎಸಿ ಮತ್ತು ಕಾಪರ್ ತಂತಿ ಕಳವು ಪ್ರಕರಣ ತನಿಖೆ ಮಾಡಬೇಕು. ತಪ್ಪಿತಸ್ಥರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು. ಹಲವು ವರ್ಷಗಳಿಂದ ಒಂದೇ ಕಡೆ ಠಿಕಾಣಿ ಹೂಡಿರುವ ಪ್ರಕಾಶ ಮಡಿವಾಳ ಅವರ ವರ್ಗಾವಣೆ ಮಾಡಬೇಕು.

ಬ್ರಿಮ್ಸ್‌ನಲ್ಲಿರುವ ಎಲ್ಲಾ ಸಿಸಿ ಕ್ಯಾಮರಾಗಳು ಚಾಲೂ ಇರಬೇಕು ಎಂಬ ಇತ್ಯಾದಿ ಹಕ್ಕೊತ್ತಾಯ ಮಾಡಿದರು.



ಉದಯವಾಹಿನಿ ಚಿತ್ರ

## ಮಳೆಗಾಲ: ನೆರೆ ಸಂಭಾವ್ಯ ಪ್ರದೇಶಗಳಲ್ಲಿ ಮುನ್ನೆಚ್ಚರಿಕೆ ವಹಿಸಿ: ದಿನೇಶ್ ಗುಂಡೂರಾವ್

• ಉದಯವಾಹಿನಿ, ಮಂಗಳೂರು

ಮುಂಬರುವ ಮಳೆಗಾಲದಲ್ಲಿ ನೆರೆ ಮತ್ತು ನೀರು ನಿಲ್ಲಬಹುದಾದ ಪ್ರದೇಶಗಳನ್ನು ಮೊದಲೇ ಗುರುತಿಸಿ ಅಗತ್ಯ ಮುನ್ನೆಚ್ಚರಿಕೆ ವಹಿಸಲು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು. ಅವರು ಶುಕ್ರವಾರ ಜಿಲ್ಲಾಧಿಕಾರಿ ಕಚೇರಿಯಲ್ಲಿ ಮಳೆಗಾಲ ಪೂರ್ವ ಸಿದ್ಧತೆ ಬಗ್ಗೆ ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಕಳೆದ ವರ್ಷ ನೆರೆ ಬಂದ ಪ್ರದೇಶಗಳು ಹಾಗೂ ಭೂಕುಸಿತವಾದ ಜನವಸತಿ ಪ್ರದೇಶಗಳಿಗೆ ಅಧಿಕಾರಿಗಳು ತಕ್ಷಣವೇ ಭೇಟಿ ನೀಡಿ ದುರಂತ ಅಪಾಯ ತಡೆಯಲು ಈಗಿಂದಲೇ ಕ್ರಮವಹಿಸಬೇಕು. ಚರಂಡಿ ರಾಜಕಾಲುವೆಗಳ ಹೂಳೆತ್ತುವ ಕಾರ್ಯವನ್ನು ತ್ವರಿತಗೊಳಿಸಬೇಕು. ಈ ಸಂಬಂಧ ಇಲಾಖೆಗಳು ಪರಸ್ಪರ ಸಮನ್ವಯದಿಂದ ಕಾರ್ಯನಿರ್ವಹಿಸಬೇಕು ಎಂದು ಅವರು ಹೇಳಿದರು. ಜಿಲ್ಲಾಧಿಕಾರಿ ಹೆಚ್.ವಿ ದರ್ಶನ್ ಮಾತನಾಡಿ, ಚರಂಡಿ ಮತ್ತು ರಾಜಕಾಲುವೆಗಳ ಹೂಳೆತ್ತುವ ಕಾರ್ಯ ಪ್ರಗತಿಯಲ್ಲಿದೆ. ಸಮುದ್ರ ಕೊರೆತ ಉಂಟಾಗಬಹುದಾದ 8 ಪ್ರದೇಶಗಳನ್ನು ಗುರುತಿಸಿ ಅಪಾಯದ ಪ್ರಮಾಣವನ್ನು ತಗ್ಗಿಸಲು ಕ್ರಮವಹಿಸಲಾಗಿದೆ. ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ತುರ್ತು ವಿಪತ್ತು ನಿರ್ವಹಣೆಗೆ ದಿನದ 24 ಗಂಟೆಯೂ ಕಾರ್ಯನಿರ್ವಹಿಸುವ ನಿಯಂತ್ರಣ ಕೊಠಡಿಗಳನ್ನು ತೆರೆಯಲಾಗಿದೆ ಎಂದು ಹೇಳಿದರು.

ಮಂಗಳೂರಿನಲ್ಲಿ ಎಸ್.ಡಿ.ಆರ್.ಎಫ್ ತಂಡ ಈಗಾಗಲೇ ಕಾರ್ಯನಿರ್ವಹಿಸುತ್ತಿದೆ. ರಾಷ್ಟ್ರೀಯ ವಿಪತ್ತು ನಿರ್ವಹಣಾ ತಂಡ (ಎನ್.ಡಿ.ಆರ್.ಎಫ್) ಮೇ ಅಂತ್ಯಕ್ಕೆ ಆಗಮಿಸುವ ಸಾಧ್ಯತೆ ಇದೆ ಎಂದು ಅವರು ಹೇಳಿದರು. ಸಂಭವನೀಯ ಪ್ರವಾಹ ಪೀಡಿತ 92 ಪ್ರದೇಶಗಳನ್ನು ಹಾಗೂ ಭೂ ಕುಸಿತ ಉಂಟಾಗಬಹುದಾದ 88 ಸ್ಥಳಗಳನ್ನು ಗುರುತಿಸಿ ಸಾರ್ವಜನಿಕರಿಗೆ ಮುನ್ನೆಚ್ಚರಿಕೆ ನೀಡಲಾಗುತ್ತಿದೆ ಎಂದು ಹೇಳಿದರು.



ಉದಯವಾಹಿನಿ ಚಿತ್ರ

# ಮಹಿಳೆಯರನ್ನು ಮುಖ್ಯವಾಹಿನಿಗೆ ತರಲು ಸರ್ಕಾರದ ಅವಿರತ ಪ್ರಯತ್ನ

### ಬಸವಣ್ಣನವರು ಅವಿರತ ಹೋರಾಟದ ನಂತರವೂ ಕೂಡಾ ಮಹಿಳೆಯರಿಗೆ ಹಕ್ಕುಗಳು ಸಿಗಲಿಲ್ಲ, ಈಗಲೂ ಮಹಿಳೆಯರಿಗೆ ಸಿಗುತ್ತಿಲ್ಲ

• ಉದಯವಾಹಿನಿ, ಕಲಬುರಗಿ

ಮನುಸ್ಮೃತಿಯಲ್ಲಿ ಮಹಿಳೆಯರಿಗೆ ಯಾವುದೇ ಹಕ್ಕುಗಳಿರಲಿಲ್ಲ. ಮಹಿಳೆಯರಿಗೆ ಸಮಾನ ಹಕ್ಕು ದೊರಕಿಸಿಕೊಡಲು ಆ ಕಾಲದಲ್ಲೇ ಬಸವಣ್ಣನವರು ಅನುಭವ ಮಂಟಪದಲ್ಲಿ ಮಹಿಳೆಯರಿಗೆ ಸಮಾನವಾದ ಅವಕಾಶ ನೀಡಿದ್ದರು ಎಂದು ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮತ್ತು ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಅವರು ಹೇಳಿದರು.

ನಗರದ ಎಸ್ ಎಂ ಪಂಡಿತ ರಂಗಮಂದಿರದಲ್ಲಿ ನಡೆದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು. ಬಸವಣ್ಣನವರು ಅವಿರತ ಹೋರಾಟದ ನಂತರವೂ ಕೂಡಾ ಮಹಿಳೆಯರಿಗೆ ಹಕ್ಕುಗಳು ಸಿಗಲಿಲ್ಲ, ಈಗಲೂ ಮಹಿಳೆಯರಿಗೆ ಸಿಗುತ್ತಿಲ್ಲ ಎಂದು ವಿಷಾಧಿಸಿದ ಪ್ರಿಯಾಂಕ್ ಖರ್ಗೆ ಡಾ ಅಂಬೇಡ್ಕರ್ ಅವರು ಸಂವಿಧಾನದ ಅಡಿಯಲ್ಲಿ ಮಹಿಳೆಯರಿಗೆ ಸಮಾನವಾದ ಹಕ್ಕು ನೀಡಿದ್ದಾರೆ. ಉದ್ಯೋಗದ ಹಕ್ಕು ಹಾಗೂ ಸಮಾನ ವೇತನ ಕೂಡಾ ದೊರಕಿಸಿಕೊಟ್ಟಿದ್ದಾರೆ ಎಂದು ಹೇಳಿದರು.

ರಾಜ್ಯ ಸರ್ಕಾರ ಗೃಹಲಕ್ಷ್ಮಿ ಹಾಗೂ ಶಕ್ತಿ ಯೋಜನೆಗಳನ್ನು ನಾರಿಯರ ಸಲುವಾಗಿಯೇ ಜಾರಿಗೆ ತರಲಾಗಿದೆ. ಇದರಿಂದಾಗಿ ಮಹಿಳೆಯರು ಆರ್ಥಿಕವಾಗಿ ಸಬಲರಾಗುತ್ತಿದ್ದಾರೆ. ಅವರನ್ನು ಮುಖ್ಯವಾಹಿನಿಗೆ ತರಲು ಸರ್ಕಾರ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದೆ ಎಂದರು. ಅಂಗನವಾಡಿ ಕಾರ್ಯಕರ್ತೆಯರ ಕೆಲಸ ಸುಲಭವಲ್ಲ. ಅಂಗನಾಡಿ ಕೇಂದ್ರಗಳು ಮಕ್ಕಳ ಜೀವನದ ಅಡಿಪಾಯಗಳಾಗಿರುತ್ತವೆ ಹಾಗೂ ಅವರಿಗೆ ಭವಿಷ್ಯ ರೂಪಿಸುವ ಕೇಂದ್ರಗಳಾಗಿವೆ. ಇದೂವರೆಗೆ ಜಿಲ್ಲೆಯಲ್ಲಿ 313 ಬಾಲಕಿಯರ ಬಾಲ್ಯ ವಿವಾಹವನ್ನು ತಪ್ಪಿಸಲಾಗಿದೆ ಎಂದರು.

ಎಂಎಲ್‌ಸಿ ತಿಪ್ಪಣ್ಣಪ್ಪ ಕಮಕನೂರು ಮಾತನಾಡಿ ಡಾ ಅಂಬೇಡ್ಕರ್ ಅವರು ನೀಡಿದ ಸೌಲಭ್ಯವನ್ನು ಸಮರ್ಪಕವಾಗಿ ಜನಸಾಮಾನ್ಯರಿಗೆ ತಲುಪಿಸಿದ ಕೀರ್ತಿ ಕರ್ನಾಟಕ ರತ್ನ ಸಚಿವ ಪ್ರಿಯಾಂಕ್ ಖರ್ಗೆ ಅವರಿಗೆ ಸಲ್ಲಬೇಕು. ಅಂಬೇಡ್ಕರ್ ಅವರ ರಥವನ್ನು ಖರ್ಗೆ ಮುಂದೆ ತೆಗೆದುಕೊಂಡು ಹೋಗುತ್ತಿದ್ದಾರೆ ಎಂದರು.

ಕಲಬುರಗಿ ರೊಟ್ಟಿಯನ್ನು ಅಂತರಾಷ್ಟ್ರೀಯ ಮಟ್ಟಕ್ಕೆ ಕೊಂಡೊಯ್ದಿದ್ದಾರೆ. ನಗರದಲ್ಲಿ ಕ್ರೀಡಾಂಗಣಗಳು ಸೇರಿದಂತೆ ಪ್ರಮುಖ ಮೂಲಭೂತ ಸೌಲಭ್ಯಗಳನ್ನು ಕಟ್ಟುನಿಟ್ಟಾಗಿ ಒದಗಿಸಿದ್ದಾರೆ. ಜಿಲ್ಲೆಯಲ್ಲಿ ಮೃಗಾಲಯ ಸ್ಥಾಪನೆ ಮಾಡಿದ್ದಾರೆ ಎಂದು ಸಚಿವರನ್ನು ಕೊಂಡಾಡಿದರು.




ಉದಯವಾಹಿನಿ ಚಿತ್ರ

**ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ**

#### ನಿರಂತರ ಜನರ ಪರ ಕೆಲಸ

ಜನರ ಪರವಾಗಿ ನಿರಂತರವಾಗಿ ಕೆಲಸ ಮಾಡುವ ಹಿರಿಯ ನಾಯಕರಾದ ಮಲ್ಲಿಕಾರ್ಜುನ ಖರ್ಗೆ ಅವರು ಹೊಸ ಹೊಸ ಯೋಜನೆಗಳನ್ನು ಜಿಲ್ಲೆಗೆ ತಂದಿದ್ದಾರೆ. ಆರ್ಟಿಕಲ್ 371( ಜೆ) ಜಾರಿಗೆ ತಂದು ಈ ಭಾಗದ ಬಡವರ, ದಲಿತರ ಮಕ್ಕಳು ವೈದ್ಯರಾಗಿದ್ದಾರೆ. ಅವರ ಸಮಾಜ ಸೇವೆಯನ್ನು ಪರಿಗಣಿಸಿ ಅವರಿಗೆ ಭಾರತ ರತ್ನ ಪ್ರಶಸ್ತಿಯನ್ನು ನೀಡಿ ಗೌರವಿಸಬೇಕು ಎಂದು ಕೇಂದ್ರಕ್ಕೆ ಮನವಿ ಮಾಡಿದ ಕಮಕನೂರು, ಖರ್ಗೆ ಮನೆತನದಲ್ಲಿ ಯಾರಾದರೊಬ್ಬರು ಈ ರಾಜ್ಯದ ಮುಖ್ಯಮಂತ್ರಿ ಆಗಲಿ ಎಂದು ಆಶಿಸಿದರು. ಜಿಲ್ಲೆಯಲ್ಲಿ ಒಟ್ಟು 1036 ಅಂಗನವಾಡಿ ಕಾರ್ಯಕರ್ತೆಯರಾಗಿ ಹಾಗೂ ಅಂಗನವಾಡಿ ಸಹಾಯಕರಾಗಿ ನೇಮಕವಾದವರಿಗೆ ನೇಮಕಾತಿ ಆದೇಶ ಪತ್ರವನ್ನ ಸಚಿವರು ಇದೇ ಸಂದರ್ಭದಲ್ಲಿ ವಿತರಿಸಿದರು. ಕಲಬುರಗಿ ನೆಕ್ಸ್ಟ್ ಫೌಂಡೇಶನ್ ಟ್ರಸ್ಟ್‌ಗೆ ಆರು ಆಕ್ಸಿಜನ್ ಕಾನ್ಸಂಟ್ರೇಟರ್‌ಗಳನ್ನು ಅಂಕುಶ್ ಬಿ.ಶಹಾ ಅವರು ಸಚಿವರಿಗೆ ಹಸ್ತಾಂತರಿಸಿದರು.

## ಪಂಜಾಬ್ ಕೈಗಾರಿಕಾ ಸಚಿವ ಸಂಜೀವ್ ಅರೋರಾ ಮನೆ ಮೇಲೆ ಮತ್ತೆ ಇಡಿ ದಾಳಿ

**ನವದೆಹಲಿ:** ಹೊಸದಾಗಿ ದಾಖಲಾಗಿರುವ ಹಣ ವರ್ಗಾವಣೆ ಪ್ರಕರಣದ ತನಿಖೆಯ ಭಾಗವಾಗಿ ಜಾರಿ ನಿರ್ದೇಶನಾಲಯ ಇಂದು ಪಂಜಾಬ್ ಕೈಗಾರಿಕಾ ಸಚಿವ ಸಂಜೀವ್ ಅರೋರಾ ಮತ್ತು ಅವರೊಂದಿಗೆ ಸಂಪರ್ಕ ಹೊಂದಿದ್ದಾರೆ ಎನ್ನಲಾದ ಇತರರ ವಿರುದ್ಧ ಮತ್ತೆ ದಾಳಿ ನಡೆಸಿದೆ. ದಾಳಿಗೊಳಗಾದ ಐದು ಸ್ಥಳಗಳಲ್ಲಿ ಚಂಡೀಗಢದಲ್ಲಿರುವ ಅರೋರಾ ಅವರ ಅಧಿಕೃತ ನಿವಾಸವೂ ಸೇರಿದೆ ಎಂದು ಅವರು ಹೇಳಿದರು. ಹ್ಯಾಂಪ್ಟನ್ ಸ್ಕೈ ರಿಯಾಲ್ಟಿ ಲಿಮಿಟೆಡ್ ಎಂಬ ಕಂಪನಿಯ ಕಚೇರಿಯೂ ಸೇರಿದಂತೆ ದೆಹಲಿ ಮತ್ತು ಗುರುಗ್ರಾಮ್ (ಹರಿಯಾಣ) ನಲ್ಲಿರುವ ಕಚೇರಿಗಳ ಮೇಲೆ ದಾಳಿ ನಡೆಸಲಾಗಿದೆ. ಕೇಂದ್ರ ಸಂಸ್ಥೆ ಹಣ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್ಎ) ಯ ಕ್ರಿಮಿನಲ್ ವಿಭಾಗಗಳ ಅಡಿಯಲ್ಲಿ ಹೊಸ ಪ್ರಕರಣ ದಾಖಲಿಸಿದ ನಂತರ ಶೋಧಗಳನ್ನು ಪ್ರಾರಂಭಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.



ಏಪ್ರಿಲ್‌ನಲ್ಲಿ, ವಿದೇಶಿ ವಿನಿಮಯ ನಿರ್ವಹಣಾ ಕಾಯ್ದೆ (ಫೆಮಾ) ದ ನಾಗರಿಕ ನಿಬಂಧನೆಗಳ ಅಡಿಯಲ್ಲಿ ಇಡಿ ಅರೋರಾ ಮತ್ತು ಅವರ ಸಂಬಂಧಿತ ಘಟಕಗಳ ಮೇಲೆ ದಾಳಿ ನಡೆಸಿತ್ತು.62 ವರ್ಷದ ಅರೋರಾ, ಲುಧಿಯಾನ ಪಶ್ಚಿಮ ವಿಧಾನಸಭಾ ಕ್ಷೇತ್ರದ ಆಮ್ ಆದ್ಮಿ ಪಕ್ಷದ (ಎಎಪಿ) ಶಾಸಕರಾಗಿದ್ದಾರೆ. ಪಂಜಾಬ್ ಮುಖ್ಯಮಂತ್ರಿ ಭಗವಂತ್ ಮಾನ್ ಈ ಕ್ರಮಕ್ಕೆ ಪ್ರತಿಕ್ರಿಯಿಸಿ, ಪಂಜಾಬ್ ಮೋದಿಯ ತಂತ್ರಗಳಿಗೆ ಎಂದಿಗೂ ತಲೆಬಾಗುವುದಿಲ್ಲ ಎಂದು ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ. ಇಡಿ-ಬಿಜೆಪಿಯ ಈ ಅನೈತಿಕ ಮೈತ್ರಿಯ ಅಂತ್ಯ ಪಂಜಾಬ್‌ನಿಂದ ಆರಂಭವಾಗಲಿದೆ ಎಂದು ಅವರು ತಮ್ಮ ಪೋಸ್ಟ್‌ನಲ್ಲಿ ಹೇಳಿದ್ದಾರೆ. ಇಡಿ ಪ್ರಕಾರ, ಇತ್ತೀಚಿನ ತನಿಖೆ (ಪಿಎಂಎಲ್ಎ ಅಡಿಯಲ್ಲಿ) 100 ಕೋಟಿ ರೂ.ಗಳಿಗಿಂತ ಹೆಚ್ಚಿನ ಮೌಲ್ಯದ ಮೊಬೈಲ್ ಫೋನ್‌ಗಳ ನಕಲಿ ಜಿಎಸ್‌ಟಿ ಖರೀದಿಗಳು ಮತ್ತು ನಂತರದ ರೌಂಡ್ ಟ್ರಿಪ್‌ಗೆ ದುಬೈನಿಂದ ಭಾರತಕ್ಕೆ ಅಕ್ರಮ ಹಣ ರಫ್ತುಗಳಿಗೆ ಸಂಬಂಧಿಸಿದೆ.

ಇರಾನ್ ಪಾಲಿಗೆ ಆರ್ಥಿಕ ರಕ್ಷಾಬಂಧನದಂತಿದ್ದು, ಶೇ.90ರಷ್ಟು ತೈಲವನ್ನು ಅಲ್ಲಿಂದಲೇ ತ್ವಾದಿಸಲಾಗುತ್ತದೆ

# ಹೊರ್ಮುಜ್ ಬಿಕ್ಕಟ್ಟು: ಖಾರ್ಗ್ ದ್ವೀಪದಲ್ಲಿ ತೈಲ ಸೋರಿಕೆ



ಇರಾನ್‌ನ ಆರ್ಥಿಕ ಬೆನ್ನೆಲುಬು

**ಟೆಹ್ರಾನ್:** ಮಧ್ಯಪ್ರಾಚ್ಯದಲ್ಲಿ ಅಮೆರಿಕಾ-ಇರಾನ್ ನಡುವೆ ಹೊರ್ಮುಜ್ ಜಲಸಂಧಿಯಲ್ಲಿನ ಬಿಕ್ಕಟ್ಟಿನ ನಡುವೆ ಪ್ರಮುಖ ಕೇಂದ್ರಬಿಂದುವಾಗಿ ಹೊರ ಹೊಮ್ಮಿದ್ದ ಇರಾನ್‌ನ ಆರ್ಥಿಕ ಬೆನ್ನೆಲುಬು ಎಂದೇ ಕರೆಯಲಾಗುತ್ತಿದ್ದ ತೈಲ ನಿಕ್ಷೇಪ ಖಾರ್ಗ್ ದ್ವೀಪದ ಸುತ್ತಲೂ ತೈಲ ಸೋರಿಕೆಯಾಗಿರುವ ರೀತಿಯಲ್ಲಿ ನೀರಿನ ಮೇಲೆ ಪದರದ ದೃಶ್ಯಗಳು ಸಾಟೆಲೈಟ್‌ನಲ್ಲಿ ಸೆರೆಯಾಗಿದೆ.

**3,000 ಬ್ಯಾರೆಲ್‌ಗಳಿಗೂ ಹೆಚ್ಚಿರಬಹುದು**

ಇರಾನ್ ತೈಲ ರಫ್ತಿನ ಪ್ರಮುಖ ಟರ್ಮಿನಲ್ ಆಗಿದ್ದು, ಹೊರ್ಮುಜ್ ಜಲಸಂಧಿಯ ಕರಾವಳಿ ಸಮೀಪದಲ್ಲಿರುವ ತೈಲ ಸಮೃದ್ಧ ಖಾರ್ಗ್ ದ್ವೀಪದ ಸುತ್ತಲೂ ಸುಮಾರು ತೈಲ ಸೋರಿಕೆಯಾಗಿದ್ದು, ಇದರ ಪ್ರಮಾಣ 3,000 ಬ್ಯಾರೆಲ್‌ಗಳಿಗೂ ಹೆಚ್ಚಿರಬಹುದು ಇದು ಪಶ್ಚಿಮ ಕರಾವಳಿಯಲ್ಲಿ ಸುಮಾರು 20 ಚದರ ಮೈಲಿಗಿಂತಲೂ ಹೆಚ್ಚು ಪ್ರದೇಶವನ್ನು ಆವರಿಸಿದ್ದು, ಸದ್ಯ ದಕ್ಷಿಣದ ಸೌದಿಯ ಜಲಮಾರ್ಗದತ್ತ ಹರಡುತ್ತಿದೆ ಎಂದು ತೈಲ ಸೋರಿಕೆಯನ್ನು ಮೇಲ್ವಿಚಾರಣೆ ಮಾಡುವ ಆರ್ಬಿಟಲ್ EOS ಎಂಬ ಸಂಸ್ಥೆ ನ್ಯೂಯಾರ್ಕ್ ಟೈಮ್ಸ್ ಸುದ್ದಿ ಸಂಸ್ಥೆಗೆ ತಿಳಿಸಿದೆ.

ಆದಾಗ್ಯೂ, ಈ ಸೋರಿಕೆಯ ಮೂಲ ಹಾಗೂ ಸೋರಿಕೆಗೆ ಇರುವ ಸಂಭಾವ್ಯ ಕಾರಣ ಈವರೆಗೂ ಸ್ಪಷ್ಟವಾಗಿ ತಿಳಿದುಬಂದಿಲ್ಲ. ಸಾಟೆಲೈಟ್‌ನಲ್ಲಿ ಸೆರೆಯಾದ ಯುರೋಪಿಯನ್ ಒಕ್ಕೂಟದ ಕೋಪರ್ನಿಕಸ್ ಸೆಂಟಿನೆಲ್-1, ಸೆಂಟಿನೆಲ್-2 ಮತ್ತು ಸೆಂಟಿನೆಲ್-3 ಉಪಗ್ರಹಗಳು ಮೇ 6 ಮತ್ತು ಮೇ 8 ರ ನಡುವೆ ಸೆರೆಹಿಡಿದ ಚಿತ್ರಗಳು ಇರಾನ್‌ನ ಪ್ರಮುಖ ತೈಲ ರಫ್ತು ಕೇಂದ್ರವಾದ ಖಾರ್ಗ್ ದ್ವೀಪದ ಪಶ್ಚಿಮಕ್ಕೆ ನೀರಿನಾದ್ಯಂತ ಹರಡಿರುವ ದೊಡ್ಡ ಬೂದು ಮತ್ತು ಬಿಳಿ ಬಣ್ಣದ ನುಣುಪನ್ನು ತೋರಿಸಿವೆ. ಈ ಕುರಿತು ಸಂಘರ್ಷ ಮತ್ತು ಪರಿಸರ ವೀಕ್ಷಣಾಲಯದ ಸಂಶೋಧಕ ಲಿಯಾನ್ ಮೋರ್ಲ್ಯಾಂಡ್, ಸಾಟಲೈಟ್‌ನಲ್ಲಿ ಕಂಡು ಬಂದ ಈ ಪದರವು ದೃಷ್ಟಿಗೋಚರವಾಗಿ ತೈಲದೊಂದಿಗೆ ಹೊಂದಿಕೆಯಾಗುತ್ತಿದೆ ಎಂದಿದ್ದಾರೆ. ಇನ್ನು, ಹವಾಮಾನ ಮತ್ತು ಸರಕುಗಳಲ್ಲಿ ಪರಿಣಿತಿ ಹೊಂದಿರುವ ಸಲಹಾ ಡೇಟಾ ಡೆಸ್ಕ್‌ನ ಸಹ- ಸಂಸ್ಥಾಪಕ ಲೂಯಿಸ್ ಗೊಡ್ಡಾರ್ಡ್ ಕೂಡ ಉಪಗ್ರಹ ಚಿತ್ರಣವು ತೈಲ ಪದರವನ್ನು ತೋರಿಸುತ್ತಿದ್ದು, ಇದು ಸುಮಾರು 70 ದಿನಗಳ ಹಿಂದೆ ಇರಾನ್ ವಿರುದ್ಧ ಅಮೆರಿಕಾ-ಇಸ್ರೇಲ್ ಯುದ್ಧ ಪ್ರಾರಂಭವಾದ ನಂತರ ಇದು ಅಂತಹ ದೊಡ್ಡ ಘಟನೆಯಾಗಿರಬಹುದು ಎಂದು ವಿಶ್ಲೇಷಿಸಿದ್ದಾರೆ.

ಆದರೆ, ಈ ಕುರಿತು ಅಮೆರಿಕಾದಿಂದಾಗಲಿ ಅಥವಾ ಇರಾನ್‌ನ ಆಡಳಿತದಿಂದಾಗಲಿ ಯಾವುದೇ ಅಧಿಕೃತ ಮಾಹಿತಿ ಲಭ್ಯವಾಗಿಲ್ಲ. ಇನ್ನು, ಅಮೆರಿಕಾ-ಇರಾನ್ ನಡುವಿನ ಯುದ್ಧದ ಭಾಗವಾಗಿ ಖಾರ್ಗ್ ದ್ವೀಪದಲ್ಲಿನ ಇರಾನ್‌ನ ಮಿಲಿಟರಿ ನೆಲೆಗಳನ್ನು ಧ್ವಂಸಗೊಳಿಸಿದ ಬಳಿಕ ಅಮೆರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಖಾರ್ಗ್ ನಲ್ಲಿರುವ ತೈಲ ಘಟಕಗಳನ್ನು ಧ್ವಂಸಗೊಳಿಸುವುದಾಗಿ ಎಚ್ಚರಿಕೆ ನೀಡಿದ್ದರು.

ಆದರೆ, ಇದು ನಡೆಯದೇ ಇದ್ದಾಗಲೂ ಇದಾದ ಬಳಿಕ ಇತ್ತೀಚೆಗೆ ಅಮೆರಿಕಾದ ಖಜಾನೆ ಕಾರ್ಯದರ್ಶಿ ಸ್ಕಾಟ್ ಬೆಸೆಂಟ್, ಖಾರ್ಗ್ ದ್ವೀಪದಲ್ಲಿನ ಸಂಗ್ರಹಣಾ ಸಾಮರ್ಥ್ಯವು ಕೆಲವೇ ದಿನಗಳಲ್ಲಿ ತುಂಬಲಿದ್ದು, ಪ್ರಸ್ತುತವಿರುವ ನಿರ್ಬಂಧಗಳ ನಡುವೆ ಇರಾನ್ ತನ್ನ ತೈಲ ಉತ್ಪಾದನೆಯನ್ನು ಕಡಿಮೆ ಮಾಡುವ ಒತ್ತಡ ಜಾಸ್ತಿಯಾಗಲಿದ್ದು, ಇದು ತೈಲ ವಲಯದ ಮೇಲೆ ಶಾಶ್ವತ ಹಾನಿಯನ್ನುಂಟುಮಾಡುವ ಸಾಧ್ಯತೆಯಿದೆ ಎಂದು ಎಚ್ಚರಿಕೆ ನೀಡಿದ ಕೆಲ ದಿನಗಳಲ್ಲೇ ನಡೆದಿದೆ.

**ಇರಾನ್ ಆರ್ಥಿಕ ಜೀವನಾಡಿಗೆ ಕಾದಿದ್ಯಾ ಅಪಾಯ?**

**ಖಾರ್ಗ್ ದ್ವೀಪವು ಇರಾನ್ ಪಾಲಿಗೆ ಆರ್ಥಿಕ ರಕ್ಷಾಬಂಧನದಂತಿದ್ದು, ಇರಾನ್ ಶೇ.90ರಷ್ಟು ತೈಲವನ್ನು ಅಲ್ಲಿಂದಲೇ ಉತ್ಪಾದಿಸಲಾಗುತ್ತದೆ. ಸಾಮನ್ಯವಾಗಿ ಈ ದ್ವೀಪದಿಂದ ಇರಾನ್ ಪ್ರತಿದಿನ 1.5 ಮಿಲಿಯನ್‌ನಿಂದ 2 ಮಿಲಿಯನ್ ಬ್ಯಾರೆಲ್‌ಗಳ ತೈಲ ರಫ್ತು ಮಾಡುತ್ತಾ ವಾರ್ಷಿಕವಾಗಿ ಸುಮಾರು 950 ಮಿಲಿಯನ್ ಬ್ಯಾರೆಲ್ ತೈಲವನ್ನು ನಿರ್ವಹಿಸುತ್ತಿತ್ತು. ಆದರೆ, ಯುದ್ಧದಿಂದಾಗಿ ಹೊರ್ಮುಜ್ ಜಲಸಂಧಿಯಲ್ಲಿ ಅನಿಶ್ಚಿತತೆ, ಇರಾನ್ ಬಂದರುಗಳು ಹಾಗೂ ಜಲಸಂಧಿಯಲ್ಲಿ ಅಮೆರಿಕಾದ ದಿಗ್ಬಂಧನದಿಂದಾಗಿ ಈ ರಫ್ತಿನಲ್ಲಿ ವ್ಯತ್ಯಯವಾಗಿದೆ. ಇದರ ಜೊತೆಗೆ ಇದೀಗ ದ್ವೀಪದಲ್ಲಿ ತೈಲ ಸೋರಿಕೆಯಾಗಿರುವುದಾಗಿ ಹೊರಬಿದ್ದಿದ್ದು, ಇದು ಪ್ರಾದೇಶಿಕವಾಗಿ ಅಪಾಯವನ್ನುಂಟು ಮಾಡಬಹುದು ಎಂದು ವಿಶ್ಲೇಷಿಸಲಾಗುತ್ತಿದೆ.**

## ಸಿಡಿಎಸ್ ಆಗಿ ಲೆಫ್ಟಿನೆಂಟ್ ಜನರಲ್ ಎನ್.ಎಸ್. ರಾಜಾ ಸುಬ್ರಮಣಿ ನೇಮಕ



**ನವದೆಹಲಿ:** ಭಾರತದ ಹೊಸ ರಕ್ಷಣಾ ಸಿಬ್ಬಂದಿ ಮುಖ್ಯಸ್ಥ (ಸಿಡಿಎಸ್)ರಾಗಿ ಲೆಫ್ಟಿನೆಂಟ್ ಜನರಲ್ ಎನ್.ಎಸ್. ರಾಜಾ ಸುಬ್ರಮಣಿ ನೇಮಕವಾಗಲಿದ್ದಾರೆ. ಮೇ 30 ರಂದು ಕೊನೆಗೊಳ್ಳಲಿರುವ ಜನರಲ್ ಅನಿಲ್ ಚೌಹಾಣ್ ಅವರ ನಂತರ ಅವರು ನೇಮಕಗೊಳ್ಳಲಿದ್ದಾರೆ. ತಮಿಳುನಾಡಿನಲ್ಲಿ ಹೆಲಿಕಾಪ್ಟರ್ ಅಪಘಾತದಲ್ಲಿ ಮೊದಲ ಸಿಡಿಎಸ್ ಜನರಲ್ ಬಿಪಿನ್ ರಾವತ್ ನಿಧನರಾದ ಒಂಬತ್ತು ತಿಂಗಳ ನಂತರ, ಪೂರ್ವ ಸೇನಾ ಮಾಜಿ ಕಮಾಂಡರ್ ಜನರಲ್ ಚೌಹಾಣ್ ಸೆಪ್ಟೆಂಬರ್ 2022 ರಲ್ಲಿ ದೇಶದ ಹಿರಿಯ ಮಿಲಿಟರಿ ಕಮಾಂಡರ್ ಆಗಿ ಅಧಿಕಾರವಹಿಸಿಕೊಂಡಿದ್ದರು.

ಸರ್ಕಾರವು ಲೆಫ್ಟಿನೆಂಟ್ ಜನರಲ್ ಎನ್.ಎಸ್. ರಾಜಾ ಸುಬ್ರಮಣಿ (ನಿವೃತ್ತ) ಅವರನ್ನು ರಕ್ಷಣಾ ಸಿಬ್ಬಂದಿ ಮುಖ್ಯಸ್ಥರನ್ನಾಗಿ ನೇಮಿಸಿದೆ, ಅವರು ಮಿಲಿಟರಿ ವ್ಯವಹಾರಗಳ ಇಲಾಖೆಯ ಕಾರ್ಯದರ್ಶಿಯಾಗಿಯೂ ಕಾರ್ಯನಿರ್ವಹಿಸಲಿದ್ದಾರೆ ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ. ಲೆಫ್ಟಿನೆಂಟ್ ಜನರಲ್ ಸುಬ್ರಮಣಿ ಪ್ರಸ್ತುತ ರಾಷ್ಟ್ರೀಯ ಭದ್ರತಾ ಮಂಡಳಿ ಸಚಿವಾಲಯದ ಮಿಲಿಟರಿ ಸಲಹೆಗಾರರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಅದಕ್ಕೂ ಮೊದಲು, ಅವರು ಜುಲೈ 1, 2024 ರಿಂದ ಜುಲೈ 31, 2025 ರವರೆಗೆ ಸೇನಾ ಸಿಬ್ಬಂದಿಯ ಉಪ ಮುಖ್ಯಸ್ಥರಾಗಿದ್ದರು ಮತ್ತು ಮಾರ್ಚ್ 2023 ರಿಂದ ಜೂನ್ 2024 ರವರೆಗೆ ಸೆಂಟ್ರಲ್ ಕಮಾಂಡ್‌ನ ಜನರಲ್ ಆಫೀಸರ್ ಕಮಾಂಡಿಂಗ್-ಇನ್-ಚೀಫ್ ಆಗಿದ್ದರು. ರಕ್ಷಣಾ ಸಿಬ್ಬಂದಿಯ ಮುಖ್ಯಸ್ಥರಾಗಿ, ಲೆಫ್ಟಿನೆಂಟ್ ಜನರಲ್ ಸುಬ್ರಮಣಿ ಅವರ ಪ್ರಾಥಮಿಕ ಕಾರ್ಯವೆಂದರೆ ಸಮಗ್ರ ಮಿಲಿಟರಿ ಕಮಾಂಡ್‌ಗಳನ್ನು ಹೊರತರುವ ಮೂಲಕ ತ್ರಿ-ಸೇವೆಗಳ ಸಿನರ್ಜಿಯನ್ನು ತರಲು ರಂಗಭೂಮಿ ಮಾದರಿಯನ್ನು ಕಾರ್ಯಗತಗೊಳಿಸುವುದು.ಅಧಿಕಾರಿ ರಾಷ್ಟ್ರೀಯ ರಕ್ಷಣಾ ಅಕಾಡೆಮಿ ಮತ್ತು ಭಾರತೀಯ ಮಿಲಿಟರಿ ಅಕಾಡೆಮಿಯ ಪದವೀಧರರಾಗಿದ್ದಾರೆ. ಅವರನ್ನು ಡಿಸೆಂಬರ್ 14, 1985 ರಂದು ಗರ್ವಾಲ್ ರೈಫಲ್ಸ್‌ನ ಎಂಟನೇ ಬೆಟಾಲಿಯನ್‌ಗೆ ನಿಯೋಜಿಸಲಾಯಿತು.

ಲೆಫ್ಟಿನೆಂಟ್ ಜನರಲ್ ಸುಬ್ರಮಣಿ ಬ್ರಾಕ್ನೆಲ್ (ಯುಕೆ) ನ ಜಂಟಿ ಸೇವೆಗಳ ಕಮಾಂಡ್ ಸ್ಟಾಫ್ ಕಾಲೇಜು ಮತ್ತು ನವದೆಹಲಿಯ ರಾಷ್ಟ್ರೀಯ ರಕ್ಷಣಾ ಕಾಲೇಜಿನ ಹಳೆಯ ವಿದ್ಯಾರ್ಥಿ. ಅವರು ಲಂಡನ್‌ನ ಕಿಂಗ್ಸ್ ಕಾಲೇಜಿನಿಂದ ಕಲಾ ಸ್ನಾತಕೋತ್ತರ ಪದವಿ ಮತ್ತು ಮದ್ರಾಸ್ ವಿಶ್ವವಿದ್ಯಾಲಯದಿಂದ ರಕ್ಷಣಾ ಅಧ್ಯಯನದಲ್ಲಿ ಎಂಫಿಲ್ ಪಡೆದಿದ್ದಾರೆ. 40 ವರ್ಷಗಳ ಕಾಲ ತಮ್ಮ ಸುಪ್ರಸಿದ್ಧ ವೃತ್ತಿಜೀವನದಲ್ಲಿ, ಲೆಫ್ಟಿನೆಂಟ್ ಜನರಲ್ ಸುಬ್ರಮಣಿ ವ್ಯಾಪಕ ಶ್ರೇಣಿಯ ಸಂಘರ್ಷ ಮತ್ತು ಭೂಪ್ರದೇಶ ಪ್ರೊಫೈಲ್‌ಗಳಲ್ಲಿ ಸೇವೆ ಸಲ್ಲಿಸಿದ್ದಾರೆ ಮತ್ತು ಹಲವಾರು ಕಮಾಂಡ್, ಸ್ಟಾಫ್ ಮತ್ತು ಬೋಧನಾ ನೇಮಕಾತಿಗಳನ್ನು ಪಡೆದುಕೊಂಡಿದ್ದಾರೆ.


## ಅಮೆರಿಕದ ಶ್ವೇತಭವನದಲ್ಲಿ ಮೊಳಗಿದ ವೈದಿಕ ಪಠಣ




**ವಾಷಿಂಗ್ಟನ್:** ಸಾರ್ವತ್ರಿಕ ಶಾಂತಿಗಾಗಿ ಅಮೆರಿಕದ ಶ್ವೇತ ಭವನದಲ್ಲಿ ವೈದಿಕ ಪ್ರಾರ್ಥನೆ ಹಾಗೂ ಪಠಣ ಮೊಳಗಿತು.ರಾಷ್ಟ್ರೀಯ ಪ್ರಾರ್ಥನಾ ದಿನದಂದು ಅಮೆರಿಕದ ದೇವಾಲಯವೊಂದರ ಸ್ವಯಂಸೇವಕರೊಬ್ಬರು ಶ್ವೇತಭವನದ ಸಭಾಂಗಣದಲ್ಲಿ ಶಾಂತಿಗಾಗಿ ವೈದಿಕ ಪ್ರಾರ್ಥನೆಯ ಪಠಣ ಮಾಡಿದರು.

ನ್ಯೂಜೆರ್ಸಿಯ ರಾಬಿನ್ ಸವಿಲ್ಲೆಯಲ್ಲಿರುವ ಬೋಚಸನ್ವಾಸಿ ಅಕ್ಷರ ಪುರುಷೋತ್ತಮ ಸ್ವಾಮಿನಾರಾಯಣ ಸಂಸ್ಥೆ (ಬಿಎಪಿಎಸ್) ದೇವಾಲಯದ ಸ್ವಯಂಸೇವಕ ಶ್ವೇತಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ರಾಷ್ಟ್ರೀಯ ಪ್ರಾರ್ಥನಾ ದಿನದಂದು ಭಾಗವಹಿಸಿದ್ದ ಎಲ್ಲರೂ ಯಜುರ್ವೇದದ ಶಾಂತಿ ಪಾಠದ ಶ್ಲೋಕಗಳನ್ನು ಪಠಿಸುತ್ತಾ, ಸಾರ್ವತ್ರಿಕ ಶಾಂತಿಯನ್ನು ಆಹ್ವಾನಿಸುತ್ತಾ ತಮ್ಮ ಕಣ್ಣುಗಳನ್ನು ಮುಚ್ಚಿ ಕೈಗಳನ್ನು ಮಡಚಿಕೊಳ್ಳುವಂತೆ ಸ್ವಯಂಸೇವಕ ಎಲ್ಲರಿಗೂ ವಿನಂತಿಸಿದರು. ಶಾಂತಿ ಪಾಠವು ಸ್ವರ್ಗ, ಆಕಾಶ, ಭೂಮಿ, ನೀರು, ಸಸ್ಯಗಳು, ಮರಗಳು, ದೇವರುಗಳು ಮತ್ತು ತಮ್ಮೊಳಗೆ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಶಾಂತಿಗಾಗಿ ಕರೆ ನೀಡುತ್ತದೆ. ಇಡೀ ಬಿಎಪಿಎಸ್ ಸಾರ್ವಭೌಮ ಫೆಲೋಶಿಪ್ ಪರವಾಗಿ, ನ್ಯೂಜೆರ್ಸಿಯ ರಾಬಿನ್ಸ್ ವಿಲ್ಲೆಯಲ್ಲಿರುವ ಸ್ವಾಮಿನಾರಾಯಣ ಉಕ್ಷಾರ ಕೌಂಟಿ ಮತ್ತು ನಮ್ಮ ಗುರು ಹರಿ ಮೋಹನ್ ಸ್ವಾಮಿ ಮಹಾರಾಜ್, ಈ ಅವಕಾಶಕ್ಕಾಗಿ ನಾವು ನಿಮಗೆ ಧನ್ಯವಾದಗಳು ಎಂದು ಸ್ವಯಂಸೇವಕ ಹೇಳಿದರು. 1952 ರಲ್ಲಿ ಯುಎಸ್ ಕಾಂಗ್ರೆಸ್ ಸ್ಥಾಪಿಸಿದ ಸಾರ್ವಜನಿಕ ಕಾನೂನಿನ ಪ್ರಕಾರ, ಮೇ ತಿಂಗಳ ಮೊದಲ ಗುರುವಾರದಂದು ಯುನೈಟೆಡ್ ಸ್ಟೇಟ್ಸ್‌ನಾದ್ಯಂತ ರಾಷ್ಟ್ರೀಯ ಪ್ರಾರ್ಥನಾ ದಿನವನ್ನು ಆಚರಿಸಲಾಗುತ್ತದೆ. ನಿನ್ನೆಯ ರಾಷ್ಟ್ರೀಯ ಪ್ರಾರ್ಥನಾ ದಿನದಂದು ವೇದಿಕ್ ಚಾಂಟ್‌ನಲ್ಲಿ ಭಾಗವಹಿಸಲು ಗೌರವ ಸಿಕ್ಕಿತು, ಅಲ್ಲಿ ಸ್ವಯಂಸೇವಕರೊಬ್ಬರು ಶಾಂತಿ ಮತ್ತು ಏಕತೆಗಾಗಿ ಹಿಂದೂ ಪ್ರಾರ್ಥನೆಗಳನ್ನು ಸಲ್ಲಿಸಿದರು.

## ಡಾಲರ್ ಎದುರು ರೂಪಾಯಿ ಮೌಲ್ಯ ಏರಿಕೆ




**ನವದೆಹಲಿ:** ಮೇ ತಿಂಗಳಲ್ಲಿ, ಡಾಲರ್ ವಿರುದ್ಧ ರೂಪಾಯಿ ಮೌಲ್ಯ ಗಣನೀಯವಾಗಿ ಬಲಗೊಂಡಿದೆ. ಕೇವಲ ಐದು ವಹಿವಾಟು ದಿನಗಳಲ್ಲಿ, ರೂಪಾಯಿ ಮೌಲ್ಯವು ಶೇಕಡಾ 1.25 ಕ್ಕಿಂತ ಹೆಚ್ಚು ಹೆಚ್ಚಾಗಿದೆ. ಪಶ್ಚಿಮ ಏಷ್ಯಾದಲ್ಲಿ ನಿರಂತರವಾಗಿ ಬದಲಾಗುತ್ತಿರುವ ಪರಿಸ್ಥಿತಿಯ ಮಧ್ಯೆ, ಕದನ ವಿರಾಮ ಘೋಷಣೆ ಮತ್ತು ಅಮೆರಿಕ ಮತ್ತು ಇರಾನ್ ನಡುವೆ ಉದ್ವಿಗ್ನತೆ ಹೆಚ್ಚುತ್ತಿರುವ ನಡುವೆ ಇದು ಬಂದಿದೆ. ಈ ಪರಿಸ್ಥಿತಿಯಿಂದಾಗಿ ಕಚ್ಚಾ ತೈಲ ಬೆಲೆಗಳು ಸಹ ಏರಿಳಿತಗೊಂಡಿವೆ. ಡಾಲರ್ ವಿರುದ್ಧ ರೂಪಾಯಿ ಮೌಲ್ಯವು 71 ಪೈಸೆ ಏರಿಕೆ ಕಂಡಿದ್ದು, ಕಚ್ಚಾ ತೈಲ ಬೆಲೆಗಳು ಬ್ಯಾರೆಲ್‌ಗೆ 100 ಕ್ಕಿಂತ ಹೆಚ್ಚಿವೆ.

ಈ ತಿಂಗಳು, ಡಾಲರ್ ಎದುರು ರೂಪಾಯಿ ಮೌಲ್ಯ 1.33 ರೂಪಾಯಿಗಳಷ್ಟು ಏರಿಕೆ ಕಂಡಿದೆ. ಕಳೆದ ವಾರದ ಕೊನೆಯ ವಹಿವಾಟಿನ ದಿನದಂದು, ಡಾಲರ್ ಎದುರು ರೂಪಾಯಿ ಮೌಲ್ಯ 94.84 ಕ್ಕೆ ಮುಕ್ತಾಯಗೊಂಡಿದ್ದರೆ, ಮೇ 8 ರಂದು ಅದು 93.51 ಕ್ಕೆ ಇಳಿದಿದೆ. ಇದರರ್ಥ ರೂಪಾಯಿ ಮೌಲ್ಯ 1.40 ಪ್ರತಿಶತದಷ್ಟು ಏರಿಕೆ ಕಂಡಿದೆ. ಈ ಹೆಚ್ಚಳಕ್ಕೆ ಪ್ರಮುಖ ಕಾರಣವೆಂದರೆ ಕಚ್ಚಾ ತೈಲ ಬೆಲೆಗಳಲ್ಲಿನ ಕುಸಿತ ಮತ್ತು ಆರ್‌ಬಿಐ ಹಸ್ತಕ್ಷೇಪ ಎನ್ನಲಾಗಿದೆ.

ಶುಕ್ರವಾರ, ರೂಪಾಯಿ ಮೌಲ್ಯವು 71 ಪೈಸೆ ಏರಿಕೆಯಾಗಿ 93.51 ಕ್ಕೆ ಮುಕ್ತಾಯವಾಗಿದೆ. ಜಾಗತಿಕ ಮಾರುಕಟ್ಟೆಗಳಲ್ಲಿನ ಅಪಾಯದ ಹಿಂಜರಿಕೆ ಮತ್ತು ದುರ್ಬಲ ದೇಶೀಯ ಷೇರುಪೇಟೆಗಳು ರೂಪಾಯಿಯ ಮೇಲೆ ಪರಿಣಾಮ ಬೀರಿವೆ ಎಂದು ತಜ್ಞರು ನಂಬಿದ್ದಾರೆ. ಪಶ್ಚಿಮ ಏಷ್ಯಾದಲ್ಲಿ ಹೊಸ ಭೌಗೋಳಿಕ ರಾಜಕೀಯ ಉದ್ವಿಗ್ನತೆಗಳ ನಡುವೆ ಸ್ವಲ್ಪ ಇಳಿಕೆಯಾಗುವ ನಿರೀಕ್ಷೆಯಿದೆ.

## ತೆಲಂಗಾಣದಲ್ಲಿ ಅಲ್ಪಸಂಖ್ಯಾತರಿಗೆ ವಿಶೇಷ ಪದವಿ ಕಾಲೇಜುಗಳು



ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ

**ಹೈದರಾಬಾದ್:** ತೆಲಂಗಾಣ ಮುಖ್ಯಮಂತ್ರಿ ಎ. ರೇವಂತ್ ರೆಡ್ಡಿ ಅವರು 10 ಜಿಲ್ಲೆಗಳ ಪ್ರಧಾನ ಕಚೇರಿಯಲ್ಲಿ ಅಲ್ಪಸಂಖ್ಯಾತರಿಗಾಗಿ ವಿಶೇಷ ಪದವಿ ಕಾಲೇಜುಗಳನ್ನು ಸ್ಥಾಪಿಸುವುದಾಗಿ ಘೋಷಿಸಿದ್ದಾರೆ. ಅವಿಭಜಿತ ಆಂಧ್ರಪ್ರದೇಶದ ಅವಧಿಯಲ್ಲಿ ತೆಲಂಗಾಣದಲ್ಲಿನ 10 ಜಿಲ್ಲೆಗಳನ್ನು ಹಿಂದಿನ ಬಿಆರ್‌ಎಸ್ ಆಡಳಿತದ ಅವಧಿಯಲ್ಲಿ 33 ಜಿಲ್ಲೆಗಳಾಗಿ ಮರುಸಂಘಟಿಸಲಾಯಿತು.

ಅಲ್ಪಸಂಖ್ಯಾತರ ಕಲ್ಯಾಣದ ಕುರಿತು ಸಭೆ ನಡೆಸಿದ ರೆಡ್ಡಿ, ಪ್ರಸ್ತಾವಿತ ಕಾಲೇಜುಗಳು ವಿದ್ಯಾರ್ಥಿಗಳಿಗೆ ಕೌಶಲ್ಯ ಅಭಿವೃದ್ಧಿ ಮತ್ತು ಎಐ (ಕೃತಕ ಬುದ್ಧಿಮತ್ತೆ ತರಬೇತಿಯೊಂದಿಗೆ ಸಜ್ಜುಗೊಳ್ಳಲಿವೆ ಎಂದು ಹೇಳಿದರು. ಸಾಂಪ್ರದಾಯಿಕ ಕೋರ್ಸ್ ಗಳನ್ನು ನೀಡುವ ಬದಲು ಪ್ರಾಯೋಗಿಕ ತರಬೇತಿಯನ್ನು ನೀಡಬೇಕು ಮತ್ತು ವಿದ್ಯಾರ್ಥಿಗಳು ಉದ್ಯೋಗ ಪಡೆಯಲು ನೇರವಾಗಿ ಪ್ರಯೋಜನ ಪಡೆಯಬೇಕು ಎಂದು ಮುಖ್ಯಮಂತ್ರಿ ಒತ್ತಿ ಹೇಳಿದರು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

ಬಿಸಿ, ಎಸ್‌ಸಿ ಮತ್ತು ಎಸ್‌ಟಿ ಸಮುದಾಯಗಳ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರಸ್ತುತ ನೀಡಲಾಗುತ್ತಿರುವಂತೆಯೇ, ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನವನ್ನು ವಿಸ್ತರಿಸಬೇಕೆಂದು ಮುಖ್ಯಮಂತ್ರಿ ಸೂಚಿಸಿದರು, ಈ ಉದ್ದೇಶಕ್ಕಾಗಿ ವಿಶೇಷವಾಗಿ ಸಿದ್ಧಪಡಿಸಲಾದ ಮೀಸಲಾದ ಕಾರ್ಯಕ್ರಮದೊಂದಿಗೆ.

ಗ್ರೂಪ್-1, ಗ್ರೂಪ್-2 ಮತ್ತು ಗ್ರೂಪ್-3 ಸೇವೆಗಳಿಗೆ ಆಯ್ಕೆಯಾದ ಅಲ್ಪಸಂಖ್ಯಾತ ಸಮುದಾಯಗಳಿಂದ ಆಸಕ್ತ ಅಭ್ಯರ್ಥಿಗಳನ್ನು ಗುರುತಿಸಿ, ಅವರಿಗೆ ಅಲ್ಪಸಂಖ್ಯಾತ ಕಲ್ಯಾಣ ಇಲಾಖೆಯೊಳಗೆ ಜವಾಬ್ದಾರಿಗಳನ್ನುವಹಿಸಿ, ಇಲಾಖೆಯು ಕೈಗೊಂಡ ಎಲ್ಲಾ ಕಾರ್ಯಕ್ರಮಗಳು ಮತ್ತು ಉಪಕ್ರಮಗಳ ಸಮಗ್ರ ತಿಳುವಳಿಕೆಯನ್ನು ಪಡೆಯಲು ಮಾರ್ಗದರ್ಶನ ನೀಡುವಂತೆ ಅವರು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಇಮಾಮ್‌ಗಳು , ಮೌಜಮ್‌ಗಳಿಗೆ ಗೌರವಧನವನ್ನು ನಿಯಮಿತವಾಗಿ , ಸಕಾಲಿಕವಾಗಿ ಬಿಡುಗಡೆ ಮಾಡುವುದನ್ನು ಖಚಿತಪಡಿಸಿಕೊಳ್ಳಲು ಅಧಿಕಾರಿಗಳಿಗೆ ಆದೇಶಿಸಲಾಗಿದೆ ಎಂದು ಅದು ಹೇಳಿದೆ.

ಭೂಮಿ ಲಭ್ಯವಿರುವ ಪ್ರದೇಶಗಳಲ್ಲಿ ಖಬರ್‌ಸ್ತಾನ್‌ಗಳು (ಸಮಾಧಿ ಸ್ಥಳಗಳು)ಗಾಗಿ ಭೂಮಿಯನ್ನು ಹಂಚಿಕೆ ಮಾಡಲಾಗುವುದು ಎಂದು ಮುಖ್ಯಮಂತ್ರಿ ಹೇಳಿದರು. ಮೂಸಿ ಪುನರುಜ್ಜೀವನ ಯೋಜನೆಯ ಭಾಗವಾಗಿ, ದೇವಾಲಯದ ಜೊತೆಗೆ ಮಸೀದಿ, ಚರ್ಚ್ ಮತ್ತು ಗುರುದ್ವಾರ ನಿರ್ಮಾಣವನ್ನು ಕೈಗೊಳ್ಳಲು ಸಿಎಂ ರೆಡ್ಡಿ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು ಎಂದು ಅದು ಹೇಳಿದೆ.

ಈ ರಚನೆಗಳನ್ನು ಆಯಾ ಧಾರ್ಮಿಕ ಸಂಸ್ಕೃತಿಗಳ ಅಧ್ಯಯನಕ್ಕೆ ಅನುಕೂಲವಾಗುವಂತೆ ವಿನ್ಯಾಸಗೊಳಿಸಬೇಕು, ಜೊತೆಗೆ ಭಾರತದ ವಿಶಿಷ್ಟ ಸಾರ ಮತ್ತು ತೆಲಂಗಾಣದ ಗಂಗಾ-ಜಮುನಿ ತೆಹಜೀಬ್ (ಸಂಯೋಜಿತ ಸಂಸ್ಕೃತಿ) ಯನ್ನು ಪ್ರದರ್ಶಿಸಬೇಕು ಎಂದು ಮುಖ್ಯಮಂತ್ರಿ ಒತ್ತಿ ಹೇಳಿದರು ಎಂದು ಪ್ರಕಟಣೆ ತಿಳಿಸಿದೆ.

## ಪ.ಬಂಗಾಳದ ಸಿಎಂ ಆಗಿ ಸುವೇಂದು ಅಧಿಕಾರಿ ಪ್ರಮಾಣ



**ಕೋಲ್ಕತ್ತಾ:** ಬಿಜೆಪಿ ಶಾಸಕಾಂಗ ಪಕ್ಷದ ನಾಯಕ ಸುವೇಂದು ಅಧಿಕಾರಿ ಪಶ್ಚಿಮ ಬಂಗಾಳದ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದರು.ಪ್ರಧಾನಿ ನರೇಂದ್ರ ಮೋದಿ, ಅಮಿತ್ ಶಾ ಮತ್ತಿತರ ಗಣ್ಯರ ಸಮುಖದಲ್ಲಿ ಅಧಿಕಾರಿ ಸಿಎಂ ಆಗಿ ಪ್ರಮಾಣ ವಚನ ಸ್ವೀಕರಿಸುವುದರೊಂದಿಗೆ ಅವರು ಬಂಗಾಳದ ಮೊದಲ ಬಿಜೆಪಿ ಸರ್ಕಾರದ ನೇತೃತ್ವ ವಹಿಸಿಕೊಂಡಿದ್ದಾರೆ.

ಇಲ್ಲಿನ ಬ್ರಿಗೇಡ್ ಪರೇಡ್ ಮೈದಾನದಲ್ಲಿ ನಡೆದ ಭವ್ಯ ಸಮಾರಂಭದಲ್ಲಿ ರಾಜ್ಯಪಾಲ ಆರ್‌ಎನ್ ರವಿ ಅಧಿಕಾರಿಗೆ ಅಧಿಕಾರ ಮತ್ತು ಗೌಪ್ಯತೆಯ ಪ್ರಮಾಣ ವಚನ ಬೋಧಿಸಿದರು. ಸುವೇಂದು ಅಧಿಕಾರಿಯ ಜೊತೆ ಬಿಜೆಪಿಯ ಹಿರಿಯ ಶಾಸಕ ದಿಲೀಪ್ ಘೋಷ್ ಅವರು ಇದೇ ಸಂದರ್ಭದಲ್ಲಿ ಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದರು. ಕೇಂದ್ರ ಸಚಿವರು, ಎನ್‌ಡಿಎ ಆಡಳಿತದ ರಾಜ್ಯಗಳ ಮುಖ್ಯಮಂತ್ರಿಗಳು ಮತ್ತು ಹಿರಿಯ ಬಿಜೆಪಿ ನಾಯಕರು ಈ ಸಮಾರಂಭಕ್ಕೆ ಸಾಕ್ಷಿಯಾಗಿದ್ದರು.294 ಸದಸ್ಯರ ವಿಧಾನಸಭೆಯಲ್ಲಿ ಬಿಜೆಪಿ 207 ಸ್ಥಾನಗಳನ್ನು ಗಳಿಸುವ ಮೂಲಕ ರಾಜ್ಯದಲ್ಲಿ ತೃಣಮೂಲ ಕಾಂಗ್ರೆಸ್‌ನ 15 ವರ್ಷಗಳ ಆಡಳಿತವನ್ನು ಕೊನೆಗೊಳಿಸಿದೆ.

**ಭಾರಿ ಭದ್ರತೆ;** ಪಶ್ಚಿಮ ಬಂಗಾಳದ ಮೊದಲ ಬಿಜೆಪಿ ಸರ್ಕಾರದ ಪ್ರಮಾಣವಚನ ಸಮಾರಂಭದ ಹಿನ್ನೆಲೆಯಲ್ಲಿ ಕೋಲ್ಕತ್ತಾದ ಪ್ರಮುಖ ಸ್ಥಳಗಳಲ್ಲಿ ಭದ್ರತೆಯನ್ನು ಬಿಗಿಗೊಳಿಸಲಾಗಿತ್ತು, ಇದರಲ್ಲಿ ನಿಯೋಜಿತ ಮುಖ್ಯಮಂತ್ರಿ ಸುವೇಂದು ಅಧಿಕಾರಿ ನಿವಾಸ, ಬ್ರಿಗೇಡ್ ಪರೇಡ್ ಮೈದಾನ ಮತ್ತು ಮಾಜಿ ಸಿಎಂ ಮಮತಾ ಬ್ಯಾನರ್ಜಿ ಅವರ ಕಾಲಿಘಾಟ್ ನಿವಾಸ ಮತ್ತಿತರ ಸ್ಥಳಗಳು ಸೇರಿವೆ.

ಅಧಿಕಾರಿಯವರ ಚಿನಾರ್ ಪಾರ್ಕ್ ನಿವಾಸದ ಹೊರಗೆ ಭಾರೀ ಭದ್ರತಾ ನಿಯೋಜನೆ ಕಂಡುಬಂದಿದೆ. ಪ್ರಧಾನಿ ನರೇಂದ್ರ ಮೋದಿ ಸಮಾರಂಭಕ್ಕೆ ಹಾಜರಾಗುವ ಮೊದಲು ಆರ್‌ಸಿಟಿಸಿ ಮೈದಾನದಲ್ಲಿಯೂ ಭದ್ರತಾ ವ್ಯವಸ್ಥೆಗಳನ್ನು ತೀವ್ರಗೊಳಿಸಲಾಗಿದೆ.

## ಹ್ಯಾಂಟ ವೈರಸ್ ಸೋಂಕು: ಪ್ರಯಾಣಿಕರ ಪತ್ತೆಗೆ ಶೋಧ

**ನ್ಯೂಯಾರ್ಕ್:** ಐಷಾರಾಮಿ ಹಡಗಿನಲ್ಲಿ ಕಾಣಿಸಿಕೊಂಡ ಹ್ಯಾಂಟವೈರಸ್ ಸೋಂಕಿನಿಂದ ಮೂರಕ್ಕೂ ಅಧಿಕ ಮಂದಿ ಸಾವನ್ನಪ್ಪಿ ಹಲವರು ಸೋಂಕಿತರಾಗಿರುವ ಹಿನ್ನೆಲೆಯಲ್ಲಿ ಕ್ರೂಸ್ ಹಡಗಿನಲ್ಲಿದ್ದ ಪ್ರಯಾಣಿಕರನ್ನು ಪತ್ತೆಹಚ್ಚಲು ವಿಶ್ವಾದ್ಯಂತ ಶೋಧ ಆರಂಭವಾಗಿದೆ. ಹಡಗಿನಲ್ಲಿ ಜಗತ್ತಿನ 28 ದೇಶಗಳ ಪ್ರವಾಸಿಗರು ಇದ್ದರು ಎನ್ನಲಾಗಿದೆ, ಈ ಹಿನ್ನೆಲೆಯಲ್ಲಿ ಕ್ರೂಸ್ ಹಡಗಿನಲ್ಲಿದ್ದ ಎಲ್ಲಾ ಪ್ರಯಾಣಿಕರನ್ನು ಪತ್ತೆ ಮಾಡಿ ಅವರಿಗೆ ಸೋಂಕಿನ ಲಕ್ಷಣಗಳು ಇವೆಯೇ ಅಥವಾ ಅಧರಿಂದ ಮತ್ತೊಬ್ಬರಿಗೆ ಹರಡದಂತೆ ನೋಡಿಕೊಳ್ಳಲು ವಿಶ್ವ ಆರೋಗ್ಯ ಇಲಾಖೆಯ ಅಧಿಕಾರಿಗಳು ಇನ್ನಿಲ್ಲದ ಪ್ರಯತ್ನ ನಡೆಸಿದ್ದಾರೆ. ಹ್ಯಾಂಟವೈರಸ್ ಹರಡುವ ಮೊದಲು ಕ್ರೂಸ್ ಹಡಗಿನಿಂದ ಇಳಿದ ಡಜನ್ ಗಟ್ಟಲೆ ಜನರನ್ನು ಮತ್ತು ನಂತರ ಅವರೊಂದಿಗೆ ನಿಕಟ ಸಂಪರ್ಕಕ್ಕೆ ಬಂದ ನಂತರ ಮತ್ತು ಹಡಗಿನಲ್ಲಿ ಮಧ್ಯ ಮಧ್ಯೆ ಇಳಿದ ಪ್ರಯಾಣಿಕರನ್ನು ಪತ್ತೆಹಚ್ಚಲು ಪ್ರಪಂಚದಾದ್ಯಂತ ಆರೋಗ್ಯ ಅಧಿಕಾರಿಗಳು ಎಲ್ಲಾ ಪ್ರಯತ್ನ ನಡೆಸಿದ್ದಾರೆ

ಡಚ್ ಹಡಗು ಎಂವಿ ಹೊಂಡಿಯಸ್‌ನಲ್ಲಿ ಹರಡಿದ ನಂತರ ಮೂರು ಸಾವುಗಳು ಸೇರಿದಂತೆ ಐದು ಪ್ರಕರಣಗಳು ಈಗ ದೃಢಪಟ್ಟಿವೆ ಎಂದು ವಿಶ್ವ ಆರೋಗ್ಯ ಸಂಸ್ಥೆ ಹೇಳಿದ್ದು ಇನ್ನಷ್ಟು ಮಂದಿಗೆ ಸೋಂಕು ಹರಡುವುದನ್ನು ತಡೆಗಟ್ಟುವ ನಿಟ್ಟಿನಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಹೇಳಲಾಗಿದೆ

ಹೊಸ ಮಾದರಿಯ ಸೋಂಕು, 6 ವರ್ಷಗಳ ಹಿಂದೆ ಕೋವಿಡ್‌ನಂತಹ ಸಾಂಕ್ರಾಮಿಕ ರೋಗದ ಆರಂಭವಲ್ಲ ಎಂದು ವಿಶ್ವಸಂಸ್ಥೆಯ ಆರೋಗ್ಯ ಸಂಸ್ಥೆ ಹೇಳಿದೆ.

## ಮಿನಿ ನ್ಯೂಸ್

### ದಳಪತಿ ವಿಜಯ್ ಪಟ್ಟಾಭಿಷೇಕಕ್ಕೆ ಬಿಡದ ಗ್ರಹಣ : ಡಿಸಿಎಂ ಸ್ಥಾನಕ್ಕೆ ವಿಸಿಕೆ ಪಟ್ಟು

**ಚೆನ್ನೈ:** ಬೆಂಬಲ ಬೇಕೇ ಹಾಗಾದರೆ ನಮ್ಮ ಪಕ್ಷಕ್ಕೆ ಡಿಸಿಎಂ ಪಟ್ಟ ಬಿಟ್ಟುಕೊಡಿ ಎಂದು ವಿಸಿಕೆ ಪಕ್ಷ ಪಟ್ಟು ಹಿಡಿದಿರುವುದರಿಂದ ತಮಿಳುನಾಡಿನಲ್ಲಿ ದಳಪತಿ ವಿಜಯ್ ಪಟ್ಟಾಭಿಷೇಕಕ್ಕೆ ಮತ್ತೆ ಹಿನ್ನಡೆಯಾಗಿದೆ.

ವಿಜಯ್ ಮತ್ತು ರಾಜ್ಯಪಾಲರ ನಡುವಿನ ಜಿದ್ದಾಜಿದ್ದಿನಿಂದಾಗಿ ತಮಿಳುನಾಡು ರಾಜಕೀಯ ಮತ್ತಷ್ಟು ರೋಚಕ ತಿರುವು ಪಡೆದುಕೊಂಡಿದೆ. ಮೂರನೇ ಬಾರಿಗೆ ರಾಜ್ಯಪಾಲರನ್ನು ಭೇಟಿ ಮಾಡಿದ ವಿಜಯ್, ಸರ್ಕಾರ ರಚನೆಗೆ ಹಕ್ಕು ಮಂಡಿಸಿದ್ದರೂ ಬಹುಮತದ ಮ್ಯಾಜಿಕ್ ನಂಬರ್ ಸಾಬೀತುಪಡಿಸಲೇ ಬೇಕು ಎಂದು ಆರ್ಲೇಕರ್ ಹೇಳಿ ಕಳುಹಿಸಿದ್ದಾರೆ.

ಟಿವಿಕೆ ಅಧ್ಯಕ್ಷ ವಿಜಯ್ ಅವರು ರಾಜಭವನದಲ್ಲಿ ರಾಜ್ಯಪಾಲ ಆರ್.ವಿ. ಅರ್ಲೇಕರ್ ಅವರನ್ನು ಭೇಟಿಯಾಗಿ, ತಮ್ಮ ಬಳಿ 116 ಶಾಸಕರ ಬೆಂಬಲವಿದೆ ಎಂದು ಪತ್ರ ಸಲ್ಲಿಸಿದ್ದಾರೆ. ಆದರೆ ತಮಿಳುನಾಡು ವಿಧಾನಸಭೆಯ ಒಟ್ಟು 234 ಸ್ಥಾನಗಳಲ್ಲಿ ಬಹುಮತ ಸಾಬೀತುಪಡಿಸಲು 118 ಶಾಸಕರ ಅಗತ್ಯವಿದೆ. ಅದನ್ನು ತನ್ನಿ ಎನ್ನುವುದು ರಾಜ್ಯಪಾಲರ ವಾದವಾಗಿದೆ. ಕಾಂಗ್ರೆಸ್‌ನ ಐದು, ಎಡಪಕ್ಷಗಳ ನಾಲ್ಕು ಸದಸ್ಯರ ಬೆಂಬಲ ಪಡೆದಿರುವ ಟಿವಿಕೆಗೆ ಇಬ್ಬರು ಶಾಸಕರನ್ನು ಹೊಂದಿರುವ ವಿಸಿಕೆ ಪಕ್ಷ ಕೊನೆಗೂ ಬೆಂಬಲ ನೀಡಿದೆ. ಆದರೆ ನಮ ಈ ತ್ಯಾಗಕ್ಕಾಗಿ ನಮ ಪಕ್ಷಕ್ಕೆ ಉಪ ಮುಖ್ಯಮಂತ್ರಿ ಪಟ್ಟ ಬಿಟ್ಟುಕೊಡುವಂತೆ ಆ ಪಕ್ಷ ಪಟ್ಟು ಹಿಡಿದಿದೆ. ಅವರ ಬೇಡಿಕೆಗೆ ವಿಜಯ್ ಕಡೆಯಿಂದ ಯಾವುದೇ ಒಪ್ಪಿಗೆ ಸಿಕ್ಕಿಲ್ಲ. ಹೀಗಾಗಿ ಇಲ್ಲಿಯವರೆಗೆ ವಿಸಿಕೆ ತನ್ನ ನಿರ್ಧಾರವನ್ನು ಅಧಿಕೃತವಾಗಿ ಘೋಷಣೆ ಮಾಡಿಲ್ಲ.

### ಶೇ 10ರಷ್ಟು ಸುಂಕ ಅಸಿಂಧು

**ವಾಷಿಂಗ್ಟನ್ :** ಭಾರತ ಸೇರಿದಂತೆ ಜಗತ್ತಿನ ವಿವಿಧ ರಾಷ್ಟ್ರಗಳ ಮೇಲೆ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ವಿಧಿಸಿರುವ ಶೇ 10ರಷ್ಟು ಸುಂಕವನ್ನು ಅಮೆರಿಕದ ಫೆಡರಲ್ ನ್ಯಾಯಾಲಯವು ರದ್ದುಗೊಳಿಸಿದೆ. ಅಲ್ಲದೆ ಈ ಸುಂಕ ಅಸಿಂಧು ಮತ್ತು ಕಾನೂನುಬಾಹಿರ ಎಂದು ಹೇಳಿದೆ. ಅಧ್ಯಕ್ಷ ಡೊನಾಲ್ಡ್ ಟ್ರಂಪ್ ವಿಧಿಸಿದ್ದ ಹೆಚ್ಚುವರಿ ಪ್ರತಿಸುಂಕವನ್ನು ಅಮೆರಿಕದ ಸುಪ್ರೀಂ ಕೋರ್ಟ್ ಈ ಹಿಂದೆ ರದ್ದುಗೊಳಿಸಿತ್ತು. ಇದರಿಂದ ಟ್ರಂಪ್, ಭಾರತ ಸೇರಿದಂತೆ ವಿವಿಧ ದೇಶಗಳಿಂದ ಅಮೆರಿಕಕ್ಕೆ ಪ್ರವೇಶಿಸುವ ವಸ್ತುಗಳ ಮೇಲೆ ಶೇ 10ರಷ್ಟು ಸುಂಕವನ್ನು ವಿಧಿಸಿದ್ದರು. ಇದು ಫೆಬ್ರುವರಿ 24ರಿಂದ 150 ದಿನ ಜಾರಿಯಲ್ಲಿ ಇರಲಿದೆ ಎಂದು ಅಮೆರಿಕದ ಆಡಳಿತ ಹೇಳಿತ್ತು. ಅಂತರರಾಷ್ಟ್ರೀಯ ವ್ಯಾಪಾರ ನ್ಯಾಯಾಲಯವು ಎರಡು ಪ್ರತ್ಯೇಕ ತೀರ್ಪಿನಲ್ಲಿ ಶೇ 10ರಷ್ಟು ಸುಂಕ ವಿಧಿಸಲು ಪ್ರಸ್ತಾಪಿಸಿದ 1974ರ ವ್ಯಾಪಾರ ಕಾಯ್ದೆಯನಿಬಂಧನೆಗಳು, ಪಾವತಿ ಸಮತೋಲನ ಬಿಕ್ಕಟ್ಟಿನ ಸಂದರ್ಭದಲ್ಲಿ ಮಾತ್ರಪರಿಣಾಮಕಾರಿಯಾಗಬಹುದು ಎಂದು ತೀರ್ಪು ನೀಡಿದೆ.

### ತೀಸ್ತಾ ನದಿ ಯೋಜನೆ ಚೀನಾ ಬೆಂಬಲ ಕೋರಿದ ಬಾಂಗ್ಲಾ

**ಬೀಜಿಂಗ್ :** ತೀಸ್ತಾ ನದಿ ಪುನರುಜ್ಜೀವನ ಯೋಜನೆಯನ್ನು ಬೆಂಬಲಿಸುವಂತೆ ಹಾಗೂ ಈ ಯೋಜನೆಯಲ್ಲಿ ಭಾಗಿಯಾಗುವಂತೆ ಬಾಂಗ್ಲಾದೇಶವು ಚೀನಾಕ್ಕೆ ಮನವಿ ಮಾಡಿರುವುದು ಭಾರತದ ಕಳವಳಕ್ಕೆ ಕಾರಣವಾಗಿದೆ.

ಬಾಂಗ್ಲಾದೇಶದ ಪ್ರಧಾನಿ ತಾರಿಕ್ ರೆಹಮಾನ್ ಸದ್ಯ ಚೀನಾ ಪ್ರವಾಸದಲ್ಲಿದ್ದು, ತೀಸ್ತಾ ನದಿ ಸಮಗ್ರ ನಿರ್ವಹಣೆ ಮತ್ತು ಪುನರುಜ್ಜೀವನ ಯೋಜನೆಗೆ (ಟಿಆರ್‌ಸಿಎಂಆರ್‌ಪಿ) ಚೀನಾದ ಆರ್ಥಿಕ ನೆರವು ಕೋರಿದ್ದಾರೆ. ಬಾಂಗ್ಲಾದೇಶದ ವಿದೇಶಾಂಗ ಸಚಿವ ಖಲೀಲುರ್ ರೆಹಮಾನ್ ಮತ್ತು ಚೀನಾದ ವಿದೇಶಾಂಗ ಸಚಿವ ವಾಂಗ್ ಯಿ ಅವರು ಬೀಜಿಂಗ್‌ನಲ್ಲಿ ತೀಸ್ತಾ ನದಿ ಪುನರುಜ್ಜೀವನ ಯೋಜನೆ ಬಗ್ಗೆ ಮಾತುಕತೆ ನಡೆಸಿದ್ದಾರೆ ಎಂದು ಬಾಂಗ್ಲಾದೇಶದ ಸರ್ಕಾರಿ ಸ್ವಾಮ್ಯದ ಬಿಎಸ್‌ಎಸ್ ಸುದ್ದಿಸಂಸ್ಥೆ ವರದಿ ಮಾಡಿದೆ.

ಸಿಕ್ಕಿಂನಲ್ಲಿ ಹುಟ್ಟಿ, ಪಶ್ಚಿಮ ಬಂಗಾಳದ ಮೂಲಕ ಬಾಂಗ್ಲಾದತ್ತ ಹರಿದು ನಂತರ ಬ್ರಹ್ಮಪುತ್ರ ನದಿಯನ್ನು ಸೇರುವ ತೀಸ್ತಾ ನದಿಯನ್ನು ಸಂರಕ್ಷಿಸುವ ಯೋಜನೆ ಇದಾಗಿದೆ. ಆದರೆ, ಚೀನಾ ಈ ಯೋಜನೆಯನ್ನು ಅನುಷ್ಠಾನಗೊಳಿಸಿದರೆ ಅದು ದೇಶದ ಭದ್ರತೆಯ ದೃಷ್ಟಿಯಿಂದ ಒಳಿತಲ್ಲ ಹಾಗೂ ತೀಸ್ತಾ ನದಿ ನೀರು ಹಂಚಿಕೆಗೆ ಸಂಬಂಧಿಸಿದಂತೆ ನನೆಗುದಿಗೆ ಬಿದ್ದಿರುವ ಭಾರತ ಬಾಂಗ್ಲಾ ಮಾತುಕತೆ ಮೇಲೂ ವ್ಯತಿರಿಕ್ತ ಪರಿಣಾಮ ಬೀರಲಿದೆ ಎನ್ನುವ ಕಳವಳ ಭಾರತದ್ದು.

### ಬಿಜೆಪಿ ವಿರುದ್ಧ ವಿರೋಧ ಪಕ್ಷಗಳು ಜಂಟಿ ವೇದಿಕೆ ನಿರ್ಮಿಸಬೇಕಿದೆ: ಮಮತಾ ಬ್ಯಾನರ್ಜಿ

**ಕೋಲ್ಕತ್ತ:** ಪಶ್ಚಿಮ ಬಂಗಾಳದ ಎಲ್ಲಾ ವಿರೋಧ ಪಕ್ಷಗಳು ಒಟ್ಟಾಗಿ 'ಜಂಟಿ ವೇದಿಕೆಯೊಂದನ್ನು ನಿರ್ಮಿಸುವ ಮೂಲಕ ಬಿಜೆಪಿ ವಿರುದ್ಧ ಹೋರಾಡಬೇಕಿದೆ ಎಂದು ಟಿಎಂಸಿ ನಾಯಕಿ ಮಮತಾ ಬ್ಯಾನರ್ಜಿ ಅವರು ಮನವಿ ಮಾಡಿದ್ದಾರೆ. ಶತ್ರುವಿನ ಶತ್ರು ಮಿತ್ರ ಎಂದು ಯೋಚಿಸಲು ಇದು ಸರಿಯಾದ ಸಮಯವಲ್ಲ, ನಮ್ಮೆಲ್ಲರ ಮೊದಲ ಶತ್ರು ಬಿಜೆಪಿಯಾಗಿದೆ. ರಾಷ್ಟ್ರೀಯ ಪಕ್ಷಗಳು ಮತ್ತು ಎಡಪಕ್ಷಗಳು ಸೇರಿದಂತೆ ಎಲ್ಲಾ ವಿರೋಧ ಪಕ್ಷಗಳು ಒಟ್ಟಾಗಿ ಅವರ ವಿರುದ್ಧ ನಿಲ್ಲಬೇಕಿದೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಯಾವುದೇ ಪಕ್ಷಗಳು ಮಾತುಕತೆಗೆ ಮುಂದಾದರೂ. ನಾನು ಅವರೊಂದಿಗೆ ಚರ್ಚಿಸಲು ಸಿದ್ಧ ಎಂದು ಹೇಳಿದ್ದಾರೆ. ಚುನಾವಣಾ ಫಲಿತಾಂಶದ ನಂತರ ರಾಜ್ಯದಲ್ಲಿ ಟಿಎಂಸಿ ಕಾರ್ಯಕರ್ತರು ಮತ್ತು ಬೆಂಬಲಿಗರ ಮೇಲೆ ದಾಳಿ ನಡೆಸಲಾಗುತ್ತಿದೆ. ಗೂಂಡಾಗಿರಿ ಆರಂಭವಾಗಿದೆ. ನಾನು 2011ರಲ್ಲಿ ಅಧಿಕಾರಕ್ಕೆ ಬಂದಾಗ ಈ ರೀತಿಯ ಕೃತ್ಯಗಳಿಗೆ ಬೆಂಬಲ ನೀಡಿರಲಿಲ್ಲ ಎಂದು ಹೇಳಿದ್ದಾರೆ.

# ರಷ್ಯಾ-ಉಕ್ರೇನ್ ನಡುವೆ 3 ದಿನಗಳ ಕದನವಿರಾಮ ಘೋಷಿಸಿದ ಟ್ರಂಪ್

## ರಷ್ಯಾ-ಉಕ್ರೇನ್ ನಡುವಿನ ಶಾಂತಿ ಮಾತುಕತೆಗಳು ಮತ್ತೆ ಗರಿಗೆದರಿರುವ ಹೊತ್ತಿನಲ್ಲೇ, ಉಭಯದೇಶಗಳ ನಾಯಕರೊಂದಿಗೆ ಮಾತುಕತೆ

**ವಾಷಿಂಗ್ಟನ್:** ಮಧ್ಯಪ್ರಾಚ್ಯದಲ್ಲಿ ಇರಾನ್‌ನೊಂದಿಗೆ ಶಾಂತಿ ಮಾತುಕತೆಗಳ ಪ್ರಯತ್ನದ ನಡುವೆ ಇದೀಗ ರಷ್ಯಾ-ಉಕ್ರೇನ್‌ನಲ್ಲಿನ ಸುದೀರ್ಘ ಯುದ್ಧದತ್ತ ಅಮೆರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಚಿತ್ತನೆಟ್ಟಿದ್ದು, ಉಭಯರ ನಡುವೆ ಶಾಂತಿ ಸ್ಥಾಪಿಸುವ ನಿಟ್ಟಿನಲ್ಲಿ 3 ದಿನಗಳ ಕದನವಿರಾಮವನ್ನು ಘೋಷಿಸಿದ್ದಾರೆ.

**ರಷ್ಯಾ-ಉಕ್ರೇನ್ ಯುದ್ಧಕ್ಕೆ 3 ದಿನಗಳ ಕದನವಿರಾಮ ಘೋಷಿಸಿದ ಟ್ರಂಪ್:** ರಷ್ಯಾ-ಉಕ್ರೇನ್ ನಡುವಿನ ಶಾಂತಿ ಮಾತುಕತೆಗಳು ಮತ್ತೆ ಗರಿಗೆದರಿರುವ ಹೊತ್ತಿನಲ್ಲೇ, ಉಭಯದೇಶಗಳ ನಾಯಕರೊಂದಿಗೆ ಮಾತುಕತೆ ನಡೆಸಿದ್ದು, ಪರಸ್ಪರ ಒಪ್ಪಿಗೆಯ ಮೇರೆಗೆ ಮೇ.9ರಿಂದ ಮೇ.11ರವರೆಗೆ 3 ದಿನಗಳ ಕದನವಿರಾಮ ಘೋಷಿಸುತ್ತಿರುವುದಾಗಿ ಡೊನಾಲ್ಡ್ ಟ್ರಂಪ್ ತಮ್ಮ ಟ್ರುತ್ ಸೋಶಿಯಲ್ ಮೂಲಕ ಘೋಷಣೆ ಮಾಡಿದ್ದಾರೆ.

ಈ ಕುರಿತು ಟ್ರುತ್‌ನಲ್ಲಿ ಟ್ರಂಪ್ ಪೋಸ್ಟ್ ಮಾಡಿದ್ದು, 2ನೇ ಮಹಾಯುದ್ಧದ ಕುರಿತಂತೆ ರಷ್ಯಾದಲ್ಲಿ ವಿಜಯ ದಿನವನ್ನು ಆಚರಿಸಲಾಗುತ್ತಿದ್ದು, ಅದರಂತೆ ಇದರಲ್ಲಿ ದೊಡ್ಡ ಭಾಗವನ್ನು ಹೊಂದಿದ್ದ ಉಕ್ರೇನ್‌ನಲ್ಲಿಯೂ ಆಚರಣೆ ನಡೆಯುತ್ತಿದೆ. ಈ ನಿಟ್ಟಿನಲ್ಲಿ ನನ್ನ ನೇರ ಕೋರಿಕೆಯ ಮೇರೆಗೆ ರಷ್ಯಾದ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಮತ್ತು ಉಕ್ರೇನಿಯನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್ಸ್ಕಿ ಇಬ್ಬರೂ ಸಹ ಯುದ್ಧಕ್ಕೆ ಮೂರು ದಿನಗಳ ಕದನವಿರಾಮ ಜಾರಿ ಮಾಡಲು ಪರಸ್ಪರ ಒಪ್ಪಿಗೆ ಸೂಚಿಸಿದ್ದಾರೆ ಎಂದು ಘೋಷಿಸಲು ನನಗೆ ಸಂತೋಷವಾಗಿದೆ ಎಂದು ತಿಳಿಸಿದ್ದಾರೆ.



ರಷ್ಯಾದಲ್ಲಿ ವಿಜಯ ದಿನ

**ಎರಡೂ ಕಡೆಗಳಿಂದ ಸಾವಿರ ಯುದ್ಧ ಕೈದಿಗಳ ವಿನಿಮಯಕ್ಕೆ ಒಪ್ಪಂದ:** ಇನ್ನು, ಈ ಕದನವಿರಾಮದ ನಿಯಮವನ್ನು ವಿವರಿಸಿದ್ದು, ಈ ಕದನವಿರಾಮದ ಸಮಯದಲ್ಲಿ ಉಭಯದೇಶಗಳ ನಡುವಿನ ಎಲ್ಲಾ ರೀತಿಯ ಚಲನಶೀಲ ಚಟುವಟಿಕೆಗಳನ್ನು ಸ್ಥಗಿತಗೊಳಿಸುವುದರ ಜೊತೆಗೆ ಪರಸ್ಪರ ಎರಡೂ ದೇಶಗಳಲ್ಲಿ ಬಂಧಿಸಲಾಗಿರುವ ಯುದ್ಧ ಕೈದಿಗಳ ಪೈಕಿ ಪ್ರತಿದೇಶದಿಂದ 1,000 ಯುದ್ಧ ಕೈದಿಗಳ ಜೈಲು ವಿನಿಮಯ ಮಾಡಿಕೊಳ್ಳುವುದನ್ನು ಒಳಗೊಂಡಿರುತ್ತದೆ ಎಂದಿದ್ದಾರೆ.

ಮುಂದುವರೆದು, ಈ ಕದನವಿರಾಮ ಬಹಳ ದೀರ್ಘ, ಮಾರಕ ಮತ್ತು ಕಠಿಣ ಹೋರಾಟದ ಯುದ್ಧದ ಅಂತ್ಯದ ಆರಂಭವಾಗಿದೆ ಎಂದು ನಾವು ಭಾವಿಸುತ್ತೇವೆ. ಎರಡನೇ ಮಹಾಯುದ್ಧದ ನಂತರದ ಅತ್ಯಂತ ದೊಡ್ಡ ಸಂಘರ್ಷವಾದ ಈ ಪ್ರಮುಖ ಸಂಘರ್ಷವನ್ನು ಕೊನೆಗೊಳಿಸುವ ಕುರಿತು ಮಾತುಕತೆಗಳು ಮುಂದುವರೆದಿದ್ದು, ಇದಕ್ಕೆ ನಾವು ಪ್ರತಿದಿನ ಸಮೀಪಿಸುತ್ತಿದ್ದೇವೆ ಎಂದು ತಿಳಿಸಿದ್ದಾರೆ.

- **ಪರಸ್ಪರ 1,000 ಯುದ್ಧ ಕೈದಿಗಳ ವಿನಿಮಯಕ್ಕೆ ಉಭಯರ ಒಪ್ಪಿಗೆ**
- **ರಷ್ಯಾ-ಉಕ್ರೇನ್ ನಡುವೆ 3ದಿನಗಳ ಕದನವಿರಾಮ ಘೋಷಣೆ ಮಾಡಿದ ಅಮೆರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್**
- **ಕದನವಿರಾಮ ಭಾಗವಾಗಿ ಪರಸ್ಪರ 1000 ಯುದ್ಧ ಕೈದಿಗಳ ವಿನಿಯಮಕ್ಕೆ ರಷ್ಯಾ-ಉಕ್ರೇನ್ ಒಪ್ಪಂದ**
- **ಕದನವಿರಾಮವನ್ನು ಖಚಿತ ಪಡಿಸಿದ ಉಭಯ ಪಕ್ಷಗಳು ಹೇಳಿದ್ದೇನು?**

**ಈ ಕುರಿತು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್ಸ್ಕಿ ಸಹ ಅಧಿಕೃತವಾಗಿ ತಮ್ಮ ಎಕ್ಸ್ ಖಾತೆಯ ಮೂಲಕ ಹೇಳಿಕೆ ನೀಡಿದ್ದು, ತಮ್ಮ ಮೇ.9-ಮೇ.11ರವರೆಗೆ ರಷ್ಯಾದೊಂದಿಗೆ ಕದನವಿರಾಮ ಮಾಡಿಕೊಳ್ಳುತ್ತಿದ್ದು, ಇದರ ಭಾಗವಾಗಿ ಯುದ್ಧದಲ್ಲಿ ಸೆರೆಯಾದ 1000 ಕೈದಿಗಳನ್ನು ವಿನಿಮಯ ಮಾಡಿಕೊಳ್ಳುವುದಕ್ಕೆ ರಷ್ಯಾದೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗಿದೆ. ಈ ಫಲಪ್ರದ ರಾಜತಾಂತ್ರಿಕ ಮಾತುಕತೆಗಳಲ್ಲಿ ಒಳಗೊಂಡಿರುವುದಕ್ಕೆ ಯುಎಸ್ ಅಧ್ಯಕ್ಷರು ಹಾಗೂ ಅವರ ತಂಡಕ್ಕೆ ನಾನು ಧನ್ಯವಾದ ಹೇಳುತ್ತೇನೆ ಎಂದು ತಿಳಿಸಿದ್ದಾರೆ.**



# ಬಜೆಟ್ 1400 ಕೋಟಿ ಗಳಿಸಿದ್ದು 6 ಕೋಟಿ

ಸಿನಿಮಾಗಳು ನಷ್ಟ ಅನುಭವಿಸುವುದು ಸಾಮಾನ್ಯ. ನಿರ್ಮಾಣವಾದ ಸಿನಿಮಾಗಳಲ್ಲಿ 50% ಸಿನಿಮಾಗಳು ಬಂಡವಾಳದ ಅರ್ಧದಷ್ಟು ಸಹ ಗಳಿಕೆ ಮಾಡುವುದಿಲ್ಲ. ಆದರೆ ದೊಡ್ಡ ಬಜೆಟ್‌ನ ಸಿನಿಮಾಗಳು ಸೋಲುವುದು ತುಸು ವಿರಳ. ಹಾಗೆ ಸೋಲುವ ಸಿನಿಮಾಗಳು ಸಹ ಕನಿಷ್ಟ 50 ರಿಂದ 70% ಹಣವನ್ನಾದರೂ ಗಳಿಕೆ ಮಾಡುತ್ತವೆ. ಆದರೆ ಇಲ್ಲೊಂದು ಸಿನಿಮಾಕ್ಕೆ ಬರೋಬ್ಬರಿ 1400 ಕೋಟಿ ಬಜೆಟ್ ಹೂಡಿಕೆ ಮಾಡಲಾಗಿತ್ತು. ಆದರೆ ಬಾಕ್ಸ್ ಆಫೀಸ್‌ನಲ್ಲಿ ಗಳಿಕೆ ಮಾಡಿದ್ದು ಕೇವಲ 6 ಕೋಟಿ ರೂಪಾಯಿ!

ಸೌದಿ ಅರೇಬಿಯಾದ ಅತ್ಯಂತ ದುಬಾರಿ ಐತಿಹಾಸಿಕ ಸಾಹಸಮಯ ಚಿತ್ರ 'ಡೆಸರ್ಟ್ ವಾರಿಯರ್' ಇತ್ತೀಚಿನ ಚಿತ್ರರಂಗದ ಇತಿಹಾಸದಲ್ಲೇ ಅತಿದೊಡ್ಡ ಬಾಕ್ಸ್ ಆಫೀಸ್ ಸೋಲು ಕಂಡ ಸಿನಿಮಾ ಎನಿಸಿಕೊಂಡಿದೆ. ವರದಿಗಳ ಪ್ರಕಾರ ಸುಮಾರು 1,400 ಕೋಟಿ ಭಾರಿ ಬಜೆಟ್‌ನಲ್ಲಿ ನಿರ್ಮಾಣವಾದ ಈ ಚಿತ್ರವು ವಿಶ್ವಾದ್ಯಂತ ಗಳಿಸಿದ್ದು ಕೇವಲ 6 ಕೋಟಿ ರೂಪಾಯಿ ಮಾತ್ರ.

ರೂಪರ್ಟ್ ವ್ಯಾಟ್ ನಿರ್ದೇಶನದ ಈ ಸಿನಿಮಾದಲ್ಲಿ ಪ್ರಸಿದ್ಧ ಹಾಲಿವುಡ್ ನಟರಾದ ಆಂಥೋನಿ ಮ್ಯಾಕಿ ಮತ್ತು ಬೆನ್ ಕಿಂಗ್ಸ್ಲಿ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ. ಸೌದಿ ಅರೇಬಿಯಾದ ಮನರಂಜನಾ ಕ್ಷೇತ್ರವನ್ನು ಹಾಲಿವುಡ್ ಮಟ್ಟಕ್ಕೆ ಕೊಂಡೊಯ್ಯುವ ಉದ್ದೇಶದಿಂದ ಸೌದಿ ಹಣಕಾಸಿನ ನೆರವಿನೊಂದಿಗೆ ಈ ಚಿತ್ರವನ್ನು ನಿರ್ಮಿಸಲಾಗಿತ್ತು. ಆದರೆ ದುರದೃಷ್ಟವಶಾತ್ ಪ್ರೇಕ್ಷಕರು ಈ ಸಿನಿಮಾವನ್ನು ಸಂಪೂರ್ಣವಾಗಿ ತಿರಸ್ಕರಿಸಿದ್ದಾರೆ. 'ಅವೇಂಜರ್ಸ್', 'ಕ್ಯಾಪ್ಟನ್ ಅಮೆರಿಕ' ಇನ್ನೂ ಹಲವು ಸಿನಿಮಾಗಳಲ್ಲಿ ನಟಿಸಿರುವ ಆಂಥೋನಿ ಮ್ಯಾಜಿ ಮತ್ತು ಬೆನ್ ಕಿಂಗ್ಸ್ಲಿ ಇದ್ದಾಗಿಯೂ ಸಿನಿಮಾ ಧಾರುಣ ಸೋಲು ಕಂಡಿದೆ.

**ಐತಿಹಾಸಿಕ ನಷ್ಟ ಕಂಡ ಸಿನಿಮಾ**

ವಿಮರ್ಶಕರು ಈ ಚಿತ್ರದ ದುರ್ಬಲ ಕಥೆ, ಗೊಂದಲಮಯ ಚಿತ್ರಕಥೆ ಮತ್ತು ಭಾವನಾತ್ಮಕತೆಯ ಕೊರತೆಯನ್ನು ಕಟುವಾಗಿ ಟೀಕಿಸಿದ್ದಾರೆ. ಉತ್ತರ ಅಮೆರಿಕಾದ 1,000 ಕ್ಕೂ ಹೆಚ್ಚು ಚಿತ್ರಮಂದಿರಗಳಲ್ಲಿ ಬಿಡುಗಡೆಯಾದರೂ ಸಹ, ಪ್ರತಿ ಪರದೆಯ ಮೇಲೆ ಸರಾಸರಿ 500 ಡಾಲರ್‌ಗಿಂತ ಕಡಿಮೆ ಹಣವನ್ನು ಮಾತ್ರ ಇದು ಸಂಗ್ರಹಿಸಿದೆ. ಚಿತ್ರದ ಸೋಲಿಗೆ ಕೇವಲ ಕಥೆಯಲ್ಲದೆ, ನಿರ್ಮಾಣದ ಸಮಯದಲ್ಲಿ ಎದುರಾದ ಸಮಸ್ಯೆಗಳು, ಸೃಜನಾತ್ಮಕ ಭಿನ್ನಾಭಿಪ್ರಾಯಗಳು, ಬಿಡುಗಡೆಯ ವಿಳಂಬ ಮತ್ತು ಕಳಪೆ ಪ್ರಚಾರವೂ ಪ್ರಮುಖ ಕಾರಣಗಳೆಂದು ವಿಶ್ಲೇಷಿಸಲಾಗಿದೆ. ಕೇವಲ ದೊಡ್ಡ ಬಜೆಟ್ ಮತ್ತು ಸ್ಟಾರ್ ನಟರು ಇದ್ದರೆ ಸಿನಿಮಾ ಗೆಲ್ಲುವುದಿಲ್ಲ ಎಂಬುದಕ್ಕೆ 'ಡೆಸರ್ಟ್ ವಾರಿಯರ್' ಚಿತ್ರವು ಉದಾಹರಣೆಯಾಗಿದಿದೆ.

ಏಪ್ರಿಲ್ 24 ರಂದು ಬಿಡುಗಡೆ ಆಗಿದ್ದ ಈ ಸಿನಿಮಾವನ್ನು ಖ್ಯಾತ ನಿರ್ಮಾಪಕ ಜೆರೆಮಿ ಬೋಲ್ಟ್ ನಿರ್ಮಾಣ ಮಾಡಿದ್ದರು. ಇದೇ ನಿರ್ಮಾಪಕರು ಈ ಹಿಂದೆ, 'ಡೆತ್ ರೇಸ್', 'ರೆಸಿಡೆನ್ಷಿಯನ್ ಇವಿಲ್', 'ದಿ ಡಾರ್ಕ್', 'ಮಾನ್‌ಸ್ಟರ್ ಹಂಟ್' ರೀತಿಯ ಸೂಪರ್ ಹಿಟ್ ಸಿನಿಮಾಗಳನ್ನು ನಿರ್ಮಾಣ ಮಾಡಿದ್ದರು. ಆದರೆ ಈಗ ಈ ಒಂದು ಸಿನಿಮಾದಿಂದಾಗಿ ಜೀವಮಾನದ ನಷ್ಟವನ್ನು ಅನುಭವಿಸಿದ್ದಾರೆ.

# ಬಿಕಿನಿ ಮತ್ತು ಸೋನು ಹಾಟ್

ಮಾಲ್ಡೀವ್ಸ್‌ನಲ್ಲಿ ಪಾರಾ ಸೈಲಿಂಗ್ ಮಾಡಿದ ಅನುಭವವನ್ನು ಅವರು ವಿಡಿಯೋ ಮೂಲಕ ಶೇರ್ ಮಾಡಿದ್ದಾರೆ. ಅವರ ಪ್ರವಾಸದ ಅನುಭವ ಹೇಗಿತ್ತು ಅನ್ನೋದನ್ನು ವಿಡಿಯೋ ಮಾಡಿ ಅವರು ಶೇರ್ ಮಾಡಿದ್ದಾರೆ. ಬಿಕಿನಿ ಹಾಕ್ಕೊಂಡ್ರೆ ನಮ್ಮಮ್ಮ ಚಪ್ಪಲಿನಲ್ಲಿ ಹೊಡಿತೀನಿ ಅಂದಿದ್ದು ನೆನಪಾಯ್ತು. ಪಾರಾಸೈಲಿಂಗ್ ಆಡ್ಬೇಕಾದ್ರೆ ನಿಜವಾಗ್ಲೂ ಭಯ ಆಯ್ತು. ಬೆಳಗ್ಗೆದ್ದು ಸ್ನಾನ ಮಾಡಿ ರೆಡಿಯಾಗಿ ಪಾರಾ ಸೈಲಿಂಗ್‌ಗೆ ಹೋಗಿದ್ದೆ. ಲೈಫ್ ಜಾಕೆಟ್ ಕೊಟ್ರು. ಆಕಾಶದ ಮೇಲೆ ತೇಲ್ತಾ ಇದ್ದೀನಿ ಅಂತನಿಸ್ತು. ಫುಲ್ ಭಯ ಆಗೋಯ್ತು. ಕೆಳಗಡೆ ಇರೋರಿಗೆಲ್ಲ ಹಾಯ್ ಮಾಡ್ತಾ ಇದ್ದೆ. ಅವರು ಚಂದಕ್ಕೆ ಹಾಯ್ ಮಾಡಿದ್ರು. ಅಲ್ಲಿಂದ ಬಂದು ಸುಸ್ತಾಗಿ ಒಂದು ರೆಡ್‌ಬುಲ್ ಕುಡಿದೆ.

ನಾನು ಡ್ರಿಂಕ್ಸ್ ಮಾಡಿಲ್ಲ. 3 ಸಾವಿರ ಕೊಟ್ಟು ಒಂದು ಕ್ರ್ಯಾಬ್ ತಗೊಂಡಿದ್ದೆ. ತಿನ್ನದೇ ಬಿಡ್ತೀನಾ ಚೆನ್ನಾಗಿ ತಿಂದಾಕ್ಬಿಟ್ಟೆ. ಬಟ್ ಸ್ವಲ್ಪ ಸ್ವೀಟ್ ಅನಿಸ್ತು. ಇದು ಸೀಫುಡ್ ಅಲ್ವ ಅದಕ್ಕೆ ಸ್ವಲ್ಪ ಸಿಹಿ. ಚೆನ್ನಾಗಿ ತಿಂದು ಪ್ಲೇಟ್ ಎಲ್ಲ ಖ್ಯಾಲಿ ಮಾಡಿದೆ. ಸ್ವೀಟ್ ತಿನ್ಬೇಕು ಅಂತ ಮ್ಯಾಂಗೋ ಐಸ್‌ಕ್ರೀಂ ತಿಂದೆ. ಬೀಚ್ ಹತ್ತಿರ ಹೋದೆ. ಅಲ್ಲಿ ಎಲ್ಲರೂ ಬಿಕಿನಿ ಹಾಕಿದ್ದನ್ನು ನೋಡಿ ಬಿಕಿನಿ ಹಾಕ್ಕೊಳ್ಬೇಕು ಅಂತ ಅನಿಸ್ತು. ಹಂಗೇ ಸ್ವಲ್ಪ ಹೊತ್ತು ಕುಳಿತು ಬಿಕಿನಿ ಹಾಕ್ಕೊಂಡವ್ರನ್ನು ನೋಡ್ಕೊಂಡು ಆಟಾ ಆಡ್ತಾ ಕೂತ್ಕೊಂಡಿದ್ದೆ ಎಂದು ಸೋನು ಗೌಡ ವಿಡಿಯೋ ಮುಗಿಸಿದ್ದಾರೆ. ಸೋನು ಗೌಡ ಅವರು ಇತ್ತೀಚೆಗೆ ತಮ್ಮ ಲವ್ ಸ್ಟೋರಿಯನ್ನು ಕೂಡಾ ಸೋಷಿಯಲ್ ಮಿಡಿಯಾದಲ್ಲಿ ಶೇರ್ ಮಾಡಿದ್ದರು. ಆ ಸ್ಟೋರಿಸ್ ವೈರಲಗ್ ಆಗಿದ್ದವು. ತಮ್ಮ ಲವ್ ಸ್ಟೋರಿ, ವಿಡಿಯೋ ಕಾಲ್, ಆ ನಂತರ ಬ್ಲಾಕ್‌ಮೇಲ್ ನಂತರದ ಮೋಸ ಎಲ್ಲವನ್ನೂ ಅವರು ರಿವೀಲ್ ಮಾಡಿದ್ದರು.



ಸೋನು ಶ್ರೀನಿವಾಸ್ ಗೌಡ ಅವರು ಟ್ರೋಲ್‌ಗಳಿಂದಾಗಿ ತನ್ನ ಲವ್‌ಲೈಫ್ ಹೇಗೆ ಹಾಳಾಯಿತು ಎನ್ನುವುದನ್ನು ಹೇಳಿದ್ದಾರೆ. ''ಟ್ರೋಲ್‌ಗಳೆಲ್ಲ ನೋಡಿ ನನ್ನ ಲವ್ವಲ್ಲಿ ಜಗಳ ಸ್ಟಾರ್ಟ್ ಆಯಿತು. ಮತ್ತೆ ನನ್ನ ಫ್ಯಾಮಿಲಿಯಲ್ಲಿ ಜಗಳ ಸ್ಟಾರ್ಟ್ ಆಯಿತು. ಅಮ್ಮ ಅಂತೂ ನನ್ನ ಜೊತೆ ಆರು ತಿಂಗಳು ಮಾತನಾಡಿರಲಿಲ್ಲ. ನಾನು ಪರವಾಗಿಲ್ಲ ಬಿಡು ಮಾತಾಡಲಿಲ್ಲ ಅಂದ್ರೆ ಏನು ಅಂತ ಸುಮ್ಮನಿದ್ದೆ. ಲವ್ ಲೈಫ್ ಅಂತೂ ಹದಗೆಟ್ಟು ಹೋಗಿತ್ತು. ನನ್ನ ತಮ್ಮ ಸಾಗರ ಸಿಕ್ಕಾಪಟ್ಟೆ ಸಪೋರ್ಟ್ ಮಾಡ್ತಿದ್ದ. ಇದೆಲ್ಲದಕ್ಕೂ ನೀನು ಮಾಡೇ ಮಾಡ್ತೀಯ. ಏನಾದ್ರು ಮಾಡು ಅಂತ ಹೇಳಿ ಅಂತ ಹೇಳ್ತಾ ಇದ್ದ. ನಾನು ಲವ್‌ನಲ್ಲಿ ಎಷ್ಟೊಂದು ನೊಂದಿದ್ದೀನಿ. ನನ್ನ ನಿಜವಾದ ಜೀವನ ಸ್ಟಾರ್ಟ್ ಆಗಿದ್ದೇ ಈಗ. ಲವರ್ ಅಂತೂ ತುಂಬಾ ನೋವು ಕೊಟ್ಟಿದ್ದಾನೆ. ನನಗೆ ಎಷ್ಟು ನೋವು ಕೊಟ್ಟಿದ್ದಾನೆ ಅಂದ್ರೆ ಹೇಳೋಕಾಗಲ್ಲ ಅಷ್ಟು. ದಿನವೂ ನೆಗೆಟಿವಿಟಿ. ಚುಚ್ಚಿ ಮಾತಾಡೋದು.



# ವಿಜಯ್-ತ್ರಿಷಾ ಮದುವೆ ಆಗಲಿ ಎಂದು ಹಾರೈಸಿದ ಬಾಲಿವುಡ್ ನಟಿ

ದಳಪತಿ ವಿಜಯ್ ಮತ್ತು ತ್ರಿಷಾ ಕೃಷ್ಣನ್ ಮದುವೆಯಾಗಬೇಕೆಂದು ರಾಖಿ ಸಾವಂತ್ ಸದ್ದು ಮಾಡಿದ್ದಾರೆ. ವಿಜಯ್ ಡಿವೋರ್ಸ್ ವದಂತಿಗಳ ನಡುವೆ ಈ ಹೇಳಿಕೆ ಮಹತ್ವ ಪಡೆದಿದೆ. 'ಲಿಯೋ' ತಾರೆಯರ ಕೆಮಿಸ್ಟ್ರಿ, ರಾಜಕೀಯದಲ್ಲಿ ತ್ರಿಷಾ ಪ್ರವೇಶದ ಸಾಧ್ಯತೆಗಳು ಕೂಡ ಚರ್ಚೆಗೆ ಗ್ರಾಸವಾಗಿವೆ. ವಿಜಯ್ ಪಕ್ಷಕ್ಕೆ ರಾಖಿ ಸೇರುವ ಆಸೆಯನ್ನೂ ವ್ಯಕ್ತಪಡಿಸಿದ್ದಾರೆ. ದಳಪತಿ ವಿಜಯ್ ಮತ್ತು ತ್ರಿಷಾ ಕೃಷ್ಣನ್ ನಡುವಿನ ಸ್ನೇಹದ ಬಗ್ಗೆ ಇತ್ತೀಚೆಗೆ ಸೋಶಿಯಲ್ ಮೀಡಿಯಾದಲ್ಲಿ ಚರ್ಚೆ ಜೋರಾಗಿದೆ. ಇಬ್ಬರೂ ಮದುವೆ ಆಗಲಿ ಎಂಬುದು ಕೆಲ ಅಭಿಮಾನಿಗಳ ಕೋರಿಕೆ. ಇದೀಗ ಈ ಚರ್ಚೆಗೆ ಬಾಲಿವುಡ್‌ನ ವಿವಾದಾತ್ಮಕ ನಟಿ ರಾಖಿ ಸಾವಂತ್ ಎಂಟ್ರಿಕೊಟ್ಟಿದ್ದಾರೆ ಎಂಬುದು ವಿಶೇಷ. ವಿಜಯ್ ಮತ್ತು ತ್ರಿಷಾ ಮದುವೆಯಾಗಬೇಕು ಎಂದು ಹೇಳುವ ಮೂಲಕ ರಾಖಿ ಸಂಚಲನ ಮೂಡಿಸಿದ್ದಾರೆ.

ಖಾಸಗಿ ಮಾಧ್ಯಮವೊಂದರ ಜೊತೆ ಮಾತನಾಡಿದ ರಾಖಿ, 'ವಿಜಯ್ ಮತ್ತು ತ್ರಿಷಾ ಮದುವೆಯಾಗಬೇಕು ಎಂದು ನನಗೆ ಅನ್ನಿಸುತ್ತಿದೆ. ಅವರಿಬ್ಬರ ಮದುವೆ ನಡೆದರೆ ನಾನು ಖಂಡಿತವಾಗಿಯೂ ಮೆಹಂದಿ ಕಾರ್ಯಕ್ರಮಕ್ಕೆ ಹೋಗುತ್ತೇನೆ' ಎಂದಿದ್ದಾರೆ. ಅಲ್ಲದೆ, ವಿಜಯ್ ರಾಜಕೀಯ ಯಶಸ್ಸನ್ನು ಶ್ಲಾಘಿಸಿದ ಅವರು, 'ವಿಜಯ್ ಅವರ ಪಕ್ಷವನ್ನು ಸೇರಲು ನಾನು ಇಷ್ಟಪಡುತ್ತೇನೆ' ಎಂದು ತಮ್ಮ ಆಸೆಯನ್ನು ಹೊರಹಾಕಿದ್ದಾರೆ. ವಿಜಯ್ ಮತ್ತು ತ್ರಿಷಾ ಬಗ್ಗೆ ಇಷ್ಟೊಂದು ಚರ್ಚೆ ನಡೆಯಲು ಕಾರಣ ಅವರ ಆನ್-ಸ್ಕ್ರೀನ್ ಕೆಮಿಸ್ಟ್ರಿ. 'ಗಿಲ್ಲಿ' ಚಿತ್ರದಿಂದ ಆರಂಭವಾದ ಇವರ ಜೋಡಿ 'ಲಿಯೋ' ಚಿತ್ರದವರೆಗೂ ಒಟ್ಟಾಗಿ ಕೆಲವು ಸಿನಿಮಾಗಳಲ್ಲಿ ನಟಿಸಿದೆ. ಇನ್ನೊಂದೆಡೆ, ವಿಜಯ್ ಮತ್ತು ಅವರ ಪತ್ನಿ ಸಂಗೀತ ನಡುವೆ ಭಿನ್ನಾಭಿಪ್ರಾಯ ಮೂಡಿದೆ ಎಂಬ ವದಂತಿಗಳು ಕಳೆದ ಒಂದು ವರ್ಷದಿಂದ ಹರಿದಾಡುತ್ತಿದ್ದವು. ಅದು ನಿಜವಾಗಿದೆ. ಸಂಗೀತಾ ಅವರು ಕೋರ್ಟ್‌ನಲ್ಲಿ ಡಿವೋರ್ಸ್‌ಗೆ ಅರ್ಜಿ ಸಲ್ಲಿಕೆ ಮಾಡಿದ್ದಾರೆ. ತಮಿಳುನಾಡು ಅಸೆಂಬ್ಲಿ ಚುನಾವಣೆಯಲ್ಲಿ ವಿಜಯ್ ಅವರ 'ಟಿವಿಕೆ' ಪಕ್ಷ ದೊಡ್ಡ ಮಟ್ಟದ ಗೆಲುವು ಸಾಧಿಸಿದ ಬೆನ್ನಲ್ಲೇ, ತ್ರಿಷಾ ಕೂಡ ರಾಜಕೀಯಕ್ಕೆ ಬರುತ್ತಾರೆ ಎಂಬ ಸುದ್ದಿ ಕೇಳಿಬರುತ್ತಿದೆ. ವಿಜಯ್ ಗೆದ್ದಿರುವ ಎರಡು ಕ್ಷೇತ್ರಗಳಲ್ಲಿ ಒಂದನ್ನು ತ್ಯಜಿಸಬೇಕಿದ್ದು, ಆ ಉಪಚುನಾವಣೆಯಲ್ಲಿ ತ್ರಿಷಾ ಸ್ಪರ್ಧಿಸಬಹುದು ಎಂಬ ಮಾತುಗಳು ಕೇಳಿಬರುತ್ತಿವೆ.

# ವಿಜಯ್ ಜೊತೆ ನಟಿಸಿದ ಕಲಾವಿದ ಈಗ ಹೋಟೆಲ್ ಸಪ್ಲೈಯರ್

ತಮಿಳು ಚಿತ್ರರಂಗದ ಖ್ಯಾತ ಪೋಷಕ ನಟ ಮತ್ತು ಡ್ಯಾನ್ಸರ್ 'ಜಪಾನ್ ಕುಮಾರ್' ಅವರು ರಸ್ತೆ ಬದಿಯ ಹೋಟೆಲ್‌ನಲ್ಲಿ ಕೆಲಸ ಮಾಡುತ್ತಿರುವ ವಿಡಿಯೋ ಇತ್ತೀಚೆಗೆ ಸಾಮಾಜಿಕ ಜಾಲತಾಣಗಳಲ್ಲಿ ಭಾರಿ ಚರ್ಚೆಗೆ ಗ್ರಾಸವಾಗಿತ್ತು. ವಿಜಯ್ ಮತ್ತು ಅಜಿತ್ ಅವರಂತಹ ಸ್ಟಾರ್ ನಟರ ಜೊತೆ ನಟಿಸಿದ್ದ ಕಲಾವಿದನಿಗೆ ಇಂತಹ ಪರಿಸ್ಥಿತಿ ಬಂದಿದೆಯೇ ಎಂದು ಹಲವರು ಅಚ್ಚರಿ ಮತ್ತು ವಿಷಾದ ವ್ಯಕ್ತಪಡಿಸಿದ್ದರು. ಆದರೆ, ಈ ಕುರಿತು ಜಪಾನ್ ಕುಮಾರ್ ಅವರ ಪತ್ನಿ ಜ್ಯೋತಿ ಅವರು ಸ್ಪಷ್ಟನೆ ನೀಡುವ ಮೂಲಕ ಎಲ್ಲಾ ವದಂತಿಗಳಿಗೆ ತೆರೆ ಎಳೆದಿದ್ದಾರೆ. ಚೆನ್ನೈನ ವಡಪಳನಿಯಲ್ಲಿರುವ 'ಶಕ್ತಿ ಹೋಮ್ ಫುಡ್ಸ್' ಎಂಬ ಹೋಟೆಲ್‌ನಲ್ಲಿ ಜಪಾನ್ ಕುಮಾರ್ ಅವರು ಗ್ರಾಹಕರಿಗೆ ಊಟ ಬಡಿಸುತ್ತಿರುವ ವಿಡಿಯೋ ವೈರಲ್ ಆಗಿತ್ತು. ಇದನ್ನು ನೋಡಿ ನೆಟ್ಟಿಗರು 'ಸಿನಿಮಾ ರಂಗ ಎಷ್ಟು ಕ್ರೂರ, ಅವಕಾಶಗಳಿಲ್ಲದೆ ನಟ ಹೋಟೆಲ್ ನಡೆಸುತ್ತಿದ್ದಾರೆ' ಎಂದು ಮರುಕ ಪಟ್ಟಿದ್ದರು. ಇನ್ನು ಕೆಲವರು 'ಯಾವುದೇ ಕೆಲಸ ಮಾಡಿದರೂ ಅದು ಗೌರವಯುತವಾದುದು' ಎಂದು ಬೆಂಬಲಿಸಿದ್ದರು.

**ವೈರಲ್ ವಿಡಿಯೋದ ಅಸಲಿಯತ್ತೇನು**

ಈ ಬಗ್ಗೆ ಮಾತನಾಡಿದ ಜ್ಯೋತಿ ಕುಮಾರ್ ಅವರು, 'ಆ ಹೋಟೆಲ್ ಜಪಾನ್ ಕುಮಾರ್ ಅವರಿಗೆ ಸೇರಿದ್ದಲ್ಲ. ಅದು ಅವರ ಸಹೋದರನ ಹೋಟೆಲ್. ಚಿತ್ರೀಕರಣ ಇಲ್ಲದ ಸಮಯದಲ್ಲಿ ಅಥವಾ ಊರಿನಲ್ಲಿ ಫ್ರೀ ಇದ್ದಾಗ ಅವರು ಸುಮ್ಮನೆ ಕುಳಿತುಕೊಳ್ಳದೆ ಅಣ್ಣನಿಗೆ ಸಹಾಯ ಮಾಡಲು ಹೋಗುತ್ತಾರೆ. ಯಾರೋ ಅವರು ಕೆಲಸ ಮಾಡುತ್ತಿದ್ದಾಗ ವಿಡಿಯೋ ಮಾಡಿ ತಪ್ಪು ಮಾಹಿತಿಯೊಂದಿಗೆ ಹರಿಬಿಟ್ಟಿದ್ದಾರೆ' ಎಂದು ತಿಳಿಸಿದ್ದಾರೆ.



# ಮಾನಸಿಕ ನೆಮ್ಮದಿ ನೀಡಿದ್ದು ವಿಜಯ್

ಸಂತೋಷ ಮತ್ತು ಶಾಂತಿ ನೀಡುವ ವ್ಯಕ್ತಿ ಜೊತೆ ಇರುವುದು ಮುಖ್ಯ ಎಂದಿರುವ ರಶ್ಮಿಕಾ, ವಿಜಯ್ ತಮ್ಮ ಜೀವನದಲ್ಲಿ ಎಷ್ಟು ವಿಶೇಷ ಎಂಬುದನ್ನು ವಿವರಿಸಿದ್ದಾರೆ. ಟಾಲಿವುಡ್ ಖ್ಯಾತ ನಟ ವಿಜಯ್ ದೇವರಕೊಂಡ ಹಾಗೂ ರಶ್ಮಿಕಾ ಮಂದಣ್ಣ ಪ್ರೀತಿಸಿ ಮದುವೆ ಆದರು. ಇಬ್ಬರೂ ಹಾಯಾಗಿ ಸಂಸಾರ ನಡೆಸಿಕೊಂಡು ಹೋಗುತ್ತಿದ್ದಾರೆ. ಮೇ 9 ವಿಜಯ್ ತಮ್ಮ 37ನೇ ವರ್ಷದ ಹುಟ್ಟುಹಬ್ಬವನ್ನು ಆಚರಿಸಿಕೊಳ್ಳುತ್ತಿದ್ದಾರೆ. ಈ ಬಾರಿಯ ಜನ್ಮದಿನ ಅವರಿಗೆ ಬಹಳ ವಿಶೇಷ. ಏಕೆಂದರೆ ವಿವಾಹದ ಬಳಿಕ ಅವರು ಆಚರಿಸಿಕೊಳ್ಳುತ್ತಿರುವ ಮೊದಲ ಹುಟ್ಟುಹಬ್ಬ. ಇಬ್ಬರೂ ವಿಶೇಷ ಸ್ಥಳಕ್ಕೆ ತೆರಳಿ ಹುಟ್ಟುಹಬ್ಬ ಆಚರಿಸಿಕೊಳ್ಳುತ್ತಿದ್ದಾರೆ ಎನ್ನಲಾಗಿದೆ. ಈ ಮಧ್ಯೆ ರಶ್ಮಿಕಾ ಅವರ ಹಳೆಯ ಹೇಳಿಕೆ ಒಂದು ವೈರಲ್ ಆಗಿದೆ. ಈ ಮೊದಲು ನೀಡಿದ ಸಂದರ್ಶನವೊಂದರಲ್ಲಿ ರಶ್ಮಿಕಾ ತಮ್ಮ ಕಹಿ ನೆನಪುಗಳ ಬಗ್ಗೆ ಮಾತನಾಡಿದ್ದರು. ಹಿಂದಿನ ಸಂಬಂಧವೊಂದರಲ್ಲಿ ತಾವು ಅನುಭವಿಸಿದ ಸಂಕಷ್ಟವನ್ನು ರಶ್ಮಿಕಾ ಸ್ಮರಿಸಿದ್ದರು. ಆ ಸಮಯದಲ್ಲಿ ತಮಗೆ ಮಾನಸಿಕ ನೆಮ್ಮದಿ ನೀಡಿದ್ದು ವಿಜಯ್ ಎಂದು ರಶ್ಮಿಕಾ ಹೇಳಿಕೊಂಡಿದ್ದರು. ಈ ಕಾರಣಕ್ಕೆ ರಶ್ಮಿಕಾಗೆ ವಿಜಯ್ ತುಂಬಾನೇ ಸ್ಪೆಷಲ್.

'ಯಾರೂ ಕೂಡ ಇಷ್ಟವಿಲ್ಲದ ಅಥವಾ ಒತ್ತಡದ ಸಂಬಂಧದಲ್ಲಿ ಬಲವಂತವಾಗಿ ಮುಂದುವರಿಯಬಾರದು. ಜೀವನದಲ್ಲಿ ಶಾಂತಿ ಮತ್ತು ಸಂತೋಷವನ್ನು ತರುವಂತಹ ವ್ಯಕ್ತಿಯೊಂದಿಗೆ ಇರುವುದು ಎಷ್ಟು ಮುಖ್ಯ ಎಂಬುದನ್ನು ನಾನು ಈಗ ಅರಿತುಕೊಂಡಿದ್ದೇನೆ' ಎಂದು ರಶ್ಮಿಕಾ ಹೇಳಿದ್ದರು.

'ಗರ್ಲ್‌ಫ್ರೆಂಡ್' ಸಿನಿಮಾ ವೇದಿಕೆ ಮೇಲೆ ವಿಜಯ್ ಬಗ್ಗೆ ಮಾತನಾಡಿದ್ದ ರಶ್ಮಿಕಾ, 'ಈ ಸಿನಿಮಾದ ಆರಂಭದಿಂದಲೂ ನೀನು ನನ್ನ ಜೊತೆಗಿದ್ದೆ. ಪ್ರತಿಯೊಬ್ಬರ ಜೀವನದಲ್ಲೂ ಒಬ್ಬ ವಿಜಯ್ ದೇವರಕೊಂಡ ಇರಲಿ ಎಂದು ನಾನು ಹಾರೈಸುತ್ತೇನೆ, ಏಕೆಂದರೆ ಅಂತಹ ವ್ಯಕ್ತಿ ಸಿಗುವುದು ಒಂದು ಆಶೀರ್ವಾದ' ಎಂದು ಭಾವುಕರಾಗಿದ್ದರು.






# ಐಪಿಎಲ್ ತಂಡಗಳಿಗೆ 7 ಪುಟಗಳ ಕಟ್ಟುನಿಟ್ಟಿನ ಮಾರ್ಗಸೂಚಿ ಪ್ರಕಟ

ಇಂಡಿಯನ್ ಪ್ರೀಮಿಯರ್ ಲೀಗ್ ವೇಳೆ ಆಟಗಾರರ ಸುರಕ್ಷತೆ ಮತ್ತು ಪಂದ್ಯದ ಪಾರದರ್ಶಕತೆಯನ್ನು ಕಾಪಾಡುವ ನಿಟ್ಟಿನಲ್ಲಿ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ ಮಹತ್ವದ ಹೆಜ್ಜೆ ಇರಿಸಿದೆ.

ಇತ್ತೀಚಿನ ದಿನಗಳಲ್ಲಿ ಕಂಡುಬಂದ ಕೆಲವು ಅಶಿಸ್ತಿನ ಘಟನೆಗಳನ್ನು ಗಂಭೀರವಾಗಿ ಪರಿಗಣಿಸಿರುವ ಬಿಸಿಸಿಐ, ಎಲ್ಲಾ 10 ಫ್ರಾಂಚೈಸಿಗಳಿಗೆ 7 ಪುಟಗಳ ವಿಸ್ತೃತ ಮಾರ್ಗಸೂಚಿಯನ್ನು ಬಿಡುಗಡೆ ಮಾಡಿದೆ.

**ಹನಿ ಟ್ರ್ಯಾಪ್ ಬಗ್ಗೆ ಎಚ್ಚರಿಕೆ:** ಆಟಗಾರರು ಮತ್ತು ಸಿಬ್ಬಂದಿಗಳು 'ಹನಿ ಟ್ರ್ಯಾಪ್' ಜಾಲಕ್ಕೆ ಬೀಳದಂತೆ ಬಿಸಿಸಿಐ ಎಚ್ಚರಿಸಿದೆ. ಅಪರಿಚಿತ ವ್ಯಕ್ತಿಗಳೊಂದಿಗೆ ಸಾಮಾಜಿಕ ಜಾಲತಾಣಗಳಲ್ಲಿ ಅಥವಾ ಹೊರಗಡೆ ವ್ಯವಹರಿಸುವಾಗ ಹೆಚ್ಚಿನ ಜಾಗರೂಕತೆ ವಹಿಸುವಂತೆ ಸೂಚಿಸಲಾಗಿದೆ.

**ಹೋಟೆಲ್ ಕೊಠಡಿಗಳಿಗೆ ನಿರ್ಬಂಧ:** ತಂಡದ ವ್ಯವಸ್ಥಾಪಕರ ಪೂರ್ವಾನುಮತಿ ಇಲ್ಲದೆ ಯಾವುದೇ ಹೊರಗಿನ ವ್ಯಕ್ತಿಗಳು ಆಟಗಾರರ ಅಥವಾ ಕೋಚಿಂಗ್ ಸಿಬ್ಬಂದಿಯ ಹೋಟೆಲ್ ಕೊಠಡಿಗಳಿಗೆ ಪ್ರವೇಶಿಸುವಂತಿಲ್ಲ. ಭೇಟಿಗಾಗಿ ಹೋಟೆಲ್‌ನ ಸಾರ್ವಜನಿಕ ಸ್ಥಳಗಳನ್ನು ಮಾತ್ರ ಬಳಸಲು ಸೂಚಿಸಲಾಗಿದೆ.

**ಸಂಚಾರಕ್ಕೆ ಅನುಮತಿ ಕಡ್ಡಾಯ:** ಆಟಗಾರರು ಅಥವಾ ಸಿಬ್ಬಂದಿ ಹೋಟೆಲ್ ಆವರಣದಿಂದ ಹೊರಗೆ ಹೋಗಬೇಕಾದಲ್ಲಿ, ನಿಯೋಜಿತ ಭದ್ರತಾ ಸಂಪರ್ಕ ಅಧಿಕಾರಿಗಳಿಂದ ಕಡ್ಡಾಯವಾಗಿ ಅನುಮತಿ ಪಡೆಯಬೇಕು. ಎಲ್ಲಿಗೆ ಹೋಗುತ್ತಿದ್ದಾರೆ ಎಂಬ ಮಾಹಿತಿಯನ್ನು ನೀಡುವುದು ಕಡ್ಡಾಯ.

ಸ್ಟೇಡಿಯಂ, ಹೋಟೆಲ್ ಮತ್ತು ಅಭ್ಯಾಸದ ಅವಧಿಯಲ್ಲಿ ಆಟಗಾರರು, ಅಧಿಕಾರಿಗಳು ಮತ್ತು ಸಿಬ್ಬಂದಿ ಯಾವಾಗಲೂ ತಮ್ಮ ಮಾನ್ಯತಾ ಕಾರ್ಡ್‌ಗಳನ್ನು ಧರಿಸಿರಬೇಕು. ಇದು ಭದ್ರತಾ ತಪಾಸಣೆಯನ್ನು ಸುಗಮಗೊಳಿಸಲು ಸಹಕಾರಿ.

**ಮಾಲೀಕರಿಗೆ ಡಗೌಟ್ ನಿರ್ಬಂಧ:** ಪಂದ್ಯ ನಡೆಯುತ್ತಿರುವ ಸಮಯದಲ್ಲಿ ತಂಡದ ಮಾಲೀಕರು ಡಗೌಟ್‌ನಲ್ಲಿರುವ ಆಟಗಾರರು ಅಥವಾ ಮ್ಯಾನೇಜರ್‌ಗಳೊಂದಿಗೆ ಸಂವಹನ ನಡೆಸುವುದನ್ನು ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ. ಪಂದ್ಯದ ಮೇಲೆ ಯಾವುದೇ ಬಾಹ್ಯ ಪ್ರಭಾವ ಬೀರದಂತೆ ಈ ಕ್ರಮ ಕೈಗೊಳ್ಳಲಾಗಿದೆ.

ಐಪಿಎಲ್‌ನಂತಹ ದೊಡ್ಡ ಮಟ್ಟದ ಟೂರ್ನಿಯಲ್ಲಿ ಭ್ರಷ್ಟಾಚಾರ ಮತ್ತು ಫಿಕ್ಸಿಂಗ್‌ನಂತಹ ಚಟುವಟಿಕೆಗಳು ಸಾಧ್ಯವಾದಷ್ಟು ನಡೆಯದಂತೆ ತಡೆಯುವುದು ಬಿಸಿಸಿಐನ ಮುಖ್ಯ ಉದ್ದೇಶವಾಗಿದೆ.

# ಐಪಿಎಲ್‌ನಲ್ಲಿ ಎಷ್ಟು ಶತಕಗಳು ಸಿಡಿದಿವೆ

2026 ರ ಐಪಿಎಲ್‌ನಲ್ಲಿ ಕಳಪೆ ಪ್ರದರ್ಶನದಿಂದಾಗಿ ಸತತ ಸೋಲುಗಳಿಗೆ ತುತ್ತಾಗಿದ್ದ ಕೋಲ್ಕತ್ತಾ ನೈಟ್ ರೈಡರ್ಸ್ ತಂಡ ಮತ್ತೆ ಲಯ ಕಂಡುಕೊಂಡಿದ್ದು, ಸತತ ನಾಲ್ಕನೇ ಪಂದ್ಯವನ್ನು ಗೆದ್ದುಕೊಂಡಿದೆ. ಅಜಿಂಕ್ಯ ರಹಾನೆ ನೇತೃತ್ವದ ತಂಡವು ಡೆಲ್ಲಿ ಕ್ಯಾಪಿಟಲ್ಸ್ ತಂಡವನ್ನು ಮಣಿಸುವ ಮೂಲಕ ನಾಲ್ಕನೇ ಗೆಲುವು ದಾಖಲಿಸಿತು. ತಂಡದ ಈ ಗೆಲುವಿನಲ್ಲಿ ಪ್ರಮುಖ ಪಾತ್ರವಹಿಸಿದ ಆರಂಭಿಕ ಆಟಗಾರ ಫಿನ್ ಅಲೆನ್ ಕೇವಲ 47 ಎಸೆತಗಳಲ್ಲಿ ಅಜೇಯ 100 ರನ್ ಬಾರಿಸಿದರು. ಈ ಮೂಲಕ 11 ವರ್ಷಗಳ ನಂತರ ಐಪಿಎಲ್‌ನಲ್ಲಿ ನ್ಯೂಜಿಲೆಂಡ್ ಬ್ಯಾಟ್ಸ್‌ಮನ್ ಒಬ್ಬ ಶತಕ ಬಾರಿಸಿದ ಸಾಧನೆಯನ್ನು ಮಾಡಿದರು.

ನವದೆಹಲಿಯ ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ನಡೆದ ಈ ಪಂದ್ಯದಲ್ಲಿ ಅಬ್ಬರದ ಇನ್ನಿಂಗ್ಸ್ ಆಡಿದ ಫಿನ್ ಅಲೆನ್ ಸಿಕ್ಸರ್ ಬಾರಿಸುವ ಮೂಲಕ ತಮ್ಮ ಶತಕವನ್ನು ಪೂರೈಸಿದರು. ತಮ್ಮ ಇನ್ನಿಂಗ್ಸ್‌ನಲ್ಲಿ ಅಲೆನ್ ಐದು ಬೌಂಡರಿಗಳು ಹಾಗೂ10 ಸಿಕ್ಸರ್‌ಗಳನ್ನು ಬಾರಿಸಿದರು. ಈ ಮೂಲಕ ಅವರು ಐಪಿಎಲ್‌ನಲ್ಲಿ ಶತಕ ಗಳಿಸಿದ ಎರಡನೇ ನ್ಯೂಜಿಲೆಂಡ್ ಬ್ಯಾಟ್ಸ್‌ಮನ್ ಎನಿಸಿಕೊಂಡರು.

ಅವರಿಗಿಂತ ಮೊದಲು, ಬ್ರೆಂಡನ್ ಮೆಕಲಮ್ 2008 ರಲ್ಲಿ ಮತ್ತು 2015 ರಲ್ಲಿ ಶತಕಗಳು ಬಾರಿಸಿದ್ದರು.

ಐಪಿಎಲ್‌ನಲ್ಲಿ ಇಲ್ಲಿಯವರೆಗೆ ಎಷ್ಟು ಶತಕಗಳು ದಾಖಲಾಗಿವೆ. ಹಾಗೆಯೇ ಯಾವ ದೇಶದ ಆಟಗಾರರು ಹೆಚ್ಚು ಶತಕಗಳನ್ನು ಬಾರಿಸಿದ್ದಾರೆ ಎಂಬ ಪ್ರಶ್ನೆಗಳು ಎಲ್ಲರ ಮನದಲ್ಲಿ ಮೂಡಿರುತ್ತದೆ. ಅಂತಹ ಪ್ರಶ್ನೆಗೆ ಉತ್ತರ ಇಲ್ಲಿದೆ. ಮೊದಲ ಪ್ರಶ್ನೆಗೆ ಉತ್ತರ 122. ಅಂದರೆ ಐಪಿಎಲ್ ಇತಿಹಾಸದ ಮೊದಲ ಪಂದ್ಯದಿಂದ ಇಲ್ಲಿಯವರೆಗೆ ಒಟ್ಟು 122 ಶತಕಗಳು ದಾಖಲಾಗಿವೆ. ಆಶ್ಚರ್ಯಕರವೆಂದರೆ, ಮೊದಲ ಶತಕ ಗಳಿಸಿದ ಮೆಕಲಮ್‌ನ ದೇಶವಾದ ನ್ಯೂಜಿಲೆಂಡ್‌ನಿಂದ ಕೇವಲ 3 ಶತಕಗಳು ಮಾತ್ರ ದಾಖಲಾಗಿವೆ, ಅದರಲ್ಲಿ 2 ಶತಕಗಳು ಮೆಕಲಮ್ ಬ್ಯಾಟ್‌ನಿಂದ ಸಿಡಿದಿವೆ.

ಎರಡನೇ ಪ್ರಶ್ನೆಗೆ ಉತ್ತರಕ್ಕೆ ಸಂಬಂಧಿಸಿದಂತೆ, ಊಹಿಸುವುದು ಕಷ್ಟವೇನಲ್ಲ. ಇದು ಭಾರತೀಯ ಟಿ20 ಲೀಗ್ ಆಗಿರುವುದರಿಂದ, ಸ್ಪಷ್ಟವಾಗಿ ಭಾರತೀಯ ಬ್ಯಾಟ್ಸ್‌ಮನ್‌ಗಳು ಅತಿ ಹೆಚ್ಚು ಶತಕಗಳನ್ನು ಬಾರಿಸಿದ್ದಾರೆ. ಐಪಿಎಲ್‌ನಲ್ಲಿ ಇದುವರೆಗೆ ದಾಖಲಾಗಿರುವ ಒಟ್ಟು 122 ಶತಕಗಳಲ್ಲಿ 63 ಶತಕಗಳನ್ನು ಭಾರತೀಯ ಬ್ಯಾಟ್ಸ್‌ಮನ್‌ಗಳು ಸಿಡಿಸಿದ್ದಾರೆ. ಇದರಲ್ಲಿ ಅಗ್ರಸ್ಥಾನದಲ್ಲಿರುವ ವಿರಾಟ್ ಕೊಹ್ಲಿ 8 ಶತಕಗಳನ್ನು ಬಾರಿಸಿದರೆ, ಕೆಎಲ್ ರಾಹುಲ್ 6 ಮತ್ತು ಸಂಜು ಸ್ಯಾಮ್ಸನ್ 5 ಶತಕಗಳನ್ನು ಸಿಡಿಸಿದ್ದಾರೆ.

ಈ ಪಟ್ಟಿಯಲ್ಲಿ ಆಸ್ಟ್ರೇಲಿಯಾ ಎರಡನೇ ಸ್ಥಾನದಲ್ಲಿದ್ದು, ಈ ದೇಶದ ಬ್ಯಾಟ್ಸ್‌ಮನ್‌ಗಳು 20 ಶತಕಗಳನ್ನು ಬಾರಿಸಿದ್ದಾರೆ. ಇಂಗ್ಲೆಂಡ್ 14 ಶತಕಗಳೊಂದಿಗೆ ಮೂರನೇ ಸ್ಥಾನದಲ್ಲಿದೆ.




# ಜೈಸ್ವಾಲ್‌ಗೆ 'ನಾಡಾ' ನೋಟಿಸ್

ಮೈದಾನದಲ್ಲಿ ಬೌಲರ್‌ಗಳ ಬೆವರಿಳಿಸುವ ಯಶಸ್ವಿ ಜೈಸ್ವಾಲ್ ಮತ್ತು ಶಫಾಲಿ ವರ್ಮಾ ಅವರಿಗೆ ಈಗ ನಡಾ ಬಿಸಿ ಮುಟ್ಟಿಸಿದೆ! ಉದ್ದೀಪನ ಮದ್ದು ಪರೀಕ್ಷೆಗೆ ಗೈರಾದ ಹಿನ್ನೆಲೆಯಲ್ಲಿ ಈ ಇಬ್ಬರು ಸ್ಟಾರ್ ಕ್ರಿಕೆಟಿಗರಿಗೆ ನೋಟಿಸ್ ನೀಡಲಾಗಿದ್ದು, ಮುಂದಿನ 7 ದಿನಗಳಲ್ಲಿ ಉತ್ತರ ನೀಡುವಂತೆ ಸೂಚಿಸಲಾಗಿದೆ. ಈ ಬೆಳವಣಿಗೆಯಿಂದಾಗಿ ಬಿಸಿಸಿಐ ಕೂಡ ಎಚ್ಚೆತ್ತುಕೊಂಡಿದ್ದು, ತನಿಖೆಗೆ ಮುಂದಾಗಿದೆ.

ಭಾರತೀಯ ಕ್ರಿಕೆಟ್‌ನ ಉದಯೋನ್ಮುಖ ತಾರೆಗಳಾದ ಯಶಸ್ವಿ ಜೈಸ್ವಾಲ್ ಮತ್ತು ಶಫಾಲಿ ವರ್ಮಾ ಅವರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಉದ್ದೀಪನ ಮದ್ದು ಸೇವನೆ ತಡೆ ಘಟಕದ ಅಧಿಕಾರಿಗಳು ನಡೆಸುವ ಡೋಪಿಂಗ್ ಪರೀಕ್ಷೆಗೆ ಗೈರಾಗಿರುವ ಕಾರಣ, ಈ ಇಬ್ಬರಿಗೆ ನಾಡಾ ನೋಟಿಸ್ ಜಾರಿ ಮಾಡಿದೆ.

ರಾಷ್ಟ್ರೀಯ ಉದ್ದೀಪನ ಮದ್ದು ವಿರೋಧಿ ಸಂಸ್ಥೆಯ ನಿಯಮದಂತೆ, 'ನೋಂದಾಯಿತ ಪರೀಕ್ಷಾ ಪೂಲ್'ನಲ್ಲಿರುವ ಕ್ರೀಡಾಪಟುಗಳು ತಾವು ಇರುವ ಸ್ಥಳದ ಮಾಹಿತಿಯನ್ನು ಮೊದಲೇ ನೀಡಬೇಕಾಗುತ್ತದೆ. ಆದರೆ, ನಿಗದಿಪಡಿಸಿದ ಸಮಯದಲ್ಲಿ ಯಶಸ್ವಿ ಜೈಸ್ವಾಲ್ ಮತ್ತು ಶಫಾಲಿ ವರ್ಮಾ ತಮ್ಮ ಸ್ಥಳಗಳಲ್ಲಿ ಇರಲಿಲ್ಲ ಎಂದು ವರದಿಯಾಗಿದೆ.




ಶಫಾಲಿ ವರ್ಮಾ: ನವೆಂಬರ್ 7, 2025 ರಂದು ಪರೀಕ್ಷೆಗೆ ಲಭ್ಯರಿರಲಿಲ್ಲ.

ಯಶಸ್ವಿ ಜೈಸ್ವಾಲ್: ಡಿಸೆಂಬರ್ 17, 2025 ರಂದು ಅಧಿಕಾರಿಗಳು ಭೇಟಿ ನೀಡಿದಾಗ ಸ್ಥಳದಲ್ಲಿ ಇರಲಿಲ್ಲ.

ಈ ಬೆಳವಣಿಗೆಯನ್ನು ಗಂಭೀರವಾಗಿ ಪರಿಗಣಿಸಿರುವ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ , ಆಟಗಾರರಿಂದ ವಿವರಣೆ ಕೇಳಲು ಮುಂದಾಗಿದೆ. ತಾಂತ್ರಿಕ ಕಾರಣಗಳಿಂದ ಅಥವಾ ಮಾಹಿತಿ ನೀಡುವಲ್ಲಿನ ವಿಳಂಬದಿಂದ ಹೀಗಾಗಿದೆಯೇ ಎಂಬ ಬಗ್ಗೆ ತನಿಖೆ ನಡೆಸುವುದಾಗಿ ಮಂಡಳಿ ತಿಳಿಸಿದೆ.

ವಾಡಾ ಮತ್ತು ನಾಡಾ ನಿಯಮಗಳ ಪ್ರಕಾರ, ಯಾವುದೇ ಕ್ರೀಡಾಪಟು 12 ತಿಂಗಳ ಅವಧಿಯಲ್ಲಿ ಸತತ ಮೂರು ಬಾರಿ ಪರೀಕ್ಷೆಗೆ ಲಭ್ಯವಾಗದಿದ್ದರೆ, ಅದನ್ನು ಉದ್ದೀಪನ ಮದ್ದು ನಿಯಮದ ಉಲ್ಲಂಘನೆ ಎಂದು ಪರಿಗಣಿಸಲಾಗುತ್ತದೆ. ಇಂತಹ ಸಂದರ್ಭದಲ್ಲಿ ಆಟಗಾರರಿಗೆ 2 ವರ್ಷಗಳವರೆಗೆ ನಿಷೇಧ ಹೇರುವ ಸಾಧ್ಯತೆ ಇರುತ್ತದೆ.


ಸದ್ಯಕ್ಕೆ ಇದು ಯಶಸ್ವಿ ಜೈಸ್ವಾಲ್ ಹಾಗೂ ಶಫಾಲಿ ವರ್ಮಾಗೆ ಮೊದಲ ನೋಟಿಸ್ ಆಗಿರುವುದರಿಂದ, ತಕ್ಷಣದ ನಿಷೇಧದ ಭೀತಿ ಇಲ್ಲದಿದ್ದರೂ, ಮುಂದಿನ ದಿನಗಳಲ್ಲಿ ಅವರು ಎಚ್ಚರಿಕೆ ವಹಿಸಬೇಕಿದೆ.

ನಡಾ ಸಂಸ್ಥೆಯು ಈ ಆಟಗಾರರಿಗೆ ತಮ್ಮ ವಿವರಣೆ ನೀಡಲು ಏಳು ದಿನಗಳ ಕಾಲಾವಕಾಶ ನೀಡಿದೆ. ಈ ಅವಧಿಯೊಳಗೆ ಅವರು ಸೂಕ್ತ ಕಾರಣಗಳನ್ನು ನೀಡಬೇಕಾಗುತ್ತದೆ. ಒಂದು ವೇಳೆ ವಿವರಣೆ ತೃಪ್ತಿಕರವಾಗಿಲ್ಲದಿದ್ದರೆ, ಇದನ್ನು ಅಧಿಕೃತವಾಗಿ 'ಮಿಸ್ಡ್ ಟೆಸ್ಟ್' ಎಂದು ದಾಖಲಿಸಲಾಗುತ್ತದೆ.

# ಆರ್‌ಸಿಬಿ ಗೆಲ್ಲಬೇಕಿದ್ದರೆ ಈ ಎರಡು ಬದಲಾವಣೆ ಮಾಡಲೇಬೇಕು!

ಇಂಡಿಯನ್ ಪ್ರೀಮಿಯರ್ ಲೀಗ್ ಸೀಸನ್-19 ರಲ್ಲಿ ಹಾಲಿ ಚಾಂಪಿಯನ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಮಿಶ್ರ ಫಲಿತಾಂಶಗಳನ್ನು ಕಾಣುತ್ತಿದೆ. ಮೊದಲಾರ್ಧದಲ್ಲಿ ಭರ್ಜರಿ ಪ್ರದರ್ಶನ ನೀಡಿದ್ದ ಆರ್‌ಸಿಬಿ, ದ್ವಿತೀಯಾರ್ಧದಲ್ಲಿ ಬ್ಯಾಕ್ ಟು ಬ್ಯಾಕ್ ಸೋಲನುಭವಿಸಿದೆ. ಈ ಸೋಲಿನ ಬೆನ್ನಲ್ಲೇ ತಂಡದ ಪ್ಲೇಯಿಂಗ್ ಇಲೆವೆನ್‌ನಲ್ಲಿ ಬದಲಾವಣೆ ಮಾಡಿಕೊಳ್ಳುವುದು ಅನಿವಾರ್ಯ ಎಂಬ ಮಾತುಗಳು ಕೇಳಿ ಬಂದಿವೆ. ಆ ಬದಲಾವಣೆಗಳಾವುವು ಅದರಿಂದ ಆರ್‌ಸಿಬಿ ತಂಡಕ್ಕೆ ಆಗುವ ಲಾಭಗಳೇನು ಎಂದು ನೋಡುವುದಾದರೆ. ರಾಯಲ್ ಚಾಲೆಂಜರ್ಸ್ ಬೆಂಗಳೂರು ಪರ ರೊಮಾರಿ ಶೆಫರ್ಡ್ ಈ ಬಾರಿ 10 ಪಂದ್ಯಗಳನ್ನಾಡಿದ್ದಾರೆ. ಈ ವೇಳೆ 55 ಎಸೆತಗಳನ್ನು ಎದುರಿಸಿದ ರೊಮಾರಿಯೊ ಕಲೆಹಾಕಿರುವುದು ಕೇವಲ 79 ರನ್‌ಗಳು. ಅದು ಕೂಡ 143.64ರ ಸ್ಟ್ರೈಕ್ ರೇಟ್‌ನಲ್ಲಿ. ಇನ್ನು ಬೌಲಿಂಗ್‌ನಲ್ಲಿ 102 ಎಸೆತಗಳನ್ನು ಎಸೆದಿರುವ ಅವರು ಬರೋಬ್ಬರಿ 222 ರನ್ ನೀಡಿದ್ದಾರೆ. ಅಂದರೆ ಪ್ರತಿ ಓವರ್‌ಗೆ 12.94ರ ಸರಾಸರಿಯಲ್ಲಿ ರನ್ ಬಿಟ್ಟು ಕೊಟ್ಟಿದ್ದಾರೆ. ಅಲ್ಲದೆ ಪಡೆದಿರುವುದು ಕೇವಲ 5 ವಿಕೆಟ್ ಮಾತ್ರ. ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ವಿಕೆಟ್ ಕೀಪರ್ ಬ್ಯಾಟರ್ ಜಿತೇಶ್ ಶರ್ಮಾ ಅವರ ಬ್ಯಾಟ್ ಈವರೆಗೆ ಸದ್ದು ಮಾಡಿಲ್ಲ. ಆಡಿದ 10 ಪಂದ್ಯಗಳಲ್ಲಿ ಕೇವಲ 59 ಎಸೆತಗಳನ್ನು ಎದುರಿಸಲಷ್ಟೇ ಶಕ್ತರಾಗಿರುವ ಜಿತೇಶ್ ಕಲೆಹಾಕಿದ್ದು ಕೇವಲ 64 ರನ್‌ಗಳು ಮಾತ್ರ. ಅಂದರೆ 10ರ ಸರಾಸರಿಯಲ್ಲಿ ಮಾತ್ರ ರನ್ ಗಳಿಸಿದ್ದಾರೆ. ಅಂದರೆ ಇಲ್ಲಿ ಆಲ್‌ರೌಂಡರ್ ಆಗಿ ರೊಮಾರಿಯೊ ಶೆಫರ್ಡ್ ಹಾಗೂ ಬ್ಯಾಟರ್ ಆಗಿ ಜಿತೇಶ್ ಶರ್ಮಾ ಸಂಪೂರ್ಣ ವಿಫಲರಾಗಿದ್ದಾರೆ. ಹೀಗಾಗಿ ಮುಂಬೈ ಇಂಡಿಯನ್ಸ್ ವಿರುದ್ಧದ ಪಂದ್ಯಕ್ಕೂ ಮುನ್ನ ಈ ಇಬ್ಬರನ್ನು ಪ್ಲೇಯಿಂಗ್ ಇಲೆವೆನ್‌ನಿಂದ ಕೈ ಬಿಡುವುದು ಸೂಕ್ತ. ಅವರ ಬದಲಿಗೆ. ರೊಮಾರಿಯೊ ಶೆಫರ್ಡ್ ಬದಲಿಗೆ ಆರ್‌ಸಿಬಿ ವೆಂಕಟೇಶ್ ಅಯ್ಯರ್ ಅವರನ್ನು ಆಲ್‌ರೌಂಡರ್ ಆಗಿ ಕಣಕ್ಕಿಳಿಸುವುದು ಉತ್ತಮ. ವೆಂಕಿ ಯಾವುದೇ ಕ್ರಮಾಂಕದಲ್ಲೂ ಬ್ಯಾಟಿಂಗ್ ಮಾಡಬಲ್ಲ ಸಾಮರ್ಥ್ಯ ಹೊಂದಿದ್ದಾರೆ. ಅದರ ಜೊತೆ ಒಂದೆರಡು ಓವರ್‌ಗಳನ್ನು ಸಹ ಎಸೆಯಬಲ್ಲರು. ಹೀಗಾಗಿ ಮುಂದಿನ ಪಂದ್ಯಗಳಲ್ಲಿ ರೊಮಾರಿಯೊ ಬದಲಿಗೆ ವೆಂಟಕೇಶ್ ಅಯ್ಯರ್‌ಗೆ ಚಾನ್ಸ್ ನೀಡುವುದು ಉತ್ತಮ. ವಿಕೆಟ್ ಕೀಪರ್ ಜಿತೇಶ್ ಶರ್ಮಾ ಬದಲಿಗೆ ಆರ್‌ಸಿಬಿ ಇಂಗ್ಲೆಂಡ್‌ನ ಸ್ಫೋಟಕ ದಾಂಡಿಗ ಜೋರ್ಡನ್ ಕಾಕ್ಸ್ ಅವರನ್ನು ಕಣಕ್ಕಿಳಿಸಬಹುದು. ಕಾಕ್ಸ್ ಕೂಡ ವಿಕೆಟ್ ಕೀಪರ್ ಬ್ಯಾಟರ್ ಆಗಿರುವುದರಿಂದ ಕೀಪಿಂಗ್ ಜವಾಬ್ದಾರಿ ನಿರ್ವಹಿಸಲಿದ್ದಾರೆ.






Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966